Digitization by eGangotri and Sarayu Trust. Funding by MoE-IKS

ಶ್ರೀ ಕಾಶೀಪೀಠದ ಪರಂಪರಾಪುರಾಣ

Q234:22
33M8

ಕವಿಗಳು

"ಗುರುಕವಿ" ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Q234:22 7189
33N8
Gang'adhara Shiva
Charya Swamiji
Kashi peethada
paramparapura
na.

CC0. In Public Domain. Jangamwadi Math Collection, Varanasi

Q234;22
33N8
Digitization by eGangotri and Sarayu Trust. Funding by MoE-IKS
7289

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಕಾಶೀ ಪೀಠದ ಪರಂಪರಾಪುರಾಣ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math. Varanasi
Acc. No. ....7189......................

ಕವಿಗಳು :
"ಗುರುಕವಿ"
ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯ ಸ್ವಾಮಿಗಳು
ಜಡೆಮಠ, ಮುರಬ ಮತ್ತು ಗುಡೂರು

ಪ್ರಕಾಶಕರು :
ಶ್ರೀ ವೀರಶೈವ ಅನುಸಂಧಾನ ಸಂಸ್ಥಾನ
ಜಂಗಮವಾಡಿಮಠ, ವಾರಾಣಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"SRI KASHI PEETHADA PARAMPARAPURANA"
by Sri Sha. Bra. Gangadhara Shivacharya Swamiji, Marab.
Published by : Sri Veerashaiva Anusandhana Sansthana
Jangamawadimath, Varanasi

First Edition : 1998
Price : Rs. 30-00

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7189

ಪ್ರಥಮ ಮುದ್ರಣ : ೧೯೯೮

ಗ್ರಂಥದ ಹಕ್ಕುಗಳು : ಶ್ರೀ ಕಾಶೀ ಮಹಾಪೀಠಕ್ಕೆ ಸೇರಿರುತ್ತವೆ.

ಬೆಲೆ : ರೂ. ೩೦-೦೦ (ಮೂವತ್ತು ರೂಪಾಯಿಗಳು)

Q234;22
33N8

ಗ್ರಂಥ ದೊರೆಯುವ ಸ್ಥಳ :

೧. ಡಾ. ಎಸ್. ಎಫ್. ಹಿರೇಮಠ,
ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮ
ನವನಗರ, ಹುಬ್ಬಳ್ಳಿ

೨. ಅಮರೇಶ್ವರಮಠ, ಗುಳೇದಗುಡ್ಡ
ತಾ : ಬದಾಮಿ ಜಿ : ಬಾಗಲಕೋಟ

* ಗ್ರಂಥ ದಾನಿಗಳು :
೧) ಡಾ. ಎಸ್. ಎಫ್. ಹಿರೇಮಠ
ನವನಗರ, ಹುಬ್ಬಳ್ಳಿ
೨) ಶ್ರೀ ಆರ್. ಆರ್. ಶೆಟ್ಟರಮಾಸ್ತರ
ಗುಳೇದಗುಡ್ಡ

ಮುದ್ರಕರು :
ಫ. ಶಿ. ಭಾಂಡಗೆ ✆ ೩೮೬೧೭
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ-೫೮೨೧೦೧
✆ ೩೫೫೧೯, ೩೭೫೬೬ (O), ೩೬೫೭೮ (R)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಕಾಶೀ ಜ್ಞಾನಸಿಂಹಾಸನಾಧೀಶ್ವರ

ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ

ಮಹಾಸ್ವಾಮಿಗಳು ಜಂಗಮವಾಡಿ ಮಠ, ವಾರಣಾಸಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮತ್ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ

ಶುಭಾಶೀರ್ವಾದ ಸಂದೇಶ

ಸನಾತನವಾದ ವೀರಶೈವ ಧರ್ಮದ ಪಂಚಪೀಠಗಳು ಅನಾದಿ ಕಾಲದಿಂದಲೂ ಸುಪ್ರಸಿದ್ಧವಾಗಿವೆ. ಪ್ರತಿಯೊಂದು ಪೀಠದಲ್ಲಿ ತನ್ನದೇ ಆದ ಐತಿಹಾಸಿಕ ದಾಖಲೆಗಳನ್ನೂ ಸಹ ಕಾಣಬಹುದಾಗಿದೆ. ಶಿವನ ಅಪ್ಪಣೆಯ ಮೇರೆಗೆ ಭೂಲೋಕದಲ್ಲಿ ಲಿಂಗೋದ್ಭವರಾಗಿ ಮೂಲ ಪಂಚಾಚಾರ್ಯರು ಕೇದಾರ, ಕಾಶೀ, ಶ್ರೀಶೈಲ, ಉಜ್ಜಯನಿ ಮತ್ತು ರಂಭಾಪುರಿಗಳಲ್ಲಿ ಪೀಠಗಳನ್ನು ಸಂಸ್ಥಾಪಿಸಿ ವೀರಶೈವ ಧರ್ಮದ ತತ್ತ್ವ ಬೋಧನೆಯನ್ನು ಪ್ರಥಮತಃ ಸುಪ್ರಸಿದ್ಧರಾದ ವ್ಯಾಸ, ದುರ್ವಾಸ, ಸಾನಂದ, ದಧೀಚಿ ಮತ್ತು ಅಗಸ್ತ್ಯ ಮಹರ್ಷಿಗಳಿಗೆ ಬೋಧಿಸಿರುವ ವಿಷಯವು ಸರ್ವಜನ ವಿದಿತವಾಗಿದೆ. ಈ ಪ್ರತಿಯೊಂದು ಪೀಠದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದ ಆಚಾರ್ಯ ಪರಂಪರೆ ಅವರು ಮಾಡಿದ ಸಮಾಜ ಸುಧಾರಣೆ, ತತ್ತ್ವ ಬೋಧೆ ಮುಂತಾದವುಗಳ ದಾಖಲೆಯು ಅತ್ಯಂತ ಆವಶ್ಯಕವಾದುದು. ಸನಾತನಗಳಾದ ಈ ಪಂಚಪೀಠಗಳ ಅದೆಷ್ಟೋ ದಾಖಲೆಗಳು ಕಾಲಗರ್ಭದಲ್ಲಿ ಅಡಗಿಹೋಗಿವೆ. ಇಂದು ಅವುಗಳನ್ನು ಸಂಶೋಧಿಸಿ ಹೊರತೆಗೆದು ಜನರಿಗೆ ಪರಿಜ್ಞಾನವನ್ನುಂಟುಮಾಡುವ ಕಾರ್ಯವನ್ನು ಅನೇಕ ಜನ ಸಂಶೋಧಕರು, ಇತಿಹಾಸ ಹಾಗೂ ಪುರಾಣಗಳ ಲೇಖಕರು ಮಾಡುತ್ತ ಬಂದಿದ್ದಾರೆ. ಪುರಾಣವೂ ಸಹ ಪ್ರಾಚೀನ ಪರಂಪರೆಯ ಇತಿಹಾಸವೇ.

ಪಂಚಪೀಠಗಳಲ್ಲೊಂದಾದ ಶ್ರೀ ಕಾಶೀ ಮಹಾಪೀಠವೂ ಸಹ ತನ್ನದೇ ಆದ ಒಂದು ಐತಿಹಾಸಿಕ ಪರಂಪರೆಯನ್ನು ಹೊಂದಿರುವಂತಹದಾಗಿದೆ. ಈ ಪೀಠ ಪರಂಪರೆಯಲ್ಲಿ ಕೃತಯುಗದೊಳು ಪಂಚಾಕ್ಷರ ಶಿವಾಚಾರ್ಯರು, ತ್ರೇತಾಯುಗದೊಳು ಪಂಚವಕ್ತ್ರ ಶಿವಾಚಾರ್ಯರು, ದ್ವಾಪರಯುಗದೊಳು ವಿಶ್ವಕರ್ಣ ಶಿವಾಚಾರ್ಯರು ಮತ್ತು ಕಲಿಯುಗದೊಳು ವಿಶ್ವಾರಾಧ್ಯ ಶಿವಾಚಾರ್ಯರು ಪೀಠದ ಪ್ರಥಮಾಚಾರ್ಯರಾಗಿ ಶಿವನ ಆಣತಿಯ ಮೇರೆಗೆ ಅವತರಿಸಿ ಭೂಲೋಕದಲ್ಲಿ ವೀರಶೈವ ಧರ್ಮವನ್ನು ಸಂಸ್ಥಾಪಿಸಿ ಮನುಕುಲವನ್ನು ಉದ್ಧರಿಸಿದ್ದಾರೆ.

ಈ ಪೀಠ ಪರಂಪರೆಯ ದ್ವಾಪರಯುಗದ ಆಚಾರ್ಯರಾದ ವಿಶ್ವಕರ್ಣ ಶಿವಾಚಾರ್ಯರು ಸುಪ್ರಸಿದ್ಧನಾದ ದುರ್ವಾಸ ಮಹರ್ಷಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿದ ವಿಷಯವು ಶಿವಾಗಮಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕ್ರೋಧವೇ ಮೂರ್ತಿವೆತ್ತು ಬಂದಂತಿರುವ ಈ ದುರ್ವಾಸನಿಗೆ ವಿಶ್ವಕರ್ಣರು ತತ್ತ್ವೋಪದೇಶವನ್ನು ಮಾಡಿ ಆತನನ್ನು ಶಾಂತನೂ, ಪರಮಜ್ಞಾನಿಯೂ ಆಗುವಂತೆ ಅನುಗ್ರಹಿಸಿದರು. ಕಾಮ-ಕ್ರೋಧಾದಿ ಅರಿಷಡ್ವರ್ಗಗಳನ್ನು ಜಯಿಸಬೇಕಾದರೆ ಜ್ಞಾನವೇ ಮುಖ್ಯ ಸಾಧನವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತೆಯೇ ಭಗವತ್ಪಾದರಾದ ವಿಶ್ವಕರ್ಣ ಶಿವಾಚಾರ್ಯರು ತಮ್ಮ ಜ್ಞಾನಾಮೃತವನ್ನು ದುರ್ವಾಸನಿಗೆ ಅನುಗ್ರಹಿಸಿ, ಆವನನ್ನು ಶಾಂತಸ್ವರೂಪನನ್ನಾಗಿ ಮಾಡಿ ಲೋಕ ಕಲ್ಯಾಣಗೈದಿದ್ದಾರೆ. ಅಂತೆಯೇ ಕಾಶೀ ಮಹಾ ಪೀಠಕ್ಕೆ ಜ್ಞಾನಪೀಠ ಅಥವಾ ಜ್ಞಾನ ಸಿಂಹಾಸನ ಎಂಬುದಾಗಿ ಕರೆಯುತ್ತಾರೆ.

ಈ ಪೀಠ ಪರಂಪರೆಯ ಕಲಿಯುಗದ ಪ್ರಥಮಾಚಾರ್ಯರೇ ಶ್ರೀ ಜಗದ್ಗುರು ವಿಶ್ವಾರಾಧ್ಯರು. ಶಿವನ ಈಶಾನ ಮುಖ ಸಂಜಾತರಾದ ಇವರು ಕಾಶೀ ಮಹಾಕ್ಷೇತ್ರದಲ್ಲಿ ಸುಪ್ರಸಿದ್ಧರಾದ ವಿಶ್ವನಾಥ ಜ್ಯೋತಿರ್ಲಿಂಗದಿಂದ ಆವಿರ್ಭವಿಸಿ ವಿಶ್ವಕರ್ಣರಿಂದ ಸಂಸ್ಥಾಪಿತವಾದ ಜ್ಞಾನಪೀಠದ ಆರೋಹಣಗೈದು ವೀರಶೈವ ಸಿದ್ಧಾಂತವನ್ನು ಬೋಧಿಸಿದ್ದಾರೆ. ಉತ್ತರ ಭಾರತದ ಅನೇಕ ಕಡೆಗಳಲ್ಲಿ ಸಂಚರಿಸಿ, ಜನರಲ್ಲಿ ಶಿವಾದ್ವೈತ (ವೀರಶೈವ) ಸಿದ್ಧಾಂತವನ್ನು ಬೋಧಿಸಿ ಪ್ರಖ್ಯಾತರಾದರು. ಬಿಲ್ವದಂಡ, ಸುವರ್ಣ ಕಮಂಡಲುಧಾರಿಗಳಾದ ಇವರು ಸ್ಕಂದ ಗೋತ್ರದ ಅಧಿಪತಿಗಳಾಗಿದ್ದಾರೆ. ಜನರಿಗೆಲ್ಲ ತಮ್ಮ ಜ್ಞಾನೋಪದೇಶದಿಂದ ಮಾನವೀಯ ಮೌಲ್ಯಗಳನ್ನು ತಿಳಿಸಿ ಜನರ ಮನಸ್ಸುಗಳನ್ನು ಪರಿವರ್ತಿಸಿ ಅವರ ಜೀವನವನ್ನು ಪಾವನಗೊಳಿಸಿದ್ದಾರೆ.

ವಿಶ್ವದಲ್ಲಿಯೇ ವಿದ್ಯಾಕೇಂದ್ರವೆಂದು ಪ್ರಸಿದ್ಧವಾಗಿರುವ ಕಾಶೀ ಮಹಾಕ್ಷೇತ್ರದಲ್ಲಿ ಈ ಮಹಾಪೀಠವು ಜ್ಞಾನಪೀಠವೆಂದು ಪ್ರಖ್ಯಾತಿಯನ್ನು ಪಡೆದಿರಬೇಕಾದರೆ ಆ ಪೀಠಾಚಾರ್ಯರ ಜ್ಞಾನದ ಮಹತಿ ಎಷ್ಟಿರಬೇಕೆಂಬುದನ್ನು ಊಹಿಸಬಹುದಾಗಿದೆ. ಈ ಪೀಠ ಪರಂಪರೆಯ ಕಲಿಯುಗದ ಪ್ರಥಮಾಚಾರ್ಯರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರು ಹನ್ನೊಂದುನೂರು ವರ್ಷಗಳವರೆಗೆ ಭೂಲೋಕದಲ್ಲಿದ್ದು ಅನಂತ ಲೀಲೆಗಳನ್ನೆಸಗಿ ತಮ್ಮ ಶಿಷ್ಯನಾದ ಮಲ್ಲಿಕಾರ್ಜುನ ಶಿವಾಚಾರ್ಯರಿಗೆ ಜ್ಞಾನಪೀಠದ ಅಧಿಕಾರವನ್ನು ಅನುಗ್ರಹಿಸಿ ತಾವು ಪುನಃ ಆ ವಿಶ್ವನಾಥ ಜ್ಯೋತಿರ್ಲಿಂಗದಲ್ಲಿಯೇ ಅಂತರ್ಧಾನರಾದರು.

ಶ್ರೀ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರ ತರುವಾಯ ಅಧಿಕಾರಕ್ಕೆ ಬಂದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರು ಕ್ರಿ.ಶ. ಪೂರ್ವ (B.C.) ೨೦೪೦ ರಲ್ಲಿ ಪೀಠಾಧಿಕಾರಿಗಳಾಗಿದ್ದರೆಂದು ಈ ಪೀಠ ಪರಂಪರೆಯ ಜಗದ್ಗುರುಗಳವರ ವಂಶಾವಳಿಯಿಂದ ತಿಳಿದುಬರುತ್ತದೆ. ಇವರು ತಮ್ಮ ಯೋಗ ಸಾಮರ್ಥ್ಯದಿಂದ ೩೧೧ ವರ್ಷಗಳವರೆಗೆ ಪೀಠಾಧ್ಯಕ್ಷರಾಗಿದ್ದು ಅನೇಕ ಲೋಕ ಕಲ್ಯಾಣ ಕಾರಕ ಕಾರ್ಯಗಳನ್ನೆಸಗಿ ಕೊನೆಗೆ ತಮ್ಮ ಶಿಷ್ಯನೋರ್ವನಿಗೆ ಪೀಠಾಧಿಕಾರವನ್ನು ವಹಿಸಿ ಸಜೀವ ಸಮಾಧಿಯನ್ನು ಪಡೆದುಕೊಂಡರು. ಸದ್ಯಃ ಶ್ರೀ ಪೀಠದಲ್ಲಿ ಅವರ ಆ ಸಮಾಧಿಸ್ಥಾನವನ್ನೇ ಮೂಲ ಕರ್ತೃ ಗದ್ದುಗೆಯನ್ನಾಗಿ ಭಾವಿಸಿ ಪೂಜಿಸಲಾಗುತ್ತಿದೆ.

ಕರ್ತೃ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು ಅತ್ಯಂತ ಮಹಿಮಾಶಾಲಿಗಳಾದ್ದರಿಂದ ಈ ಪೀಠಕ್ಕೆ ಮುಂದೆ ಮುಂದೆ ಉತ್ತರಾಧಿಕಾರಿಗಳಾಗಿ ಬಂದ ಮಹಾಸ್ವಾಮಿಗಳಿಗೆಲ್ಲ ಅವರ ಹೆಸರೇ ರೂಢನಾಮವಾಗಿ ಪ್ರಚಲಿತದಲ್ಲಿ ಬಂದಿತು. ಅಂತೆಯೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಕರ್ತೃ ಮಹಾಸ್ವಾಮಿಗಳ ತರುವಾಯ ಈ ಪೀಠಕ್ಕೆ ಬಂದ ಎಪ್ಪತ್ತೇಳು (೭೭) ಜನ ಮಹಾಸ್ವಾಮಿಗಳು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರೆಂದೇ ಖ್ಯಾತನಾಮರಾಗಿದ್ದಾರೆ.

ಐತಿಹಾಸಿಕ ದಾಖಲೆಗಳು

ಶ್ರೀ ಕಾಶೀ ಮಹಾಪೀಠವು ಕೇವಲ ಪೌರಾಣಿಕ ದಾಖಲೆಗಳಿಂದ ಕೂಡಿದ್ದಲ್ಲ. ಆದರೆ ಅತಿ ಮಹತ್ತ್ವಪೂರ್ಣಗಳಾದ ಐತಿಹಾಸಿಕ ದಾಖಲೆಗಳನ್ನೂ ಸಹ ಇದು ಹೊಂದಿರುವಂತಹದ್ದಾಗಿದೆ. ಶ್ರೀ ಮಹಾಪೀಠದಲ್ಲಿ ಇಂದು ಉಪಲಬ್ಧವಿರುವ ದಾನ ಪತ್ರಗಳಲ್ಲಿ ಕಾಶೀರಾಜನಾದ ಜಯನಂದದೇವನಿಂದ ಕೊಡಲ್ಪಟ್ಟ ದಾನಪತ್ರವೇ ಅತಿ ಪ್ರಾಚೀನವಾದುದು. ಕ್ರಿ. ಶ. ೫೫೩ ರಿಂದ ೬೭೪ ರ ವರೆಗೆ ಅಂದರೆ ೧೨೧ ವರ್ಷ ಪೀಠಾಧ್ಯಕ್ಷರಾಗಿದ್ದ ಈ ಪೀಠ ಪರಂಪರೆಯ ೫೧ನೇ ಆಚಾರ್ಯರಾದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಈ ದಾನಪತ್ರವು ಅರ್ಪಿಸಲ್ಪಟ್ಟುದುದಾಗಿದೆ. ಅಂದಿನ ಕಾಶೀ ಮಹಾರಾಜನು ವಿಕ್ರಮ ಸಂವತ್ ೯೩೧ (ಕ್ರಿ.ಶ. ೫೭೪)ರಲ್ಲಿ ಪ್ರಬೋಧಿನೀ ಏಕಾದಶಿ (ಕಾರ್ತಿಕ ಶುದ್ಧ ಏಕಾದಶಿ) ದಿನದಂದು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಭೂದಾನವನ್ನು ಮಾಡಿ ದಾನ ಶಾಸನವನ್ನು ಬರೆದುಕೊಟ್ಟಿದ್ದಾನೆ. ಇಂದಿಗೆ ಹದಿನಾಲ್ಕು ನೂರು ಇಪ್ಪತ್ನಾಲ್ಕು (೧೪೨೪) ವರ್ಷ ಪ್ರಾಚೀನವಾದ ಈ ದಾನಪತ್ರವು ಶ್ರೀ ಪೀಠದಲ್ಲಿ ಸುರಕ್ಷಿತವಾಗಿ ಇದೆ.

ಕಾಶೀ ಮಹಾರಾಜರಿಂದ ಕೊಡಲ್ಪಟ್ಟ ಆ ಭೂಮಿಯಲ್ಲಿಯೇ ಪೀಠಾಚಾರ್ಯರು ಒಂದು ಜಂಗಮಪುರವನ್ನು ಸ್ಥಾಪಿಸಿ ಅಲ್ಲಿ ಅನೇಕ ಗೋವುಗಳನ್ನು ಪರಿಪಾಲಿಸಿ ಗೋವಿನ ಪಂಚಗವ್ಯಗಳ ಮಹತ್ತ್ವವನ್ನು ಜನರಿಗೆ ತಿಳಿಯಪಡಿಸಿದ್ದಾರೆ. ಆ ಸ್ಥಾನದಲ್ಲಿ ಸಹಸ್ರಾರು, ಗೋವುಗಳು ಗೋಪಾಲರು ಹಾಗೂ ಇತರ ಸಿಬ್ಬಂದಿ ವರ್ಗದವರು ನಿವಾಸಿಸತೊಡಗಿದರು. ಹೀಗೆ ಆ ಕ್ಷೇತ್ರದಲ್ಲಿ ಜಂಗಮಪುರವು ಪ್ರಖ್ಯಾತಿಯನ್ನು ಪಡೆಯಿತು. ಇಂದಿಗೂ ಸಹ ಆ ಜಂಗಮಪುರವು ವಿದ್ಯಮಾನವಾಗಿದೆ.

ಕ್ರಿ.ಶ. ೧೯೧೬ ರಂದು ಮದನಮೋಹನ ಮಾಲವೀಯರವರು ಕಾಶೀ ಕ್ಷೇತ್ರದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವದಕ್ಕಾಗಿ ಸ್ಥಳಪರೀಕ್ಷೆಯನ್ನು ಮಾಡುತ್ತಿರಲು ಅವರಿಗೆ ಈ ಕಾಶೀ ಮಹಾಪೀಠದ ಗಂಗಾ ನದೀ ದಂಡೆಯಲ್ಲಿರುವ ಜಂಗಮಪುರ ಪರಿಸರವೇ ಹೆಚ್ಚು ಅನುಕೂಲವಾಗಿ ತೋರಿತು. ಆಗ ಅಂದಿನ ಪೀಠ ಪರಂಪರೆಯ ಎಂಭತ್ತೆರಡನೆಯ ಜಗದ್ಗುರುಗಳಾಗಿದ್ದ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರಿಂದ ಆ ಭೂಮಿಯನ್ನು ಪಡೆದು ಜಂಗಮಪುರಕ್ಕೆ ಪಕ್ಕದಲ್ಲಿ ಸ್ಥಳಾವಕಾಶವನ್ನು ಮಾಡಿ ಕೊಟ್ಟು ಜಂಗಮಪುರದ ಸ್ಥಾನದಲ್ಲಿಯೇ ವಿಶ್ವವಿಖ್ಯಾತವಾದ ಕಾಶೀ ಹಿಂದೂ ವಿಶ್ವ-ವಿದ್ಯಾಲಯವನ್ನು ಸಂಸ್ಥಾಪಿಸಿದ್ದಾರೆ. ಆ ವಿಶ್ವವಿದ್ಯಾಲಯದ ಆವರಣದಲ್ಲಿ ಇಂದಿಗೂ ಜಂಗಮಪುರದ ಶಿಲಾಶಾಸನ ಮತ್ತು ಪೂರ್ವಾಚಾರ್ಯರ ಕೆಲವೊಂದು ಸಮಾಧಿಮಂದಿರಗಳು ಕಂಗೊಳಿಸುತ್ತವೆ. ಹೀಗೆ ಕಾಶೀ ಜಯನಂದದೇವ ಮಹಾರಾಜನ ಈ ದಾನ ಶಾಸನವು ಕಾಶೀ ಪೀಠದ ದಾಖಲೆಗಳಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದೂ ಅಲ್ಲದೆ ಮುಸ್ಲಿಮ್ ಚಕ್ರವರ್ತಿಗಳಾದ ಹುಮಾಯೂನ್, ಅಕಬರ್, ಜಹಾಂಗೀರ್, ಶಹಾಜಹಾನ್, ಔರಂಗಜೇಬ್ ಮತ್ತು ಮಹಮ್ಮದಶಹಾ ಬಾದಶಹರುಗಳು ಶ್ರೀ ಕಾಶೀ ಮಹಾಪೀಠಕ್ಕೆ ಭೂ-ದಾನಾದಿಗಳನ್ನು ಮಾಡಿ ಬರೆದುಕೊಟ್ಟ ೧೭ (ಫರಮಾನ್) ದಾನಪತ್ರಗಳು ಶ್ರೀ ಪೀಠದಲ್ಲಿ ಇಂದಿಗೂ ದಾಖಲೆಯಾಗಿವೆ. ಮೊಗಲ ಚಕ್ರವರ್ತಿಗಳ ಈ ಎಲ್ಲ ದಾನ ಶಾಸನಗಳು ಕಾಶೀ ಮಹಾಪೀಠದ ೭೧ ರಿಂದ ೭೭ ನೇ ಪೀಠಾಧ್ಯಕ್ಷರ ಸಮಯದಲ್ಲಿ ಕೊಡಲ್ಪಟ್ಟಿವೆ.

ನೇಪಾಳ ದೇಶದ ಭಕ್ತಪುರದಲ್ಲಿಯೂ ಶ್ರೀ ಕಾಶೀ ಮಹಾಪೀಠದ ಒಂದು ಶಾಖಾಮಠವಿದ್ದು ಅದನ್ನು ಸದ್ಯಃ ಜಂಗಮಮಠವೆಂದು ಕರೆಯಲಾಗುತ್ತಿದೆ. ಈ ಮಠಕ್ಕೆ ವಿಕ್ರಮ ಸಂವತ್ ೬೯೩ (ಕ್ರಿ. ಶ. ೬೧೮) ಜೇಷ್ಠ ಶುದ್ಧ ಅಷ್ಟಮಿಯ ದಿನದಂದು ನೇಪಾಳ ದೇಶದ ಅಂದಿನ ಮಹಾರಾಜನಾದಂಥ ಶ್ರೀ ವಿಶ್ವಮಲ್ಲನು ಈ ಪೀಠದ ೫೧ ನೇ ಪೀಠಾಧಿಪತಿಯಾಗಿದ್ದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯ ಭಗವತ್ಪಾದರಿಗೆ ಭೂದಾನವನ್ನು ಮಾಡಿದ್ದಾನೆ. ಕಲ್ಲಿನಲ್ಲಿ ಕೆತ್ತಿಸಲ್ಪಟ್ಟ ಆ ದಾನಶಾಸನವು ಇಂದಿಗೂ ಆ ಮಠದಲ್ಲಿ ವಿರಾಜಿಸುತ್ತದೆ. ಅಲ್ಲಿಯ ಜಂಗಮ ಮಠದಲ್ಲಿ ಗೃಹಸ್ಥಾಶ್ರಮಿಗಳಾದ ಜಂಗಮರು ಅಲ್ಲಿಯ ಪೂಜಾ-ವಿಧಾನಗಳನ್ನು ನಡೆಸಿಕೊಂಡು ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಲಿದ್ದಾರೆ. ನೇಪಾಳ ದೇಶದಲ್ಲಿ ೧೦೦ ಜಂಗಮ ಪರಿವಾರಗಳು ಇಂದಿಗೂ ಇವೆ. ಅದೆಷ್ಟೋ ಜನರಿಗೆ ಇದರ ಪರಿಚಯವಿರುವದಿಲ್ಲ. ಇತ್ತೀಚೆಗೆ ವೀರಶೈವ ಪಂಚಪೀಠಗಳ ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಶೋಧನಾ ಕಾರ್ಯ ಮಾಡುತ್ತಿರುವ ರಾಜಶೇಖರ ಮಠಪತಿ ಗೋರಟಾ ಈತನು ನೇಪಾಳಕ್ಕೆ ಹೋಗಿ ಅಲ್ಲಿಯ ಸದ್ಯದ ಎಲ್ಲ ದಾಖಲೆಗಳನ್ನು ಸಂಗ್ರಹಿಸಿಕೊಂಡು ಬಂದಿರುವದು ಅತ್ಯಂತ ಸಂತೋಷದ ವಿಷಯವಾಗಿದೆ. ನೇಪಾಳ ದೇಶದ ಜಂಗಮರು ಕಾಲ ಕಾಲಕ್ಕೆ ಕಾಶೀ ಮಹಾಪೀಠಕ್ಕೆ ಬಂದು ಲಿಂಗದೀಕ್ಷೆ ಮತ್ತು ಮಂತ್ರೋಪದೇಶದ ಸಂಸ್ಕಾರಗಳನ್ನು ಪಡೆದುಕೊಂಡು ಹೋಗುತ್ತಲಿದ್ದಾರೆ.

ಅದರಂತೆ ಬುದ್ಧಗಯಾ ಕ್ಷೇತ್ರದ ಕಿಶೋರಿಯಾ ಮೊಹಲ್ಲಾ (ಓಣಿ)ದಲ್ಲಿ ಮತ್ತು ಪ್ರಯಾಗ ಕ್ಷೇತ್ರದ ದಾರಾಗಂಜ ಮೊಹಲ್ಲಾದಲ್ಲಿ ಶ್ರೀಕಾಶೀ ಮಹಾಪೀಠದ ಎರಡು ಖಾಸಾ ಶಾಖಾಮಠಗಳು ಇದ್ದು ಅವುಗಳ ವ್ಯವಸ್ಥೆಯು ಇಂದಿಗೂ ಶ್ರೀ ಪೀಠದಿಂದ ಮಾಡಲಾಗುತ್ತಿದೆ. ಯಾತ್ರಾರ್ಥಿಗಳಾಗಿ ಬರುವ ಭಕ್ತಾದಿಗಳಿಗೆ ಅಲ್ಲಿ ನಿವಾಸಾದಿಗಳ ವ್ಯವಸ್ಥೆಯಿದ್ದು ಪೂಜಾದಿಗಳನ್ನು ಮಾಡಿಸಲು ಜಂಗಮರನ್ನು ನೇಮಿಸಲಾಗಿದೆ.

ಮೈಸೂರಿನ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರು ಈ ಕಾಶೀ ಮಹಾಪೀಠದ ೭೯ ನೇ ಪೀಠಾಚಾರ್ಯರಾಗಿದ್ದ ಶ್ರೀ ಜಗದ್ಗುರು ಹರೀಶ್ವರ (ಸಿದ್ಧಲಿಂಗ) ಶಿವಾಚಾರ್ಯರ ಮಹಾಸ್ವಾಮಿಗಳಿಗೆ ಬರೆದುಕೊಟ್ಟ ತಾಮ್ರಶಾಸನವೂ ಸಹ ಶ್ರೀ ಪೀಠದಲ್ಲಿ ವಿರಾಜಿಸುತ್ತಿದೆ. ದಿನಾಂಕ ೧೦-೭-೧೮೪೬ ರಂದು ಈ ದಾನಪತ್ರವನ್ನು ಕೊಡಮಾಡಿದ್ದಾರೆ. ಮೈಸೂರಿನ ಮಹಾರಾಜರು ಈ ಪೀಠಾಚಾರ್ಯರನ್ನು ಅಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೈಸೂರಿಗೆ ಬರಮಾಡಿಕೊಂಡು ರಾಜಮರ್ಯಾದೆಯಿಂದ ಸ್ವಾಗತಮಾಡಿ ಛತ್ರ, ಚಾಮರ, ರಜತದಂಡ ಮತ್ತು ಭೂದಾನಾದಿಗಳನ್ನು ಮಾಡಿದ್ದಾರೆ. ಅವರು ಬರೆದು ಕೊಟ್ಟ ದಾನಪತ್ರದಲ್ಲಿ ಕಾಶಿಗೆ ಉನ್ನತಾಧ್ಯಯನಕ್ಕಾಗಿ ಬಂದಿರುವ ೧೨ ಜನ ಮಾಹೇಶ್ವರರಿಗೆ ಪ್ರಸಾದ ವ್ಯವಸ್ಥೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗ ಬೇಕೆಂದು ನಿವೇದಿಸಿಕೊಂಡಿದ್ದಾರೆ. ಈ ಕಾರ್ಯಕ್ಕಾಗಿ ತಾವು ಪ್ರತಿವರ್ಷ ತಮ್ಮ ಜನ್ಮ ವರ್ಧಂತಿ ದಿನದಂದು ಆರುನೂರು (೬೦೦) ರೂಪಾಯಿಗಳನ್ನು ಹುಂಡಿ ಮುಖಾಂತರ ಕಳಿಸಿಕೊಡುವದಾಗಿ ದಾನಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆ ದಾನಪತ್ರದ ಪ್ರಕಾರ ಆ ಹಣವು ಸಂಸ್ಥಾನಗಳು ವಿಲಿನೀಕರಣವಾಗುವವರೆಗೆ ಶ್ರೀ ಪೀಠಕ್ಕೆ ಪ್ರತಿವರ್ಷವೂ ಪ್ರಾಪ್ತವಾಗುತ್ತಿತ್ತು. ಸದ್ಯಃ ಅದು ನಿಂತುಹೋಗಿರುತ್ತದೆ. ಶ್ರೀ ಪೀಠಕ್ಕೆ ದಾನ ಮಾಡಿದ ಆ ಭೂಮಿಯು ಮೈಸೂರಿನಲ್ಲಿದ್ದು ಅಲ್ಲಿ ಒಂದು ಕಾಶೀ ವಿಶ್ವೇಶ್ವರ ದೇವಾಲಯ ವನ್ನು ನಿರ್ಮಿಸಲಾಗಿದೆ.

ಕೊಡಗು ದೇಶದ ಮಹಾರಾಜರ ಸೇವೆಯೂ ಸಹ ಶ್ರೀ ಪೀಠಕ್ಕೆ ಸಲ್ಲಿಗುವದಾಗಿದೆ. ಎಲ್ಲ ಅರಸರುಗಳಂತೆ ಇವರೂ ಸಹ ಶ್ರೀ ಕಾಶೀ ಮಹಾಪೀಠದ ಪರಮ ಭಕ್ತರಾಗಿ-ದ್ದರು. ಕೊಡಗಿನ ಮಹಾರಾಣಿಯವರು ಕಾಶೀ ಮಹಾಪೀಠದಲ್ಲಿ ಯಾತ್ರಾರ್ಥಿಗಳಾಗಿ ಬಂದ ಭಕ್ತಾದಿಗಳಿಗೆ ನಿವಾಸಕ್ಕಾಗಿ ಕೊಠಡಿಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಇಂದಿಗೂ ಆ ಪರಿಸರಕ್ಕೆ ರಾನೀವಾಡ (ರಾಣೀ ಛತ್ರ) ಎಂದು ಕರೆಯಲಾಗುತ್ತಿದೆ. ಅವರ ಈ ಸೇವೆಯ ಫಲವಾಗಿ ಅವರ ಪರಿವಾರದವರ ಅನೇಕ ಸ್ಮಾರಕ ಸಮಾಧಿ-ಮಂದಿರಗಳು ಇಂದಿಗೂ ಪೀಠವಲ್ಲಿ ವಿರಾಜಮಾನವಾಗಿವೆ. ಈ ತೆರನಾಗಿ ಹಿಂದೂ ಹಾಗೂ ಮುಸ್ಲಿಮ್ ಚಕ್ರವರ್ತಿಗಳಿಂದ ಕಾಲ, ಕಾಲಕ್ಕೆ ಮಾನ-ಮರ್ಯಾದೆ, ದಾನಾದಿಗಳನ್ನು ಪಡೆಯುತ್ತ ಬಂದಿರುವ ಈ ಕಾಶೀ ಮಹಾಪೀಠವು ರಾಷ್ಟ್ರೀಯ ಭಾವೈಕ್ಯತೆಯ ಒಂದು ಪ್ರಧಾನ ಕೇಂದ್ರವಾಗಿ ಕಾರ್ಯಗೈಯ್ಯುತ್ತಲಿದೆ.

ಈ ಪೀಠ ಪರಂಪರೆಯ ಎಲ್ಲ ಆಚಾರ್ಯರು ಶಿವಯೋಗಸಿದ್ಧರು, ವಿದ್ವಾಂಸರೂ ಆಗಿಹೋಗಿದ್ದಾರೆ. ಈ ಪೀಠದ ಪೂರ್ವಾಚಾರ್ಯರು ತಮ್ಮ ಯೋಗ ಸಾಮರ್ಥ್ಯ ದಿಂದ ಪ್ರಯಾಗ, ಗಯಾ ಮತ್ತು ನೇಪಾಳಗಳಲ್ಲಿಯ ತಮ್ಮ ಖಾಸಾ ಶಾಖಾಮಠಗಳಿಗೆ ಆಕಾಶಮಾರ್ಗವಾಗಿ ಹೋಗಿಬರುತ್ತಿದ್ದರೆಂಬ ವಿಷಯವು ಬನಾರಸ ಗೆಝೆಟೀಯರ್‌ದ ೧೨೩ ನೇ ಪುಟದಲ್ಲಿ—

"The Mahants are credited with power of per-forming miracles and it was through the display of this power in the shape of a journey through the air to Nepal and elsewhere before Aurangzeb that math-building was preserved".

ಈ ರೀತಿಯಾಗಿ ಉಲ್ಲೇಖಿಸಲ್ಪಟ್ಟಿದೆ. ಅಂದಿನಿಂದ ಇಂದಿನವರೆಗೆ ಈ ಪೀಠ ಪರಂಪರೆಯ ೮೫ ಜನ ಜಗದ್ಗುರುಗಳು ಆಗಿಹೋಗಿದ್ದಾರೆ. ಪ್ರತಿಯೊಬ್ಬರ ಕಾಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನ ಮತ್ತು ಮಹತ್ಕಾರ್ಯಾದಿಗಳು ವೀರಶೈವ ಪಂಚಪೀಠ ಪರಂಪರೆ ಎಂಬ ಗ್ರಂಥ ದಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿವೆ. ಜಿಜ್ಞಾಸುಗಳು ಅವಲೋಕಿಸಬಹುದು. ಹೀಗೆ ಇತಿಹಾಸ ಪ್ರಸಿದ್ಧವಾದ ಈ ಕಾಶೀ ಮಹಾಪೀಠಕ್ಕೆ 'ಜಂಗಮವಾಡಿಮಠ' ಎಂಬ ನಾಮವು ರೂಢವಾಗಿದೆ. ಈ ಜಂಗಮವಾಡಿ ಮಹಾಮಠದಲ್ಲಿ ವಿದ್ಯಾರ್ಥಿಗಳಿಗೆ ಪ್ರಸಾದ–ವಸತಿಯ ಸೌಕರ್ಯದ ಜೊತೆಗೆ ಉನ್ನತಾಧ್ಯಯನದ ವ್ಯವಸ್ಥೆಯನ್ನೂ ಮಾಡ ಲಾಗಿದೆ. ಯಾತ್ರಾರ್ಥಿಗಳಿಗಾಗಿ ನಿವಾಸ ಹಾಗೂ ಪ್ರಸಾದದ ಅನುಕೂಲತೆಯನ್ನು ಇಡಲಾಗಿದೆ. ಹೀಗೆ ಅಂದಿನಿಂದ ಇಂದಿನವರೆಗೆ ತನ್ನ ಭವ್ಯ ಪರಂಪರೆಯನ್ನು ಕಾಯ್ದು ಕೊಂಡು ಬಂದಿರುವ ಈ ಪೀಠ ಹಾಗೂ ಪೀಠಾಚಾರ್ಯರ ಮಹಿಮೆಯನ್ನು ಪ್ರತಿ ಯೊಬ್ಬರಿಗೂ ಮನದಟ್ಟು ಮಾಡಿಕೊಡುವದಕ್ಕಾಗಿಯೇ ಶ್ರೀ ಕಾಶೀ ಮಹಾಪೀಠದ ಶಾಖಾನುವರ್ತಿ ಮಠಾಧೀಶರೂ ವಿದ್ವನ್ಮಣಿಗಳೂ, ಗುರುಕವಿಯೆಂದು ಖ್ಯಾತನಾಮರಾದ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಜಡೆಯಮಠ ಮರಬ ಮತು ಗುಡೂರ ಇವರು 'ಶ್ರೀ ಕಾಶೀ ಪೀಠ ಪರಂಪರಾ ಪುರಾಣ' ಎಂಬ ಹೆಸರಿನಿಂದ ಈ ಪುರಾಣವನ್ನು ಅತ್ಯಲ್ಪ ವೇಳೆಯಲ್ಲಿ ವಿರಚಿಸಿದ್ದಾರೆ. ಇದೊಂದು ಮುಗಿಯದ ಪುರಾಣ. ಇದರಲ್ಲಿ ದ್ವಾಪರಯುಗದ ವಿಶ್ವಕರ್ಣ ಶಿವಾಚಾರ್ಯ ಮಹಾಸನ್ನಿಧಿಯ ಚರಿತ್ರೆಯಿಂದ ಪ್ರಾರಂಭಗೊಂಡ ಈ ಪುರಾಣವು ಇಂದು ಶ್ರೀ ಪೀಠದಲ್ಲಿ ವಿರಾಜಮಾನರಾಗಿರುವ ಪೀಠಾಚಾರ್ಯರವರೆಗೆ ಎಲ್ಲ ವಿವರಗಳನ್ನೂ ಸೂತ್ರರೂಪವಾಗಿ ವಿವರಿಸಿದ್ದಾರೆ.

೧೯೯೮ ನೇ ಇಸ್ವಿಯ ಮಹಾಶಿವರಾತ್ರಿ ಪರ್ವಕಾಲದಲ್ಲಿ ಹುಬ್ಬಳ್ಳಿ ನವನಗರದ ಡಾ|| ಸಿದ್ಧರಾಮು ಶಿವಯೋಗಿ ಹಿರೇಮಠ ಇವರೊಂದಿಗೆ ಕಾಶಿಗೆ ಬಂದ ಶ್ರೀ ಮರಬದ ಪಟ್ಟಾಧ್ಯಕ್ಷರು ಅಲ್ಲಿ ದೊರೆತ ಪ್ರಾಚೀನ ದಾಖಲೆಗಳನ್ನು ಸಂಗ್ರಹಿಸಿಕೊಂಡು ಕೆಲವೊಂದು ವಿಷಯಗಳನ್ನು ಶ್ರೀ ಸನ್ನಿಧಿಯ ಮುಖೇನ ತಿಳಿದುಕೊಂಡು ಈ ಪುರಾಣದ ರಚನೆ ಯನ್ನು ಮಾಡಿದ್ದಾರೆ. ಭವ್ಯ ಪರಂಪರೆಯನ್ನು ತಿಳಿಯಪಡಿಸುವ ಈ ಪುರಾಣವು ಗಾತ್ರದಲ್ಲಿ ಚಿಕ್ಕದಾಗಿ ತೋರುತ್ತಿದ್ದರೂ ಅದರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳು ವಿವರಿಸಿದಷ್ಟು ವಿಕಾಸವನ್ನು ಹೊಂದುವಂಥವುಗಳಾಗಿವೆ. ಆದ್ದರಿಂದ ಕವಿಗಳು ಬಹು ಜಾಣ್ಮೆಯಿಂದ ಎಲ್ಲ ವಿಷಯಗಳನ್ನು ಸೂತ್ರಪ್ರಾಯವಾಗಿ ಪ್ರತಿಪಾದಿಸಿದ್ದಾರೆ. ಇದು ಮೊದಲನೆಯ ಆವೃತ್ತಿಯಾಗಿರೋಣದರಿಂದ ಇದರ ಗಾತ್ರವು ಚಿಕ್ಕದಾಗಿ ತೋರಿದರೂ ಮುಂದಿನ ಸಂಶೋಧಿತ ಆವೃತ್ತಿಗಳಲ್ಲಿ ಇನ್ನೂ ಹೆಚ್ಚಿನ ವಿಷಯಗಳನ್ನು ಒದಗಿಸುವ ಮಹೋದ್ದೇಶವನ್ನು ಕವಿಗಳು ಹೊಂದಿರುವದನ್ನು ತಿಳಿದು ಶ್ರೀ ಮಹಾಸನ್ನಿಧಿಗೆ ಅತ್ಯಂತ ಸಂತೋಷವಾಗಿದೆ. ವಿದ್ವಾಂಸರಾದ ಶ್ರೀಗಳವರು ಈ ಕಾರ್ಯವನ್ನು ಮುಂದು ವರೆಸುವ ವಿಶ್ವಾಸವು ನಮಗಿದೆ.

ಹುಬ್ಬಳ್ಳಿ ನವನಗರದ ಡಾ|| ಎಸ್. ಎಫ್. ಹಿರೇಮಠರವರು ಆಯುರ್ವೇದ ತಜ್ಞರೂ ಶಿವಯೋಗನಿಷ್ಠರೂ ಆಗಿದ್ದಾರೆ. ಅವರು ತಮ್ಮ ಜೀವನದ ಉತ್ತರಾರ್ಧ ದಲ್ಲಿ ಸರ್ವಸಂಗ ಪರಿತ್ಯಾಗಿಗಳಾಗಿ ಶಿವಪೂಜಾನಿಷ್ಠರಾಗಿ ತಮ್ಮ ವೈದ್ಯಕೀಯ ವೃತ್ತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಿಂದ ರೋಗಿಗಳ ಶುಶ್ರೂಷೆಯನ್ನು ಮಾಡುತ್ತ ನವನಗರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಪುಣ್ಯಾಶ್ರಮವನ್ನು ಸ್ಥಾಪಿಸಿಕೊಂಡು ಅನೇಕ ಲೋಕ ಕಲ್ಯಾಣಕಾರಿ ಯೋಜನೆಗಳನ್ನು ಕೈಕೊಳ್ಳುತ್ತ ಹೊರಟಿದ್ದಾರೆ. ಇವರಾದರೂ ಕಾಶೀ ಪೀಠ ಪರಂಪರೆಯ ಶಾಖಾನುವರ್ತಿಗಳಾದ ಶಿಷ್ಯರಾಗಿದ್ದಾರೆ. ತಮ್ಮ ಮೂಲ ಪೀಠ ಪರಂಪರೆಯ ಪುರಾಣವನ್ನು ಬರೆಯಿಸುವ ಉದ್ದೇಶದಿಂದ ಶ್ರೀ ಮರಬದ ಪಟ್ಟಾಧ್ಯಕ್ಷ-ರನ್ನು ತಮ್ಮ ಆಶ್ರಮದಲ್ಲಿ ಇರಿಸಿಕೊಂಡು ಅವರಿಗೆ ಎಲ್ಲ ಅನುಕೂಲತೆಗಳನ್ನು ಒದಗಿಸಿ ಈ ಶ್ರೀ ಕಾಶೀ ಪೀಠ ಪರಂಪರಾ ಪುರಾಣವನ್ನು ಬರೆಯಿಸಿದ್ದಾರೆ.

ನಾಡಿನ ಶ್ರದ್ಧಾಳುಗಳಾದ ಭಕ್ತರು ಶ್ರಾವಣ, ನವರಾತ್ರಿ, ಶಿವರಾತ್ರಿ ಮುಂತಾದ ಪರ್ವಕಾಲದಲ್ಲಿ ಈ ಪುರಾಣವನ್ನು ಶ್ರವಣ ಮಾಡಿದರೆ ಅವರಿಗೆ ಕಾಶೀ ಯಾತ್ರೆಯ ಫಲವು ಪ್ರಾಪ್ತವಾಗುವದು. ಕಾರಣ ಪ್ರತಿಯೊಂದು ಗ್ರಾಮದಲ್ಲಿಯೂ ಈ ಪುರಾಣ ಪ್ರವಚನಗಳು ನೆರವೇರಿ ಜನಮನಕ್ಕೆ ಶ್ರೀ ಕಾಶೀ ಮತ್ತು ಕಾಶೀ ಪೀಠದ ಪರಂಪರೆಯ ತಿಳುವಳಿಕೆ ಉಂಟಾಗಲೆಂಬುದಾಗಿ ಹಾರೈಸಲಾಗಿದೆ. ಇದರ ಪ್ರಯೋಜನವನ್ನು ಹೆಚ್ಚು ಹೆಚ್ಚು ಜನರು ಪಡೆದಷ್ಟು ಲೇಖಕರಿಗೆ ಹಾಗೂ ಪ್ರಕಾಶಕರಿಗೆ ಸಂತೋಷವನ್ನುಂಟು ಮಾಡುತ್ತದೆ. ಈ ಪುರಾಣದ ಲೇಖಕರಾದ ಶ್ರೀ ಮರಬದ ಪಟ್ಟಾಧ್ಯಕ್ಷರಿಗೆ ಅದರಂತೆ ಗ್ರಂಥ ಮುದ್ರಣಕ್ಕೆ ಆಂಶಿಕ ಧನಸಹಾಯ ಮಾಡಿದ ಡಾ|| ಸಿದ್ಧರಾಮ ಶಿವಯೋಗಿಗಳಿಗೆ ಮತ್ತು ಗುಳೇದಗುಡ್ಡದ ಆರ್. ಆರ್. ಶೆಟ್ಟರ ಮಾಸ್ತರ ಇವರೆಲ್ಲರಿಗೆ ಶ್ರೀ ಜಗದ್ಗುರು ವಿಶ್ವಾರಾಧ್ಯರು ಆಯುರಾರೋಗ್ಯ ಹಾಗೂ ಅನಂತ ಮಂಗಲ ಪರಂಪರೆಗಳನ್ನು ಅನುಗ್ರಹಿಸಲಿ. ವಿಶೇಷವಾಗಿ ಶ್ರೀ ಮರಬದ ಪಟ್ಟಾಧ್ಯಕ್ಷರಿಂದ ಇನ್ನೂ ಹೆಚ್ಚಿನ ಕೃತಿರತ್ನಗಳು ಹೊರಹೊಮ್ಮಲೆಂದು ಹೃತ್ಪೂರ್ವಕವಾಗಿ ಹರಸೋಣವಾಗಿದೆ.

ಮೊಕ್ಕಾಂ–ಗದಗ

ಇತ್ಯಾಶಿಷಃ

ದಿನಾಂಕ : ೧೭–೭–೮೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಪ್ರಸನ್ನೋಭವ

ಪ್ರಸ್ತಾವನೆ

ಭಾರತೀಯ ಸಾಹಿತ್ಯದಲ್ಲಿ ಪೌರಾಣಿಕ ಸಾಹಿತ್ಯವು ಒಂದು ವಿಶೇಷವಾದ ವಿಭಾಗವೆನಿಸಿ ಆಬಾಲ ಗೋಪಾಲರವರೆಗೆ ವಿದಿತವಾಗಿದೆ, ಅಜರಾಮರವಾಗಿದೆ. ಅತ್ಯಂತ ಪುರಾತನವಾದ ಪರಂಪರೆಯುಳ್ಳ ಸಾಹಿತ್ಯವಿದು. ಪ್ರಾಚೀನ ಸಂಸ್ಕೃತಿಯ ಅಡಿ ಹಾಗೂ ಮುಡಿಯನ್ನು ಇಡಿಯಾಗಿ ಇದರಲ್ಲಿ ನೋಡಬಹುದು.

ಪುರಾ ಅಪಿ ನವೀನಂ ಪುರಾಣಮಿತಿ ಕಥ್ಯತೇ

ಎಂಬಂತೆ ಇದು ಹಳೆಯದೂ ಅಹುದು, ಹೊಸದೂ ಅಹುದು. ಹಳೆಯದೇನು ಹೊಸದು ಏನು ಪುರಸ್ಕಾರಕ್ಕೆ ಅದು ಅರ್ಹವಾಗಿರಬೇಕು. ಬೇರು ಹಳೆಯದಾದರೂ ಚಿಗುರು ಹೊಸತಲ್ಲವೆ !

"ಕ್ಷಣೇ ಕ್ಷಣೇ ಯನ್ನವತಾಮುಪೈತಿ
ತದೇವ ರೂಪಂ ರಮಣೀಯತಾಯಾಃ"

ಹೊಸತನವನ್ನು ಪ್ರತಿಕ್ಷಣಕ್ಕೂ ಯಾವುದು ಹೊಂದುವದೋ ಅದೇ ರಮಣೀಯತೆಯ ರೂಪವೆಂಬ ಮಹಾಕವಿಯ ಮಹೋಕ್ತಿಯಂತೆ ಈ ಪುರಾಣ ಸಾಹಿತ್ಯವು ರಮಣೀಯವಾದುದು, ಹೃದಯಂಗಮವಾದುದು. ಅಂತೆಯೆ ಮನನೀಯವಾದುದು.

ಶಿವ ಪುರಾಣ, ಲಿಂಗ ಪುರಾಣ, ಸ್ಕಂದ ಪುರಾಣ ಇವೇ ಮೊದಲಾದ ಹದಿನೆಂಟು ಪುರಾಣಗಳನ್ನು ಬರೆದು ಅಖಂಡ ಭರತ ಖಂಡದಲ್ಲಿ ವ್ಯಾಸಮಹರ್ಷಿಗಳು ಜ್ಞಾನಮಯವಾದ ಪ್ರದೀಪವನ್ನು ಪ್ರಜ್ವಲಗೊಳಿಸಿದರು. "ವ್ಯಾಸೋಚ್ಛಿಷ್ಟಂ ಜಗತ್ಸರ್ವಂ" ಎಂಬ ಸಕ್ಕದದ ನಾಡ ನುಡಿ ಅವರ ಸಮಗ್ರವಾದ ವಿಷಯದ ಸಮರ್ಥ ಪ್ರತಿಪಾದನೆಗೆ ನಿದರ್ಶನವಾಗಿರುತ್ತದೆ. ಇಂದಿನ ವಿಜ್ಞಾನಯುಗದಲ್ಲಿಯೂ ಕಾಲಕಳೆದಂತೆಲ್ಲ ಪುರಾಣಗಳ ಪ್ರಭಾವ ಕ್ಷೇತ್ರವು ವಿಸ್ತರಿಸುತ್ತಲೇ ಇದೆ.

"ವೇದಾಗಮಕ್ಕೆ ಪುರಾಣವು ಭೂತಗನ್ನಡಿಯಿದ್ದಂತೆ !" ಏಕೆಂದರೆ ವೇದಾಗಮಗಳಲ್ಲಿ ಶಾಸ್ತ್ರವಿಧಿಗಳನ್ನು ಚಿಕ್ಕ ಚಿಕ್ಕದಾಗಿ ಹೇಳಲಾಗಿದೆ. ಅವನ್ನು ಕಥೆಯ ಮೂಲಕ ದೊಡ್ಡದಾಗಿ ತೋರಿಸುವದೇ ಪುರಾಣ. ಒಂದು ವಿಚಾರವನ್ನು ಸ್ವಲ್ಪ ಮಾತ್ರ ತಿಳಿಸಿದರೆ ಅದು ಮನಸ್ಸಿನಲ್ಲಿ ಉಳಿಯದೆ ಹೋಗಿಬಿಡಬಹುದು. ಅದನ್ನೇ ಕಥೆಯ ರೂಪದಲ್ಲಿ ವಿಸ್ತಾರವಾಗಿ ತಿಳಿಸಿದರೆ ಮನಸ್ಸಿನಲ್ಲಿ ಆಳವಾಗಿ ಅದು ಬೇರೂರುತ್ತದೆ.

ಸತ್ಯಂ ವದ (ನಿಜ ಹೇಳು) ಎಂದು ಮಾತ್ರ ವೇದದಲ್ಲಿ ಹೇಳಿದೆ. ಹಾಗೆ ಸತ್ಯ ನುಡಿಯುವದರಿಂದ ಎಂಥ ಹಿರಿಮೆ ಲಭಿಸುತ್ತದೆ ಎಂಬುದನ್ನು ಹರಿಶ್ಚಂದ್ರನ ಕಥೆ ಹಲವು ಅಧ್ಯಾಯಗಳಲ್ಲಿ ತಿಳಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಧರ್ಮಂ ಚರ" (ಧರ್ಮವನ್ನಾಚರಿಸು) ಎಂಬ ವೇದದ ಎರಡು ಪದವನ್ನು ಮಹಾಭಾರತವು ಧರ್ಮರಾಯನ ಕಥೆಯನ್ನಾಗಿ ಹೇಳಿದೆ. ಮಾತೃದೇವೋಭವ ! ಪಿತೃದೇವೋಭವ ಎಂಬ ವೇದವಾಕ್ಯ ಶ್ರೀರಾಮನ ಚರಿತ್ರೆಯಲ್ಲಿ ಬಿಂಬಿತವಾಗಿದೆ.

ವಿನಯ, ತಾಳ್ಮೆ, ದಯೆ, ಪಾತಿವ್ರತ್ಯ ಮೊದಲಾದ ಅನೇಕ ಧರ್ಮಗಳನ್ನು ಪುರಾಣ ಪುರುಷರು ಮತ್ತು ಪುಣ್ಯ ಸ್ತ್ರೀಯರು ತಮ್ಮ ಚರಿತ್ರೆಗಳ ಮೂಲಕವಾಗಿ ಪ್ರಕಾಶಪಡಿಸಿದ್ದಾರೆ. ಅವುಗಳ ಪಠಣದಿಂದ ಅವುಗಳನ್ನು ಕೇಳುವದರಿಂದ ನಮಗೆ ಹೆಚ್ಚಿನ ಸಂಬಂಧ ಬೆಳೆಯುತ್ತದೆ. ಆದುದರಿಂದ ಇವುಗಳನ್ನು ಪೂರ್ವಜರು ತಮ್ಮ ಪ್ರಾಣದೋಪಾದಿಯಲ್ಲಿ ಎಚ್ಚರದಿಂದ ಈವರೆಗೆ ಕಾಪಾಡಿಕೊಂಡು ಬಂದಿರುವರು. ಈ ನಿಟ್ಟಿನಲ್ಲಿ ಕಾಶಿಯ ಹಾಗೂ ಮೈಸೂರಿನ ಮಹಾರಾಜರು ಸ್ಮರಣಾರ್ಹರಾಗಿರುವರು. ಭಾರತೀಯರ ಸಕಲ ಭಾಷೆಗಳಲ್ಲಿಯೂ ಪೌರಾಣಿಕ ಸಾಹಿತ್ಯವು ಹಾಸು ಹೊಕ್ಕಾಗಿ ಹೆಣೆದುಕೊಂಡು ಬಂದಿರುವವನ್ನು ಯಾರಾವರೂ ಗುರುತಿಸಬಹುದು. ಪಂಪ ಮಹಾ ಕವಿಯಿಂದ ಮೊದಲುಗೊಂಡು ಇಂದಿನವರೆಗೆ ಪುರಾಣ ರಚನಾ ಪರಂಪರೆಯು ಕರ್ನಾಟಕದಲ್ಲಿ ಸುವ್ಯವಸ್ಥಿತವಾಗಿ ಮುಂಮುವರಿದು ಬಂದಿರುವದು ಅತೀವ ಸ್ಪಷ್ಟವಾಗಿದೆ. ಈ ಪಥದಲ್ಲಿ ವೀರಶೈವರು ಹಿಂದೆ ಬಿದ್ದಿಲ್ಲ.

ಭೀಮ ಕವಿಯ ಬಸವ ಪುರಾಣ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಬೊಮ್ಮರಸನ ರೇವಣ ಸಿದ್ಧೇಶ್ವರ ಪುರಾಣ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಪುರಾಣ, ರೇಣುಕ ವಿಜಯ ಪುರಾಣ, ಸುರಂಗ ಕವಿಯ ೬೩ ಪುರಾತನರ ಪುರಾಣ, ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಪುರಾಣ, ಬಳ್ಳಾರಿ ಮರಿಯೋಗೀಶ್ವರ ಪುರಾಣ, ಕಲಬುರಗಿ ಶರಣಬಸವ ಪುರಾಣ, ಹಾನಗಲ್ಲು ಕುಮಾರೇಶ್ವರ ಪುರಾಣ, ಉಜ್ಜನಿ ಜಗದ್ಗುರು ಸಿದ್ಧಲಿಂಗೇಶ್ವರ ಪುರಾಣ ಇತ್ಯಾದಿಗಳು ಜನಗಳ ಬಳಕೆಯಲ್ಲಿದ್ದು ಪರ್ವಕಾಲದಲ್ಲಿ ತಮ್ಮ ಕಂಪನ್ನು ಬೀರಿ ಜನಮನವನ್ನು ಮುದಗೊಳಿಸುತ್ತಲಿವೆ, ಹದಗೊಳಿಸುತ್ತಲಿವೆ.

ಹುಕ್ಕೇರಿ ಸದಾಶಿವ ಶಾಸ್ತ್ರಿಗಳು, ದ್ಯಾಂಪುರದ ಚನ್ನಕವಿಗಳು ಹಾಗೂ ಕಲ್ಲಿನಾಥ ಶಾಸ್ತ್ರಿಗಳು, ಬಳ್ಳಾರಿ ವೈ. ನಾಗೇಶ ಶಾಸ್ತ್ರಿಗಳು, ರೌಡಕುಂದಿ ಪಂ|| ಪ್ರಭಾಕರಶಾಸ್ತ್ರಿಗಳು ಗದಗದ ಪಂ|| ಪುಟ್ಟರಾಜ ಗವಾಯಿಗಳು, ರಾಯಚೂರು ಚಂದ್ರಶೇಖರ ಶಾಸ್ತ್ರಿಗಳು ಇನ್ನೂ ಹಲವಾರು ಕವಿ ವಿದ್ವಾಂಸರು ಪುರಾಣ ಸಾಹಿತ್ಯಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿರುವರು. ಇದು ಅವಿಸ್ಮರಣೀಯ.

ಮನದ ತಿರುಳ ಹುರಿದ, ಕಂಗಳ ಕರುಳ ಹರಿದ, ಮಾತಿನ ಮೊದಲನರಿದ, ಮಹಾತ್ಮರಾದ ಮಹಾಚಾರ್ಯರ, ಮಹಾನುಭಾವರ, ಸಂತ ಮಹಂತರ, ಶರಣರ ಜೀವನಾದರ್ಶಗಳನ್ನು ನೈಜವಾಗಿ ಚಿತ್ರಿಸಿ ಜನಮನದಲ್ಲಿ ಅಚ್ಚೊತ್ತುವಂತೆ ಮಾಡಿ ಅವರ ದಿವ್ಯಾನುಭವವನ್ನು ಒದಗಿಸುತ್ತ ಬರುವಲ್ಲಿ ಪುರಾಣಗಳ ಪಾತ್ರ ಶ್ಲಾಘನೀಯವಾದುದು, ಬಹೂಪಯುಕ್ತವಾದುದು. ಇವುಗಳು ಧರ್ಮ ತತ್ತ್ವಗಳ ಬೋಧನೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಿಯುಗದಲ್ಲಿ ಅತೀವ ಚೇತೋಹಾರಿ, ಸುಲಭ ಮಾಧ್ಯಮ. ಪುರಾಣಗಳಲ್ಲಿ ಬರುವ ಉದಾತ್ತವಾದ ಉಪದೇಶಗಳು ಹಾಗೂ ಉದಾಹರಣಗಳು ಶ್ರದ್ಧೆಯಿಂದ ಕೇಳುವವರಿಗೆ ಅತಿ ಅಪ್ಯಾಯನವೆನಿಸುತ್ತವೆ. ಪುರಾಣ ಪಠಣ ಹಾಗೂ ಶ್ರವಣದಿಂದ ಅನೇಕರು ಮಾರ್ಗದರ್ಶನವನ್ನು, ಆತ್ಮಶಾಂತಿಯನ್ನು ಪಡೆದಿದ್ದಾರೆ, ಪಡೆಯುತ್ತಲಿದ್ದಾರೆ ಇದು ನಿಸ್ಸಂಶಯ. ಕಥನ ಕೌಶಲ್ಯದೊಂದಿಗೆ ಸಂಗೀತ ಸೇರುವದರಿಂದ ಪುರಾಣ ಶ್ರವಣವು ಶ್ರೋತೃಗಳಿಗೆ ಬಹಳ ರಮ್ಯವೆನಿಸುವದು ಒಳ್ಳೆಯ ಪರಿಣಾಮವಾಗುವದು.

ಹುಲಿಯಾಳ ಯೋಗಾಶ್ರಮದಲ್ಲಿ ಶಿವಯೋಗ ಸಮಾಧಿಸ್ಥರಾದ "ವಿದ್ಯಾವಾಚಸ್ಪತಿ" ಶ್ರೀ ಷ. ಬ್ರ. ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಹಾಗೂ ಸೊಲ್ಲಾಪುರದ ಲಿಂ|| ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ನಾಡಿನಲ್ಲೆಲ್ಲ ಹೆಸರಾಂತ ಪುರಾಣ ಪ್ರವಚನ ಪಟುಗಳಾಗಿದ್ದರೆಂಬುದು ಇಲ್ಲಿ ಗಮನಾರ್ಹ.

ವೀರಶೈವ ಧರ್ಮದ ಸಂಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಪರಂಪರೆಯು ಸಾವಿರಾರು ವರುಷಗಳಿಂದ ಧರ್ಮಸಂರಕ್ಷಣೆ ಹಾಗೂ ಪ್ರಚಾರ ಕಾರ್ಯಗಳನ್ನು ನಿರ್ವಹಿಸುತ್ತ ಬಂದಿರುವದು ಸರಿಯಷ್ಟೆ! ಜಗದ್ಗುರು ಪಂಚಾಚಾರ್ಯರಲ್ಲಿ ಓರ್ವರಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರ ಪರಂಪರೆಯ ಪರಿಚಯವನ್ನು ಮಾಡಿಕೊಡುವದು ಅತ್ಯವಶ್ಯವಾಗಿತ್ತು ಅದಕ್ಕೋಸುಗ ಶ್ರೀ ಕಾಶೀ ಪೀಠದ ಪರಂಪರಾ ಪುರಾಣವನ್ನು ಬರೆಯಬೇಕಾಯಿತು. ಶ್ರೀ ಕಾಶಿಯ ಜ್ಞಾನ ಸಿಂಹಾಸನಾಧ್ಯಕ್ಷರಾದ ಡಾ|| ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾಬಲದಿಂದ ಈ ಕಾರ್ಯವು ಶೀಘ್ರವಾಗಿ ನಿರ್ವಿಘ್ನವಾಗಿ ನೆರವೇರಿದುದಕ್ಕೆ ಹರ್ಷಿಸುವೆ! ಸನ್ನಿಧಿಯಲ್ಲಿ ಕೃತಜ್ಞತೆಯ ವಿನಮ್ರ ಪ್ರಣಾಮಗಳನ್ನು ಸಲ್ಲಿಸುವೆ. ಎಂದಿನಂತೆ ಸಮಾಜ ಬಾಂಧವರು ಈ ಪುರಾಣವನ್ನು ಆದರದಿಂದ ಬರಮಾಡಿಕೊಳ್ಳುವರೆಂದು ನಂಬಿದೆ.

ದಿನಾಂಕ
೧೭–೭–೧೯೯೪

ಇಂತು
"ಗುರುಕವಿ" ಪುರಾಣ ಪ್ರಾಜ್ಞ
ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು
ಹುರಬ ಮತ್ತು ಗುಡೂರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕವಿ ಪರಿಚಯ

ಕಾವ್ಯವನ್ನು ಒಳಹೊಕ್ಕು ನೋಡಿದರೆ ಕವಿಯ ದರ್ಶನವಾಗುವದು. ಕವಿಯು ತಾನುಂಡು ಕಂಡುದನ್ನು ತನ್ನ ಕಾವ್ಯದಲ್ಲಿ ಅಪರೋಕ್ಷವಾಗಿ ಚಿತ್ರಿಸಿರುತ್ತಾನೆ. ತನ್ನ ಸುತ್ತಣ ಪರಿಸರ, ಜನಜೀವನ, ಬದುಕಿನ, ಏರಿಳಿತಗಳನ್ನು ತನ್ನ ಕಾವ್ಯದಲ್ಲಿಯೆ ಕವಿ ತನ್ನದೇ ಆದ ಶೈಲಿಯಲ್ಲಿ ಬಿತ್ತರಿಸಿರುತ್ತಾನೆ. ಆದರೆ ಅದನ್ನು ಗುರುತಿಸುವ ಸೂಕ್ಷ್ಮಮತಿ ಮಾತ್ರ ಕಾವ್ಯಾಭ್ಯಾಸಿಗೆ ಬೇಕು. ಆದರೂ ಕಾವ್ಯದ ಕರ್ತೃ ಯಾರು ? ಏನು ? ಎಂಥವರು ಎಂಬೆಲ್ಲ ಪ್ರಶ್ನೆಗಳನ್ನು ಕಾವ್ಯದ ಓದುಗರು ಸಹಜ ಕೇಳುತ್ತಾರೆ. ಅದನ್ನು ಗಮನಿಸಿ ಕೆಲವು ವಿವರಗಳನ್ನು ಕವಿಗಳ ಬಗೆಗೆ ಉಲ್ಲೇಖಿಸಲಾಗಿದೆ.

ಕಾವ್ಯವಾಚನ ಹಾಗೂ ಸಾಹಿತ್ಯಾಭ್ಯಾಸದಲ್ಲಿ ಆಸಕ್ತಿ, ಅಭಿರುಚಿಯುಳ್ಳ ಕನ್ನಡಿಗರಿಗೆ ಕವಿಗಳು ಅಪರಿಚಿತರೇನಲ್ಲ. ಹಲವು ಹತ್ತು ಕೃತಿ ರಚಿಸಿ ಸುಪರಿಚಿತರಾಗಿರುತ್ತಾರೆ. ನಾಡಿನಾದ್ಯಂತ ಅಷ್ಟೇ ಏಕೆ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ–ಆಂಧ್ರ–ತಮಿಳುನಾಡುಗಳಲ್ಲಿಯೂ ಸಂಚರಿಸಿ ತಮ್ಮ ಪ್ರವಚನ–ಉಪನ್ಯಾಸ–ಉಪದೇಶಗಳಿಂದ ಚಿರಪರಿಚಿತರಾಗಿರುತ್ತಾರೆ.

ಧರ್ಮದರ್ಶನಗಳ ಆಳವಾದ ಹಿನ್ನೆಲೆಯಿದೆ. ತಮ್ಮದೇ ಆದ ಮುನ್ನೋಟವನ್ನೂ ಹೊಂದಿದ್ದಾರೆ. ವಾದಕ್ಕೆ ನಿಂತರೆ ಹಿಂದೇಟು ಹಾಕದ ಎದೆಗಾರಿಕೆಯಿರುವಂತೆ ಸಾಧು ಸತ್ಪುರುಷರನ್ನು ಕಂಡರೆ ಗೌರವಿಸುವ ವಿಧೇಯತೆಯೂ ಉಂಟು. ಅಂತೆಯೇ ಅವರು ಬಹುಶ್ರುತ ಪಂಡಿತರು, ಬಹುಜನ ಪ್ರಿಯರು. "ಮರಬದ ಶ್ರೀಗಳು" ಎಂದೇ ಮನೆಮಾತಾಗಿರುವ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಮರಬ ಗ್ರಾಮದ ಜಡೆಯಮಠದ ವೇದಮೂರ್ತಿ ಶ್ರೀ ಜಟಾಧರಸ್ವಾಮಿ ಅವರ ಧರ್ಮಪತ್ನಿ ನಿಂಬಾಂಬಿಕಾ ಅವರ ಸುಪುತ್ರರಾಗಿ ೧೯೨೧ ನೇ ಇಸ್ವಿಯಲ್ಲಿ ಜನಿಸಿದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಮರಬ ಜಡೆಯಮಠದ ಪಟ್ಟಾಧ್ಯಕ್ಷರಾಗಿ ಗುರುಪೀಠವನ್ನು ಏರಿದರು. ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಹೊಣೆಗಾರಿಕೆ ನಿರ್ವಹಿಸಬಲ್ಲರೆಂಬುದನ್ನು ಸಿದ್ಧಪಡಿಸಿದರು. ಶಿವಯೋಗ ಮಂದಿರದಲ್ಲಿ ಸಾಧಕರಾಗಿ ಸೇರಿದ ಅವರು ಶಿವಯೋಗದಲ್ಲಿ ಪರಿಶ್ರಮಿಸಿದರು. ಸೊಲ್ಲಾಪುರದ ಶ್ರೀ ವಾರದ ಮಲ್ಲಪ್ಪನವರ ಪಾಠಶಾಲೆಯಲ್ಲಿ ಸಂಸ್ಕೃತ ಸಾಹಿತ್ಯದ ಹಾಗೂ ಆಗಮಗಳ ಅಧ್ಯಯನವನ್ನು ಶ್ರದ್ಧೆಯಿಂದ ಮಾಡಿದರು. ಆಗಲೇ ಸಮಯ ಸನ್ನಿವೇಶಕ್ಕನುಗುಣವಾದ ಕವನಗಳನ್ನು ರಚಿಸುವ ಸಹಜ ಕಲೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರಿಗೆ ಸಾಧಿಸಿತ್ತು. ಆಶುಕವಿ ಎಂದು ಖ್ಯಾತರಾದರು. ಪ್ರೌಢರಾದಂತೆ ಕಾವ್ಯರಚನೆಯಲ್ಲೂ ಪ್ರೌಢಿಮೆ ಪಡೆದು ಅಭಿನವ ರೇಣುಕ ಶ್ರೀ ರಂಭಾಪುರಿ ವೀರಸಿಂಹಾಸನಾಧೀಶ್ವರ ೧೦೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಭಗವತ್ಪಾದರಿಂದ "ಬಾಲಬೃಹಸ್ಪತಿ" ಎಂಬ ಬಿರುದನ್ನು ಹೊಂದಿದರು. ಈ ವರೆಗೆ ಸುಮಾರು ೪೦ ಪುಸ್ತಕಗಳನ್ನು ಬರೆದಿರುತ್ತಾರೆ. ವೃತ್ತ ಷಟ್ಪದಿಗಳ ವಿರಳ ಕಾಲದಲ್ಲಿಯೂ ಅವುಗಳನ್ನು ಜೀವಂತವಾಗಿರಿಸಿದ ಧೀಮಂತರು. ಇಂತಹರಿಂದ ಕನ್ನಡ ಸಾರಸ್ವತ ಲೋಕವು ಶ್ರೀಮಂತವಾಗಿದೆ, ಧನ್ಯವಾಗಿದೆ. ಇವಲ್ಲದೆ ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಪ್ರವಚನ ಪಟುಗಳೂ ಶಿವಾನುಭಾವಿಗಳೂ ಆಗಿರುತ್ತಾರೆ.

ಹೃಷೀಕೇಶ, ರಾಮಲಿಂಗಕ್ಷೇತ್ರ, ಮಾಸನೂರು, ಕಪ್ಪಡಿ ಜಂಬುನಾಥನ ಬೆಟ್ಟ, ಶ್ರೀಶೈಲ, ಶಿವಗಂಗೆ, ಮಧುಸ್ಸೆ ಮುಂತಾದ ಹಲವಾರು ಪವಿತ್ರ ಕ್ಷೇತ್ರಗಳಲ್ಲಿ ಶಿವಾನುಷ್ಠಾನವನ್ನು ನೆರವೇರಿಸಿದ್ದಾರೆ. ಅಂಥ ನಾಲ್ವತ್ತು ಕಾರ್ಯಕ್ರಮಗಳನ್ನು ನಡೆಯಿಸಿರುತ್ತಾರೆ. ಜನಮನವನ್ನು ಗೆದ್ದಿದ್ದಾರೆ. ಪ್ರಚಾರಪ್ರಿಯರಲ್ಲದ ಶ್ರೀ ಶಿವಾಚಾರ್ಯರು ಮಹಾಕವಿ ಹರಿಹರನ ಹಾದಿಯನ್ನೇ ತುಳಿದಿದ್ದಾರೆ. ಶಿವನನ್ನು ಶಿವಾಚಾರ್ಯರನ್ನು ಶಿವಯೋಗಿಗಳನ್ನು ಶಿವಶರಣರನ್ನು ಮಾತ್ರ ಕುರಿತು ಕಾವ್ಯಚರಿತ್ರಗಳನ್ನು ವಿರಚಿಸಿರುವರು. ಅಂತೆಯೆ ಅವರು ಶಿವಕವಿಗಳೂ ಅಹುದು, ಗುರು ಕವಿಗಳೂ ಅಹುದು.

ಮಾರಾರಿಯ ಕೃಪೆ ಯಿಲ್ಲದಂಗೆ ಕವಿತಾ ಚಿಂತಾರತ್ನಂ ದೊರಗುಮ !

ಕವೀಶ್ವರ ಷಡಕ್ಷರ

ಸದ್ಯಃ ಕವಿಗಳು ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಗುಡೂರ ಗ್ರಾಮದಲ್ಲಿ ಯೋಗಾಶ್ರಮ ಕಟ್ಟಿಕೊಂಡು ಮಂಗಳದ ಅಂಗಳದಿ ಕಂಗೊಳಿಸುತ್ತಿದ್ದಾರೆ. ಕಾವ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ.

ಹುಬ್ಬಳ್ಳಿ ನವನಗರದಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಪುಣ್ಯಾಶ್ರಮದಲ್ಲಿ ಇದ್ದು ಕಾಶೀ ಪೀಠ ಪರಂಪರಾ ಪುರಾಣವನ್ನು ಬರೆದಿರುತ್ತಾರೆ. ಇನ್ನೂ ಕೆಲವು ಕೃತಿಗಳನ್ನು ಬರೆದಿದ್ದಾರೆ. ೭೫ ವರ್ಷ ಕಳೆದರೂ ಉತ್ಸಾಹ ಲವಲವಿಕೆ ಉಕ್ಕಿ ಹರಿಯುತ್ತಿದೆ. ಅವರಿಂದ ಇನ್ನೂ ಹಲವಾರು ರಸಪೂರ್ಣ ಸತ್ತ್ವಶಾಲಿ ಕೃತಿಗಳು ಮೂಡಿ ಬರಲಿ ! ಶ್ರೀ ಪಾರ್ವತೀ ಪರಮೇಶ್ವರರು ಮತ್ತು ಶ್ರೀ ರೇಣುಕಾದಿ ಪಂಚಾಚಾರ್ಯರು ಅವರನ್ನು ಕರುಣಿಸಲಿ ! ಇಂತು ಹೃದಯಾರೆ ಹಾರೈಸುತ್ತೇನೆ.

ತಾ : ೧೭–೭–೧೯೯೮ —ಎಸ್. ಎಫ್. ಹಿರೇಮಠ

ನವನಗರ–ಹುಬ್ಬಳ್ಳಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿವಿಡಿ

೧.	ಶ್ರೀಮತ್ಕಾಶೀಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಶುಭಾಶೀರ್ವಾದ ಸಂದೇಶ	iii
೨.	ಪ್ರಸ್ತಾವನೆ	x
೩.	ಕವಿ ಪರಿಚಯ	xiii
೪.	ಶ್ರೀ ಕಾಶೀ ಪೀಠ ಪರಂಪರಾ ಪುರಾಣ	೧–೧೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋ ಭಗವತೇ ವಿಶ್ವನಾಥಾಯ

"ಶ್ರೀ ಕಾಶೀ ಪೀಠ ಪರಂಪರಾ ಪುರಾಣ"

ಪ್ರಥಮಾಧ್ಯಾಯ

ಭಾಮಿನಿ ಷಟ್ಪದಿ

ಶ್ರೀ ಮಹಾಕಾಶೀಪುರೀಶ್ವರ
ಸೋಮಧರ ಸುಂದರ ಶಿವಾವರ
ಕಾಮಿತಾರ್ಥವನೀವ ಗಂಗಾಧರ ದಯಾಸಿಂಧೋ
ಸಾಮಗಾನಪ್ರಿಯ ಸದಾಶಿವ
ಕಾಮಮದಸಂಹರ ಮಹೇಶ್ವರ
ಸಾಮಜಾಸುರ ಕೃತ್ತಿಧರ ವಿಶ್ವೇಶಲಿಂಗ ನಮೋ ॥ ೧ ॥

ಅನ್ನಪೂರ್ಣೆಯಪರ್ಣೆ ಶಾಂಭವಿ
ಮಾನನೀಯೆ ವಿಶಾಲಲೋಚನೆ
ವಾಣಿ ಲಕ್ಷ್ಮೀವಿನುತ ಪಾದಾಂಭೋಜೆ ಶಿವಜಾಯೆ
ನಿನ್ನ ಕೃಪೆಯನವಲಂಬಿಸಿರ್ಪೆನು
ದೀನ ರಕ್ಷಣ ದಕ್ಷೆ ಮಂಗಳೆ
ಬಣ್ಣಿಸಲು ನನ್ನಳವೆ ! ದೇವಿಯೆ ಕಾಯೆ ಮುನಿಗೇಯೆ ॥ ೨ ॥

ಧೀರನುಮೆಯ ಕುಮಾರ ಶರಧಿಗ-
ಭೀರ ಮಣಿಮಯಹಾರ ವಿಘ್ನವಿ-
ದಾರ ಕರುಣಾಪೂರ ಶರಣವಿಹಾರ ಸುಖಸಾರ
ಸಾರಸಾರಿಯರಾತಿ ಸಾರಾ-
ಸಾರ ವಚನ ವಿಚಾರ ಸುಜನೋ-
ದ್ಧಾರ ಸಿದ್ಧಿ ವಿನಾಯಕಂ ನಿರ್ವಿಘ್ನತೆಯ ಕೊಡುಗೆಮಗೆ ॥ ೩ ॥

ವೀಣೆಯನು ಪಾಣಿಯಲಿ ಪಿಡಿದಿಹ
ವಾಣಿ ವಿದ್ಯಾದಾಯಿನಿಯೆ ನೀ ಕ-
ಲ್ಯಾಣಿ ಬೊಮ್ಮನ ರಾಣಿ ಕಲೆಯ ಶ್ರೇಣಿಯಭಿಮಾನಿ
ಮೀನನಯನೆಯೆ ಮಂಜುಭಾಷಿಣಿ
ಕಾಣೆ ನಿನ್ನ ಸಮಾನ ಜಾಣೆಯ
ಮಾನ್ಯೆ ಶಾರದೆ ಕರುಣಿಸಾ ! ಸಿತವಸನಧಾರಿಣಿಯೆ ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾತ್ರರ್ರೈ ಪರಶಿವನಕೃಪೆಗೆ ಪ–
ವಿತ್ರರ್ರೈ ನಿಜಬೋಧ ಲಸಿತ ಚ–
ರಿತ್ರರ್ರೈ ಪ್ರಮಥಾಗ್ರಗಣ್ಯರಿವರ್ ಶಿವೋಕ್ತ ಮಹಾ
ಸೂತ್ರರ್ರೈ ಸುಜ್ಞಾನ ವಿಲಸಿತ
ನೇತ್ರರ್ರೈ ವೀರಾದಿಶಿವಮತ
ಗೋತ್ರಪುರುಷರ್ ತಪ್ಪದೀಗೆಮಗಿಷ್ಟಸಿದ್ಧಿಯನು ॥ ೫ ॥

ಆರು ಮೊಗನಿಗೆ ಶಕ್ತಿಧರನಿಗೆ
ಶೂರಪದ್ಮನ ತಾರಕನ ಸಂ–
ಹಾರಮಂ ಶೈಶವದಿ ಸಂಗರದಲ್ಲಿ ಗೈದವಗೆ
ಏರಿ ಶಿಖಿ ಸಂಚರಿಸುವವನಿಗೆ
ಮಾರಹರ ಸುಕುಮಾರನಿಗೆ ಬಹು
ಶೂರನಿಗೆ ಸುಜ್ಞಾನಿ ವಲ್ಲೀ ವಲ್ಲಭಗೆ ನಮನಂ ॥ ೬ ॥

ಪರತರ ಶ್ರೀ ವೀರಶೈವರ
ವರ ಮತವ ಸಂಸ್ಥಾಪಿಸುತೆ ಮೇಣ್
ಭರತಖಂಡದಿ ಪಂಚಪೀಠಗಳನ್ನು ನೆಲೆಗೊಳಿಸಿ
ಪೊರೆದ ಪಂಚಾಚಾರ್ಯರಡಿದಾ–
ವರೆಗಳಂ ಪೊಗಳುವೆನು ತತ್ಪದ–
ಸರಸಿಜದಲಾರಡಿಯು ನಾನಾಗಿಪ್ಪೆ ನನವರತ ॥ ೭ ॥

ಹೃದ್ಯಚರಿತನ ನಿರುಪಮನ ನಿರ–
ವದ್ಯನನಘನ ನಿರ್ವಿಕಾರನ
ಸದ್ಯತಿಸ್ತುತಪದನ ದ್ವಾಪರದಲ್ಲಿ ತಾನಿರ್ದು
ಬೋಧಿಸೆಂದ್ಯೈತಂದ ದುರ್ವಾ–
ಸಾದಿಗಳಿಗಂ ವೀರಶೈವವ
ಬೋಧಿಸಿರ್ಪಾ ವಿಶ್ವಕರ್ಣಾಭಿದನ ಭಜಿಸುವೆನು ॥ ೮ ॥

ಹರನಿಗಾವಾಸೆನಿಪ ಕಾಶಿಯು
ಪುರದಿ ವಿಶ್ವೇಶ್ವರನೊಳುದಯಿಸಿ
ಹರಮತವ ನೆಲೆಗೊಳಿಸಿ ತಾನಾನಂದಕಾನನದಿ
ನಿರವಿಸುತಲಿ ಜ್ಞಾನ ಪೀಠವ–
ನಿರದೆ ಯುಪದೇಶಿಸುತ ಸಂತತ
ಮೆರೆದ ವಿಶ್ವಾರಾಧ್ಯ ಗುರುಪುಂಗವನ ನುತಿಸುವೆನು ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಷ್ಟಸಿದ್ಧಿಗಳನ್ನು ಪಡೆಯುತ–
ಲಿಷ್ಟವನು ಭಕ್ತಾಳಿಗಿತ್ತು ವ–
ರಿಷ್ಠ ನೆನಿಸುತೆ ಸಿದ್ಧತತಿಗೆ ನಿಜೋರು ತೇಜದಲಿ
ದುಷ್ಟ ಖರ್ಪರನನ್ನು ಭಂಜಿಸಿ
ಕಷ್ಟಮಂ ಕನ್ಯೆಯರ ಕಳೆದಿಹ
ಶ್ರೇಷ್ಠರೇವಣನಂಘ್ರಿ ಪಂಕಜವೆನ್ನ ಪಾಲಿಸಲಿ ॥ ೧೦ ॥

ಮದವ ಮಾಯೆಯ ಮುರಿದ ಸದ್ಧರ್–
ಮದ ಮಹಾಪೀಠಾಧಿಪತಿ ಯೆನಿ–
ಸಿದ ಜಗನ್ನುತ ಸಿದ್ಧನೆಂಬ ನೆಗಳ್ತೆಯಂ ಪೊಂದಿ
ಮುದಗೊಳಿಸಿ ಸದ್ಭಕ್ತರೆಲ್ಲರ
ನಿಧಿಯೆನಿಸಿ ರಾಜಿಸಿದ ಮಹಿಮಾ–
ಸ್ಪದಲಸದ್ಗುರು ಮರುಳಸಿದ್ಧನ ನಂಬಿ ನೆನೆಯುವೆನು ॥ ೧೧ ॥

ಗುರುಕುಲದ ತಿಲಕಗೆ ಹಿಮಾಕರ
ಗಿರಿಯ ಕೇದಾರದ ಸನಾತನ
ವಿರತಿ ಪೀಠಾಧಿಪಗೆ ಶೈವಾಗಮ ವಿಶಾರದಗೆ
ಚರಿಸುತಿರ್ಪಗೆ ಗಗನಮಾರ್ಗದಿ
ನಿರುತ ಶಿವಯೋಗಾನುಭಾವಿಗೆ
ಶರಣೆನುವೆ ಭೂಕುಂಡಲಿಂಗ ಶಿವಾರ್ಯವರ್ಯನಿಗೆ ॥ ೧೨ ॥

ಅಂದು ಪಿಂಗಳಗಿರ್ದ ರೋಗದ
ದಂದುಗವ ಪರಿಹರಿಸಿ ಲಿಂಗಾ–
ನಂದವೇ ಮೈವೆತ್ತಿ ಸಿರಿಗಿರಿ ಸೂರ್ಯ ಪೀಠದಲಿ
ನಿಂದುದೋ ಯೆನಲಪರ ಶಂಕರ–
ನೆಂದು ಪಿರಿಯರ್ ನುತಿಸಲಾಗುರು–
ಚಂದ್ರನ ಸದಾನಂದನ ಪದಾಂಬುರುಹಕ್ಕೆ ಶರಣಾರ್ಥಿ ॥ ೧೩ ॥

ಶ್ರೀ ಲಸದ್ಧೂರ್ಜಟಿಯು ತಾಂ ಗುರು
ಲೀಲೆಯಂ ನಟಿಸಲಿಕೆ ಪಾಪದ
ಮೂಲಮಂ ಕಳೆಯಲಿಕೆ ಮುರಬ ಗ್ರಾಮದೊಳು ನೆಲಸಿ
ಬಾಲನನು ತತ್‌ಪಿತನು ಪೊರೆವೊಲು
ಮೇಲುತರ ಶಿವಭಾವ ಸಹಿತರ
ಮೇಳವನು ಸಲಹುವ ಜಟಾಧರ ಗುರುವಿಗಾನತನು ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಲೆಯು ಮಧ್ಯದಿ ನಿಂದು ತಪಿಸುತ
ಕಲುಷ ಕುಜಗಳ ಬೇರ ಕೀಳುತ
ಮುಳುಗಿ ಶಿವನನುಭಾವಪಾನಂದಾಂಬು ನಿಧಿಯಲ್ಲಿ
ಪುಲಿಯು ವಾಹನವಾಗೆ ಚರಿಸುತ
ಮಲಿನ ಕಾನನ ಜನವನೂರ್ಜಿತ–
ಗೊಳಿಸಿರುವ ಮಾದೇಶ್ವರಂ ತಾನೀಗೆ ವಾಂಛಿತವ ॥ ೧೫ ॥

ಶಿವಯೋಗಿ ಶಿವಗುರುವು ಮೇಣ್ ರಾ–
ಘವನು ಹರಿಹರ ಸೋಮಭೀಮರು
ಸುವಿದಿತಾರಕ್ಕರನು ಸರ್ವಜ್ಞನು ವಿರೂಪಾಕ್ಷಂ
ಶಿವಪ್ರಕಾಶಸ್ವಾಮಿ ಮುಂತಾ–
ದವರು ನಿಜಗುಣ ಮನ್ಮಥೇಶರು
ಶಿವ ಕವೀಂದ್ರರು ಕಾವ್ಯ ರಚನಾಸಕ್ತನಂ ಮಾಳ್ಕೆ ॥ ೧೬ ॥

ಶಿವಮತ ಸ್ಥಾಪಕರನಲ್ಲದೆ
ಶಿವ ಮತೋದ್ಧಾರಕರ ಮತ್ತಂ
ಶಿವ ಮತದ ವಿದ್ವಾಂಸರಂ ಶಿವಶರಣೆ ಶರಣರನು
ಶಿವಮತ ಶ್ರೇಯಸ್ಸಿಗೋಸುಗ–
ವವಿರತಂ ಹೋರಾಡಿದವರನು–
ಭವಿಗಳಂ ಸಾಹಿತಿಗಳಂ ನಾನೆಷ್ಟು ವರ್ಣಿಸಲಿ ॥ ೧೭ ॥

ಸರಸ ಭಾವ ವಿಕಾಸ ವಿಲಸಿತೆ
ಸರಲ ಸುಪದ ನ್ಯಾಸ ಶೋಭಿತೆ
ಹರುಷವೀವ ಸುವರ್ಣಮಯ ನಿಜ ದೇಹ ಕಾಂತಿಯುತೆ
ಸುರುಚಿರಾಲಂಕಾರ ಭೂಷಿತೆ
ಪರತರಾರ್ಥ ವಿಚಾರ ಗರ್ಭಿತೆ
ಪರಮ ಕವಿತಾಮಾತೆ ಸುಯಶೋಭರಿತೆ ಸುಖದಾತೆ ॥ ೧೮ ॥

ಕವಿಯು ಗಾಯಕ ಮತ್ತು ಶಿಲ್ಪಿಯು
ಲವಲವಿಕೆಯಿಹ ಚಿತ್ರಕಾರನು
ಭುವನದೊಳಗಾನಂದದಾಯಕರಲ್ತೆ ! ಅವರೊಳಗೆ
ಕವಿಯು ನೀತಿ ವಿವೇಕವನ್ನನು–
ಭವದಿ ಮನದಣಿವಂತೆ ಬೋಧಿಸಿ
ಕವಿದ ಮನಗತ್ತಲೆಯು ಕಳೆಯುವನರಿವ ಬೀರುವನು ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನಿಯಲಿ ಪನಲತೆಯ ಕುಸುಮದ
ನವಸುಗಂಧವು ನಾಶಿಕಾಗ್ರದೆ
ಕವಿದು ಮನಸಿಗೆ ತೋಷವೀಯುವ ತೆರದೆ ತಿಳಿಯಲ್ಕೆ
ಅವಿರತಾತ್ಮ ಗುಣಾದಿಭೂಷಿತ
ಕವಿಯ ನವರಸಭರಿತ ಕಾವ್ಯವು
ಕಿವಿಗಳಲಿ ಮಾಧುರ್ಯ ತುಂಬುತ ಮನವ ಮುದಗೊಳಿಕುಂ || ೨೦ ||

ಸರಸಸೂರಿ ಜ್ಞಾನ ಪೀಠೇ-
ಶ್ವರನು ಶಶಿಶೇಖರ ಜಗದ್ಗುರು
ಕರೆದು ವಿಶ್ವಾರಾಧ್ಯ ಪಾರಂಪರ್ಯಮಂ ಕುರಿತು
ವಿರಚಿಸಲು ಬೇಕೊಂದು ಕಾವ್ಯವ-
ನರಿದವರು ತಲೆದೂಗುವೊಲು ಎನೆ
ವಿರಚಿಸಲಿಕುದ್ಯುಕ್ತನಾದೆಸು ನೆಚ್ಚಿ ಗುರುದಯುವ || ೨೧ ||

ಶುದ್ಧವಾದಾಯುವಿನ ವೇದದ
ವೈದ್ಯ ಮಳಲಿ ಬೃಹನ್ಮಠಭವಂ
ಸಿದ್ಧರಾಮಾರ್ಯಂ ಶಿವಾರ್ಚನ ತತ್ಪರಂ ತಾನು
ಇದ್ದು ಹುಬ್ಬಳಿ ನವನಗರದಿಪ್ರ-
ಸಿದ್ಧ ಪಂಚಾಚಾರ್ಯರಾಶ್ರಮು-
ದಿದ್ದು ಬರೆಯಲಿಕೆನ್ನನುತ್ಸಾಹಿಸಿದನುಲ್ಲಸದಿ || ೨೨ ||

ಕುತ್ತಿನೊಳು ನರಳುತ್ತಲಿರ್ಪರ
ಸತ್ತು ಹೋಗುವ ಸಮಯದಲಿ ತಾ-
ನೆತ್ತ ಪೋಗುವದೆಂದು ತಿಳಿಯದ ಜನರ ಕತೆಯಲ್ಲ
ಸತ್ತು ಚಿತ್ತಾನಂದ ಪೂರ್ಣರ
ನಿತ್ಯ ಲೋಕಕೆ ಲೇಸನಾಶಿಸು-
ವುತ್ತಮರ ಗುರುರಾಜಿ ರಾಜರ ನೈಜ ಚರಿತೆಯಿದು || ೨೩ ||

ಜಂಗಮರ ವಾಟಿಕೆಯು ಎಂಬುವ
ಮಂಗಲದ ನಾಮದಲಿ ಸೊಗಯಿಪ
ತುಂಗಪೀಠೊಂದಿಹುದು ವಿದ್ಯಾರ್ಥಿಗಳ ನೆಲೆಯದರ
ಸಂಗಳಿಸಿದುತ್ತುಂಗ ಕೀರ್ತಿಯು
ಹಿಂಗದಿಂದಿಗು ಪರ್ಬುತಿರ್ಪುದು
ಗಂಗೆಯಾತೀರದಿ ವಿರಾಜಿಪ ವಾರಣಾಸಿಯೊಳು || ೨೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದುವೆ ವಿಶ್ವಾರಾಧ್ಯನಿಂದಾ–
ದುದು ಪುರಾತನ ಕಾಲದಿಂಬಂ–
ದುದು ಮಹಾರಾಜಾಧಿರಾಜರ ಮನ್ನಣೆಯಲಿರ್ಕುಂ ।
ಇದುವರೆಗೆ ಶಿವಧರ್ಮಸಂದೇ–
ಶದ ತವರ್ಮನೆಯೆನಿಸುತೊಪ್ಪಿದೆ
ಸದಭಿಮಾನದ ಗೂಡು ಜಂಗಮಕುಲದ ನೆಲೆವೀಡು || ೧೫ ||

ಇಲ್ಲಿ ಯಿಲ್ಲವು ಜಾತಿಭೇದವ–
ದಿಲ್ಲಿ ಯಿಲ್ಲವು ತತ್ತ್ವಭೇದವ–
ದಿಲ್ಲಿ ಯಿಲ್ಲಂ ಯಾವುದೇ ರೀತಿಯ ವಿಭಿನ್ನತೆಯು
ಬಲ್ಲವರು ತಾವಾಗಿ ಪೋಗಿಪ–
ರಿಲ್ಲಿ ವಾಸಿಸುತೋದಿ ಬಹುಜನ–
ರೊಳ್ಳೆ ಮಠ ಪೀಠಗಳ ಪಡೆದರು ವಿಬುಧರೆನಿಸಿಹರು || ೧೬ ||

ಕಾಲಕಾಲಕ್ಕರ್ಹ ಮೂರ್ತಿಗ–
ಳಿಲ್ಲಿ ಪೀಠಾಧೀಶರಾದರು
ಸಲ್ಲಿಸಿಹರುತ್ತಮದ ಸೇವೆ ಸಮಾಜ ಜೀವನಕೆ–
ನಿಲ್ಲದಿಲ್ಲಿಯೆ ಚರಿಸಿ ದೇಶದ–
ಲೆಲ್ಲಕಡೆಯಲಿ ಧರ್ಮ ಮಹತಿಯ
ಲೀಲೆಯಿಂ ತೋರಿದರು ಸಾರಿದರವರು ಸಹಜದಲಿ || ೧೭ ||

ಸಿರಿಜಗದ್ಗುರು ಸಿದ್ಧಲಿಂಗನ
ಸಿರಿಗಿರಿಯ ವಾಗೀಶ ಗುರುವಿನ
ಮೆರೆದ ರಂಭಾಪುರಿಯ ಗಂಗಾಧರ ಗುರೂತ್ತಮನ
ಗಿರಿಯ ಮಹದೀಶ್ವರನ ಮೇಣ್ಹೊ–
ನ್ನರಳಿಪುರ ಕಲ್ಮಠದ ಕರ್ತನ
ಶರಣೆಯಾ ಸಜ್ಜಲದಗಿರಿ ಜೇವರಗಿ ಮಠಪತಿಯ || ೧೮ ||

ಸರುವರೊಳಗಾತ್ಮೀಯ ಭಾವನ
ಗುರುಚರಾಂಘ್ರಿಯೊಳಚಲ ನಿಷ್ಠನ
ಶರಣನೆನಿಸಿದ ಚನ್ನವೀರನ ಚಿಕೆನ ಕೊಪ್ಪರ
ಅರಿದು ಸುಜನ ಮನೋಭಿಲಾಷೆಯ
ಪರಶಿವನ ಕರುಣಾ ವಿಶೇಷದ–
ಲೊರೆದಿಹೆನು ಭಾಮಿನಿಯ ಷಟ್ಪದಿಯಲಿ ಚರಿತ್ರವನು || ೧೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರಬದೂರಿನ ಪಿರಿಜಡೆಯ ಮಠ
ಸರಸಿಯಲಿ ವಿಹರಿಸುವ ಹಂಸನು
ಗುರುಕವಿಯು ಗಂಗಾಧರಾಖ್ಯನು ಷಟ್‌ಸ್ಥಲಬ್ರಹ್ಮಿ
ಹರಸ ಮರ್ಚನ ಪರನು ಪೂಜ್ಯನು
ಶರವಣೋದ್ಭವ ಗೋತ್ರ ಸಂಭವ–
ನೊರೆದನೀ ಸುಶಾವ್ಯ ಗುರುಕಾವ್ಯವನು ಸೇವ್ಯವನು || ೩೦ ||

ಇದರೊಳಗೆ ದೋಷಗಳು ಕಂಡೊಡೆ
ಬುಧರು ತಿದ್ದುವದೆಂದು ಬೇಡುವೆ
ಸದುವಿನಯದಲಿ ಗುಣವ ಕೊಂಬುವುದೆಂದಪೇಕ್ಷಿಸುವೆ
ಚದುರ ಕವಿ ತಾನಿರ್ದರೇಂದಲ್
ಮದನಹರಗುರುಚರರ ಶರಣರ
ಹೃದಯಪೂರ್ವಕ ತುತಿಸದಿರೆ ತತ್ಕಲೆಯುಸಾರ್ಥಕವು || ೩೧ ||

ಇದು ಸುಭಕ್ತಿ ಜ್ಞಾನ ದೀಪಿಕೆ
ಯಿದುವೆ ಶಿವಯೋಗ ಪ್ರದೀಪಿಕೆ
ಯಿದುವೆ ವಾರಾಣಸಿಯ ವಿಶ್ವೇಶ್ವರನ ಭೂಮಿಕೆಯು
ಸದಾಮಲಾನಂದಿಗಳ ಸೂಚಿಕೆ
ಮಧುರ ರಸಭಾವಗಳ ಚಂದ್ರಿಕೆ
ಯಿದುವೆ ವಿಶ್ವಾರಾಧ್ಯ ಪಾರಂಪರ್ಯದಗ್ಗಳಿಕೆ || ೩೨ ||

ಕಲ್ಲಿನಲಿ ಕೆತ್ತಿರುವ ಕಲೆಯೊಲು
ಸಲ್ಲಲಿತ ದೃಶ್ಯದೊಲು ಪ್ರಕೃತಿಯ
ಬಲ್ಲವರ ಮಾತಿನೊಳಗಿರುವ ರಹಸ್ಯದೊಲು ಮೇಣು
ನಲ್ಲೆಯರ ವೈಯಾರದಂದದ–
ಲೊಳ್ಳೆ ನಡೆನುಡಿಯುಳ್ಳಜನದೊಲು
ಮೆಲ್ಲ ಮೆಲ್ಲನೆ ಗುರುಕೃತಿಯು ಮನತಣಿಸಲೋದುಗರ || ೩೩ ||

ವೀರಶೈವಾಚಾರ ಶೀಲರು
ವೀರಶೈವ ವಿಚಾರವೇತ್ತರು
ವೀರಶೈವ ಗುರೂತ್ತಮರ ಗೌರವವನರಿಯಲ್ಕೆ
ವೀರಹರಗುರುಚರರ ಭಜಕರು
ಭಾರತೀಯತೆಗಾಗಿ ಶ್ರಮಿಸುವ
ಸಾರಸಜ್ಜನರೊಲಿದು ಲಾಲಿಪುದೀ ಪ್ರಬಂಧವನು || ೩೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರದಲೀ ಗುರುಚರಿತ್ರವ–
ನೋದು ವುಸುರುವ ಕೇಳ್ವ ಸುಜನರಿ–
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ–
ಗ್ಯಾದಿ ಭಾಗ್ಯವನೀವನಲ್ಲದೆ
ಮೇದಿನಿಯಲಿರುವನ್ನೆಗಂ ಕಾಪಾಡುವಂ ಬಿಡದೆ || ೩೫ ||

ತಿಳಿದ ಕವಿ ನಾನಲ್ಲವಯ್ಯಾ !
ತಿಳಿದ ಜನಗಳ ತೊಡೆಯ ಮೇಲಿರು–
ವೆಳೆಯ ಮಗು ನಾನಯ್ಯ ! ತಿಳಿವಿನ ಬೆಳಗದೆಂತಿಹುದೊ
ಕಲೆಯು ಕಳೆಯೆನಗಿಲ್ಲ ಕವಿತೆಯ
ಸೆಲೆಯು ಚನ್ನಾಗಿಲ್ಲವಾದರು ।
ಮಲಹರನ ಕರುಣಾಕಟಾಕ್ಷದಲಾಯ್ತು ಗುರು ಕಾವ್ಯಂ || ೩೬ ||

ಶ್ರೀ ಗುರುವೆ ಕರುಣಾಸಮುದ್ರವೆ !
ಶ್ರೀ ಗುರುವೆ ಸುರತರುವೆ ಶರಣರ
ಶ್ರೀ ಗುರುವೆ ಸದ್ಗುರುವೆ ಭಕ್ತಿಯಶೋ ಗುರುವೆ ಪರವೆ !
ಶ್ರೀ ಗುರುವೆ ವಿದ್ಯಾಸಮೂಹವೆ !
ಶ್ರೀ ಗುರುವೆ ಸಕಲಾಗಮವೆ ಜಯ !
ಶ್ರೀ ಗುರುವೆ ಮದ್ಗುರುವೆ ವಿಶ್ವಾರಾಧ್ಯ ಜಯಜಯತು || ೩೭ ||

ಮರಬ ಜಡೆ ಮಠದೊಡೆಯನಾದರು
ಸಿರಿಗುಡೂರಕೆ ಬಂದು ನೆಲಸುತೆ
ಹರಮಠವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪುರ–
ದಿರುತ ಯೋಗಾನಂದ ತುಂದಿಲ–
ನೊರೆದ ನೀಕೃತಿಯನು ಜಗದ್ಗುರು ಸತ್ಪರಂ ಪರೆಯ || ೩೮ ||

ಇಂತು ಪ್ರಥಮಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋ ಜಗದ್ಗುರು ವಿಶ್ವಾರಾಧ್ಯಾಯ

ದ್ವಿತೀಯಾಧ್ಯಾಯ

ಭಾ. ಷ.

ಸೂಚನಾ– ಧರೆಗೆ ಪಂಚಾಚಾರ್ಯ ರೈತಂ–
ದರು ಶಿವಾಜ್ಞೆಯನಾಂತು ತೇಜೋ–
ಭರದಿ ಶಿವಧರ್ಮವನು ನೆಲೆಗೊಳಿಸಲಿಕೆ– ಬೆಳೆಸಲಿಕೆ ॥

ಶ್ರೀಶಪೂಜಿತ ಪದಕುಶೇಶಯ
ಶೇಷಭೂಷ ಮಹೇಶ ಪ್ರಮಥಾ–
ಧೀಶ ಗೌರೀಹೃತ್ಪ್ರಕಾಶ ಗಿರೀಶ ಭೂತೇಶ
ನಾಶರಹಿತ ಸ್ವಶರಣಾಂತ–
ರ್ವಾಸ ಹೃತಕೀನಾಶ ಮಾಯಾ–
ಪಾಶಹರ ವಿಶ್ವೇಶ ಪಾಲಯ ಮಾಂಚಿದಾಕಾಶ ॥ ೧ ॥

ಬಿಳಿಯಬಂಣವು ಬೆಟ್ಟವಾದುದೊ
ತಿಳಿಯೆ ಬೆಳದಿಂಗಳದು ಭೋಂಕನೆ
ತಳೆದುಬಿಟ್ಟಿತೊ ಶೈಲದಾಕೃತಿ ಪೇಳಲೇನದನು
ಬಿಳಿಯ ಮೈಯನ ಮೈಯಬೆಳಗದು
ಗಳಿಲನೆಯೆ ತಾ ಗಟ್ಟಿಯಾಯ್ತೆನೆ
ತಳತಳಿಸಿ ತೊಳಗಿದುದು ಕೈಲಾಸಾಚಲಂ ಧವಲಂ ॥ ೨ ॥

ಶಿಲೆಯು ಚಿಂತಾಮಣಿಯು ಭೂರುಹ–
ಗಳವು ಕಲ್ಪಸುವೃಕ್ಷಗಳು ತಾವ್
ಜುಳಜುಳನೆ ಹರಿವ ಪ್ರವಾಹಗಳಮೃತ ರಸರುಚಿಗಳ್
ಬಳಲಿಕೆಯು ಬೇಸರಿಕೆ ಬಾಧನ–
ಗಳು ಧರಾತಳದಲ್ಲಿ ಯಲ್ಲದೆ
ಲಲಿತ ಕೈಲಾಸದೊಳಗಿರ್ಪವೆ ! ಶಿವ ಮಹಾತ್ಮ್ಯೆಯದು ॥ ೩ ॥

ಅಲ್ಲಿ ಶಿವಸಾಲೋಕ್ಯ ಪಡೆದವ–
ರಲ್ಲಿ ಶಿವಸಾಮೀಪ್ಯ ಪಡೆದವ–
ರಲ್ಲಿ ಶಿವಸಾರೂಪ್ಯ ಪಡೆದವರುಂಟು ಸಾಯುಜ್ಯ
ಸಲ್ಲುವೆಲ್ಲ ಪದಂಗಳಂ ಪಡೆ–
ದಲ್ಲಿ ಸಂಖ್ಯಾತೀತ ಪ್ರಮಥರು
ಫಾಲನೇತ್ರ ಪ್ರಸಾದದಿಂದಾನಂದ ಮಯರವರು ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧ್ಯಾನ ಧಾರಣ ಮೌನ ಪ್ರಮುಖ–
ಪ್ರಾಣ ಆಯಾಮದೊಳು ಸಿಲುಕಲು
ಜಾಣ ಮಾರುತನಂಜೆ ಸಾನಂದಾದಿ ಮುನಿಗಣಕೆ
ಪ್ರಾಣದೇವನು ಕಂಪಿನಿಂಪಿನ
ಕಾಣಿಕೆಯ ತಾನಂತು ನೀಡುತ
ಪ್ರಾಣಭಿಕ್ಷೆಯಬೇಡುತಿಹನಾ ಗಿರಿಯಗಹ್ವರದೊಳ್ || ೫ ||

ಬೇವು ಬಕುಲ ವಶೋಕ ಬಿಲ್ವವು
ಮಾವು ಸಂಪಗೆ ಪಾರಿಜಾತವು
ಹಾವಿನಂದದಲಪ್ಪಿ ಹಬ್ಬಿಹ ಮೊಲ್ಲೆ ಜಾಜಿಗಳು
ಜಾವ ಜಾವಕು ಕಂಪುಬೀರುವ
ಪೂವ ಮುತ್ತಿಹ ಅಳಿಗಳಾವಳಿ
ಗಾವರಿಸ ತೊಡಗಿಹುದು ಬಂಡನ್ನುಂಡು ತದ್ವನದಿ || ೬ ||

ತೆಂಗುಕೌಂಗು ಪರಂಗಿ ಕಿತ್ತಳೆ
ರಂಗು ಪೇರಲಬಾಳೆ ತಾಳೆ ಮು–
ನಂಗೊಳಿಪಸುರಸಾಲ ಸಾಲ ತಮಾಲ ವಿತ್ಯಾದಿ
ಹಿಂಗದೆಲ್ಲರಭೀಷ್ಟ ವೀವದ್ರು–
ಮಂಗಳೆಸೆದವು ಪೇಳಲೇಂ ಸ–
ನ್ಮಂಗಲದ ಮಂದಾರ ಮುಖ್ಯಗಳಾಗಿರೀಂದ್ರನೊಳು || ೭ ||

ಎಲ್ಲಿಯುಂ ಜ್ಯೋತಿರ್ಲತಾವಳಿ–
ಯೆಲ್ಲಿಯುಂ ಸಂಜೀವನಾದಿ ಮು–
ತಲ್ಲಿಕಾ ಸಿದ್ಧೌಷಗಳುರೆ ಬೆಳಗುತಿಪವಲ್ಲಿ
ಎಲ್ಲಿನೋಡಲು ಸಿದ್ಧಮೃಗಗಳ–
ದೆಲ್ಲಿ ನೋಡಲು ಪರುಷ ಮೃಗತತಿ
ಯೆಲ್ಲಿಯುಂ ಹರಿಚಿತ್ರ ಮೃಗ ಶರಭಾದಿ ಪಕ್ಷಿಚಯಂ || ೮ ||

ತೊರೆದಕೆಚ್ಚಲ ಕರುವಿಗೂಡಿದ |
ಕಿರಿದುಕೊಂಬಿನ ಕಪಿಲೆ ಪೊದೆಯೊಳು
ಗರಿಕೆ ಮೇಯುವ ಮೊಲವು ಬಣ್ಣದ ಗರಿಯನರಳಿಸಿದ |
ವಿರಹನಾಟ್ಯದ ನವಿಲು ಮಾಮರ
ದರೆಯಮೇಲ್ಸರವಿಟ್ಟ ಕೋಗಿಲೆ
ಮರಕೆ ಮರದಿಂ ಪಾರ್ವಗಿಳಿಯಿಂ ಬನವುಕಂಗೊಳಿಕುಂ || ೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂದರದಿ ವಾಸಿಸುವ ಕಿನ್ನರ
ಸುಂದರಿಯರಾ ಗಾನ ಲಹರಿಯು
ಸಂದುಸಂದನು ತುಂಬಿ ಮಾರ್ದನಿ ತಾನು ಹೊರಹೊಮ್ಮೆ
ನಿಂದುಲಾಲಿಸುತಿರುವ ದಿವಿಜರು
ಕಂದರವೆ ಪಾಡುತ್ತಲಿದೆ ಕೇ–
ಳೆಂದು ತಮ್ಮೊಳು ತಾವುನುಡಿದು ವಿನೋದಿಸುತ್ತಿಹರು ॥ ೧೦ ॥

ಹಲವು ಬ್ರಹ್ಮಾಂಡಗಳ ಶಚಿವಾಕ್
ಹಲವು ಬ್ರಹ್ಮಾಂಡೇಂದಿರೆಯರ್ರೈ
ಹಲವು ಬ್ರಹ್ಮಾಂಡಗಳ ವಿಷ್ಣ್ವಾದಿಗಳು ಭಕ್ತಿಯೊಳು
ಹಲವು ಬ್ರಹ್ಮಾಂಡಗಳ ಸುರಪರು
ಹಲವು ಬ್ರಹ್ಮಾಂಡಗಳ ಬೊಮ್ಮರು
ನಿಲದೆ ಶಿವಸಂದರ್ಶನಕೆ ಕೈಲಾಸಕ್ಕೆ ಬರುತಿಹರು ॥ ೧೧ ॥

ಶಿವನ ನಾಮವ ನಲಿದು ನೆನೆವುದು
ಶಿವನ ಮಂತ್ರವ ಜಪಿಸಿ ನಲಿವುದು
ಶಿವನ ಮೈಮೆಯು ಕೇಳಿಪೇಳ್ವುದು ದೇವತಾವೃಂದಂ ।
ಶಿವನ ಕರುಣಾದೃಷ್ಟಿಗೋಸುಗ
ಶಿವನ ಪ್ರಸಾದ ಪ್ರಾಪ್ತಿಗೋಸುಗ
ಶಿವನೆ ಸಾಂಬನೆ ಹರಹರ ಮಹಾದೇವೆಂದು ಘೋಷಿಪುದು ॥ ೧೨ ॥

ಗಿರಿಯ ಮಧ್ಯ ಸುವರ್ಣ ಮಂದಿರ–
ವಿರಲದರೊಳುಂ ಮಣಿಯ ಮಂಟಪ
ಮೆರೆಯೆ ಪ್ರಣವಾಸನದಿ ಪಂಚಾನನನು ರಂಜಿಸಿದಂ
ಗಿರಿಜೆ ಯೆಡತೊಡೆ ಮೇಲೆ ಮಂಡಿಸೆ
ಕರಿ ಮುಖನು ಷಣ್ಮುಖನು ಮುಂಬದಿ–
ಯಿರಲು ಶಿವಸಭೆ ಸುಪ್ರಸನ್ನತೆಯಿಂದ ತುಳುಕಿದುದು ॥ ೧೩ ॥

ಪಾಕ ಶಾಸನ ವಹ್ನಿಯಮ ಮುಖ
ನಾಕಭವ ಸಮುದಾಯ ಮದುಬಲು
ಜೋಕೆಯಿಂ ನಯ ವಿನಯದಿಂ ಕೈಮುಗಿದು ಶಂಕರನೆ
ಕಾಕುದೂರವ ಮಾಡಿ ಕರುಣಾ–
ಲೋಕನಾಮೃತ ವೆರೆದು ನಮ್ಮನು
ಸಾಕು ನೀನೆಂದೆನುತ ಕೀರ್ತಿಸಲೆಸೆದನಸಮಾಕ್ಷಂ ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲ ಮದ ಮರ್ದನವ ಮಾಡಿದ
ನೀಲಲೋಹಿತ ಬಾಲಚಂದ್ರನ
ಶೀಲೆ ಗಂಗೆಯು ಮುಡಿದ ಕೆಂಜೆಡೆ ಫಣಿಪಕುಂಡಲವು
ಲೀಲೆ ಯಿಂದರೆ ಶಿವಕಪೋಲದಿ
ಬಾಲೆಯು ಮೆಯಾ ಕಣ್ಣೊಳಾಡಿದ
ಮೂಲ ಮೂರ್ತಿಯು ಶೂಲಪಾಣಿಯು ಚಲ್ವಿನಾಗರನು ॥ ೧೫ ॥

ಪಿಂಡದಂಡವ ಬೊಮ್ಮನಂಡವ–
ನಂಡಲೆ ಯದಂತೊಂದು ಮಾಡಿದ
ಪಂಡಿತೋತ್ತಮ ಪಾರ್ವತೀಪತಿ ಪನ್ನಗಾಭರಣಂ
ಉಂಡವನು ನಂಜನ್ನು ಬಿಡದಲೆ
ಚಂಡದೈತ್ಯರ ರುಂಡ ತರಿದು–
ದ್ದಂಡ ರೆನಿಸಿದ ಗಂಡರಿಗೆ ತಾಗಂಡನಾಗಿಹನು ॥ ೧೬ ॥

ವ್ಯಕ್ತಬಹು ವಿಧರೂಪ ಧಾರಿಣಿ
ಯುಕ್ತದಿಚ್ಛಾಜ್ಞಾನ ಕ್ರಿಯೆಯಿಂ
ಮುಕ್ತಿದಾಯಕದಾತ್ಮ ವಿದ್ಯಾಜ್ಞಾನ ದಾಯಿನಿಯು
ಮುಕ್ತಿಕಾರಕ ನಾತ್ಮಲಿಂಗನ
ಭಕ್ತ ವತ್ಸಲ ಭಾವನಾತ್ಮನ
ಶಕ್ತಿಯವಿನಾಭಾವಸಂಬಂಧದಲಿ ಕಂಗೆಸೆದಳ್ ॥ ೧೭ ॥

ನೋಡಿದರಿಗಾನಂದ ನೀಡುವ
ಬೇಡಿದರೆ ಸೌಭಾಗ್ಯ ವೀಯುವ
ಕಾಡಿ ಬೇಡಲಿಕಮೃತ ವಿದ್ಯೆಯನಿತ್ತು ಪಾಲಿಸುವ
ಕೂಡಿ ಶಂಕರನಂಕ ವೇರಿದ
ನಾಡೆ ವಿಶ್ವದ ಮಾತೆಪೂತೆಯ
ನೋಡಿ ಗಣತತಿ ಭಕ್ತಿಭಾವದಿ ಮೈಯಮರೆದಿಹುದು ॥ ೧೮ ॥

ರೇಣುಕನು ದಾರುಕನು ಘಂಟಾ–
ಕರ್ಣನಲ್ಲದೆ ಗಣ ವಿಭೂಷಣ
ಧೇನು ಕರ್ಣನು ವಿಶ್ವಕರ್ಣನು ಪ್ರಥಮದಾಚಾರ್ಯರ್
ಕಣ್ಣು ಮೂರುಳ್ಳವನ ಎಡಬಲ
ಮಾಣದೆಸೆಯುತ್ತಿರ್ದರಲ್ಲಿ–
ಧ್ಯಾನಿಸುತ ಹೃದಯಾಂತರದಿ ಪರಶಿವ ಪದಾಂಬುಜವ ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂಬುಕಂಧರೆಯೂರ್ವಶಿಯು ಸ-
ದ್ರಂಭೆ ಸಸಿಮೊಗದಾ ಸುಕೇಶಿಯು
ಕುಂಭ ಕುಚದ ತಿಲೋತ್ತಮೆಯು ಮೇನಕೆಯು ಚಲ್ವಾಂತ
ಬಿಂಬರುಚಿರಾಧರೆ ಘೃತಾಚಿಯು
ನಂಬಿನಲಿದಪ್ಸರಸೆಯರ ಸುಕ-
ದಂಬವದು ಪಾಡಿದುದು ಶಿವನಸ್ತೋತ್ರಮಂ ಪದೆದು ॥ ೨೦ ॥

ನಲ್ಲೆಯರು ಕನ್ನಡಿಯ ಕದಪಿನ
ಮೆಲ್ಲಡಿಯ ಸೊಗಯಿಸುವ ಗಿಳಿಗಳ
ಸೊಲ್ಲಿನಾ ಕುಂಭಸ್ತನದ್ವಯದಬ್ಜನಯನೆಯರು
ಸೊಲ್ಲುಸೊಲ್ಲಿಗೆ ಶಿವನೆ ಶಂಕರ
ಶೂಲಿ ಗೌರೀರಮಣ ನತಸುರ-
ವಲ್ಲರಿಯೆ ಹರನೆಂದು ನುತಿಪರು ರುದ್ರಕನ್ಯೆಯರು ॥ ೨೧ ॥

ರನ್ನ ಕಂಕಣ ಝಣಝ ಝಣರೆನೆ
ರನ್ನ ಹಿಡಿಕೆಯ ಬಿಳಿಯಚಾಮರ-
ವನ್ನು ಚಂದದಿ ಬೀಸುತಿಹರ್ರೈ ದೇವಕನ್ಯೆಯರು
ಮಾಣದಾಡುವ ಚಾಮರಂಗಳೆ
ಚನ್ನ ಶಿವಮುಖ ಪೂರ್ಣತೇಜದ
ಪೊನ್ನ ಪಂಕಜವನ್ನು ಮುತ್ತಿದ ರಾಜಹಂಸಾಳಿ ॥ ೨೨ ॥

ಕಂತು ಪಿತನಾಣತಿಯಲಾಸಿರಿ
ಕಂತು ಹರನೋಲಗದಿ ಪಿಡಿದಳು
ನಿಂತಮನದಿಂ ಪೂರ್ಣಚಂದ್ರನ ಪೋಲ್ವ ಬಿಳುಗೊಡೆಯ
ತಂತಿವಾದ್ಯದ ವೀಣೆಯಿಂದಲ-
ನಂತ ಶಿವಭಾವದಲಿ ಶಾರದೆ
ನಿಂತುಗಾನವ ಮಾಡೆ ಪುಳಕಿತಮಾಯ್ತು ಶಿವಸಭೆಯು ॥ ೨೩ ॥

ಬಾರಿಸಿದನಾ ನಂದಿ ಮದ್ದಳೆ
ಬಾರಿಸಲು ಪರಿಯಾಗ ತಾಳವ
ತೋರಿ ಲಿಂಗಾಂಗೈಕ್ಯಪರಿಯನು ಭೃಂಗಿ ತಾಕುಣಿದಂ
ಚಾರುರಂಭಾದ್ಯಪ್ಸರೆಯರುಂ
ಬಾರಿಬಾರಿಗು ನರ್ತಿಸಿಹರು-
ಚ್ಚಾರ ಗೈದನು ವಿಧಿಯು ವಿಧಿವದ್ವೇದ ಮಂತ್ರವನು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜರೆಯ ಮರಣದ ಭಯುವದಿಲ್ಲದ-
ವರು ಶಿವಾದ್ವೈತಾತ್ಮ ತೃಪ್ತರು
ಪರಮಪದರುಚಿ ಶಿವನ ಯೋಗದಲರಿತ ಶಿವಗಣರು
ಹರನಸೇವೆಯೊಳಚಲನಿಷ್ಠರು
ನಿರುತ ವಾತ್ಮಾನಂದ ರತಿಗಳು
ಹರಿವಿರಿಂಚಿಗಳೈಸಿರಿಯ ಬಯಸದವರೆಸೆದರ್ || ೨೫ ||

ಯಾರಕಾಂಕ್ಷೆಯ ಫಲವೆಸುರತರು-
ವಾರ ವಿಕ್ರಮ ಮೃತ್ಯುಮಾರಕ-
ವಾರು ಕರ್ಮದ ಮತ್ತು ಕಾಲದ ಮಿತಿಯ ಮೀರಿಹರೊ
ಆರು ಶಿವಸಾಮೀಪ್ಯಸಾರೂ-
ಪ್ಯಾರು ದಿವ್ಯ ಪ್ರಮಥವರ್ಯರ-
ಪಾರ ಮಹಿಮೆಯ ಶಿವನಸೇವೆಯಲವರೆ ಮೊದಲಿಗರು || ೨೬ ||

ಸುರರು ರುದ್ರರು ಯಕ್ಷ ವಿದ್ಯಾ-
ಧರರು ಸಿದ್ಧರು ಸಾಧ್ಯ ದಾನವ-
ರರರೆ ಯಾದಿತ್ಯಾದಿಗಳು ಕಿಂಪುರುಷ ಕಿನ್ನರರು
ಭರದಿ ಗೌತಮ ವಾಮದೇವರು
ನೆರೆದರೈ ಮುನಿಪುಂಗವರ್ಕಳು
ಗಿರಿಶನೊಡ್ಡೋಲಗದಿ ಭಯಭಕ್ತಿಯಲಿ ಕಿಕ್ಕಿರಿದು || ೨೭ ||

ಪಲವಗೆಯ ಸಿಂಗರದ ಸಭೆಯೊಳು
ಮಲಹರನು ನೋಡುತ್ತ ಸಂತಸ-
ದೊಲಿದು ನಗಸುತೆಗೆಲ್ಲವನು ಕಣ್ಸನ್ನೆ ಮಾತ್ರದಲಿ
ಸಲೆವಿಡದಲೊಂದೊಂದನರವುತ
ನೆಲಸಿ ಮಣಿಮಯಸಿಂಹ ವಿಷ್ಟರ-
ತಲದಿ ಸಂಶೋಭಿಸಿದನಭವಂ ದುರಿತವನದಾವಂ || ೨೮ ||

ತನ್ನ ಸುತ್ತಲು ಸೇವೆ ಮಾಡುವ
ಚನ್ನಭಕ್ತರ ಹೃದಯ ಪಾತ್ರದಿ
ಚನ್ನ ಶಿವತಾ ಚೆಲ್ಲುತಿಹನ್ನೈ ದಿಟ್ಟಿ ಮಲ್ಲಿಗೆಯ ।
ಉನ್ನತಾಸನದಲ್ಲಿ ಮಂಡಿಸಿ
ಚನ್ನ ಪಾರ್ವತಿ ಪತಿಯು ದರ್ಶನ-
ವನ್ನು ಪಡೆದವರೆಲ್ಲರಾತ್ಮದಿ ತಾನೆ ಬೆಳಗಿಹನು || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೋಮಶೇಖರ ದೇವನಿಕರ-
ಕ್ಕೊಮ್ಮೆ ಯಾದೇಶವನು ನೀಡುವ-
ನೊಮ್ಮೆ ಗಂಧರ್ವರ ಮನೋಹರ ಗಾನವಾಲಿಸುವಂ
ಒಮ್ಮೆ ವಿಷ್ಣುಬ್ರಹ್ಮರೊಂದಿಗೆ
ಸುಮ್ಮನಾಲಾಪವನು ಗೈಯುವ
ನೊಮ್ಮೆ ನೋಡುವ ನೃತ್ಯವೈಭವ ದೇವಕನ್ಯೆಯರ ॥ ೩೦ ॥

ಒಮ್ಮೆ ಗೌರವಿಸುವನು ಋಷಿಗಳ-
ನೊಮ್ಮೆ ವೇದೋಚ್ಚಾರವಾಲಿಸು-
ವೊಮ್ಮೆ ಗೌರಿಯ ವದನ ಕಮಲದಿ ದಿಟ್ಟಿಯಿರಿಸುತಿಹಂ
ಒಮ್ಮೆ ಭೃಂಗಿಯ ಹಾಸ್ಯನರ್ತನ-
ವೊಮ್ಮೆ ನೋಡುತ ಮುಗುಳುನಗುತಿಹ-
ನೊಮ್ಮೆ ತನ್ನೊಳು ತಾನೆ ನೋಡುವನೆಲ್ಲರಾತ್ಮವನು ॥ ೩೧ ॥

ಉದಯನೇಸರನೆಳೆಯ ಕಿರಣವು
ಮುದದಿಬೆರಿಸಿದ ಕಮಲದಂದದಿ
ಮಧುರ ಮೂರ್ತಿಯ ಮೂರು ಕಂಗಳು ವಿಕಸಿತಗಳಾಗಲ್,
ಅಧರಪಲ್ಲವದಿಂದಲತಿ ಮೃದು
ಮಧುರವಾಣಿಯು ಕೇಳ್ದು ಸಭೆ ತಾ
ಸುಧೆಯನೀಂಟಿದ ಪಾಂಗು ಪರವಶವಾಗಿ ಕೂತಿಹುದು ॥ ೩೨ ॥

ದೇವದೇವನು ತನ್ನ ಸಭೆಯೊಳು
ದೇವಗಣಗಳ ಮಧ್ಯ ಸೊಗಯಿಸು-
ವೈವ ರಾಚಾರ್ಯರನು ಕರೆದನು ವೀಳ್ಯವೀಯಲ್ಕೆ
ನೀವು ಪ್ರತಿಯುಗದಲ್ಲಿ ಗೈದೊಲು
ಭೂವಿಭಾಗದಲವತರಿಸಿ ವರ-
ಶೈವ ಮತ ನೆಲೆಗೊಳಿಸಿ ಬೆಳೆಸುವದೆಂದು ಬೆಸಸಿದನು ॥ ೩೩ ॥

ಏನು ಕಾರಣವೆನಲು ಧರ್ಮ-
ಗ್ಲಾನಿಯಾಗುತ್ತಿಹುದು ಹೆಚ್ಚಿನ
ಹಾನಿಯಾಗುತ್ತಿಹುದು ಹಾಹಾಕಾರವತಿಯಕ್ಕು
ಕ್ಷೋಣಿಯಲಿ ಧರ್ಮಾಧಿಕಾರದಿ
ಹಾನಿಗೀಡಪ್ಪುದನು ತಪ್ಪಿಸಿ
ಮಾನವನು ತಾ ದೇವನೆಂಬುವದನ್ನು ಬೋಧಿಪುದು ॥ ೩೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗವೆಂದಾವುದನು ತಿಳಿಯುವ–
ದಂಗವೆಂದಾವುದನು ಕರೆವರು ?
ಲಿಂಗಮೇಣಂಗಗಳ ಸಂಗಮವಾಗೆ ಕೈವಲ್ಯಂ
ಲಿಂಗವನು ತಾನೆನುತಲರ್ಚಿಸಿ
ಲಿಂಗವದು ತಾನೆಂದು ಭಾವಿಸಿ
ಲಿಂಗವೇ ತಾನಪ್ಪ ತತ್ತ್ವವ ಸಾರಿ ಬೀರುವದು || ೩೫ ||

ಕಲಿಪುರುಷನಾಗಮನವಾಗಿದೆ
ಕಲಿಯು ಕಾಲದಿ ಜನವು ಕೆಡುತಿದೆ
ಕಲಿಯುಗದಿ ಜನಮನವು ಪರಿಸರ ಸಹಿತ ಕಲುಷಿತವು
ಖಿಲವು ಮನುಧರ್ಮವು ಧರಿತ್ರೀ-
ತಲದಿ ಸುಸ್ಥಿರಗೊಳಿಸಿ ಬೆಳೆಯಿಸಿ
ತಳುವ ದಿಲ್ಲಿಗೆ ಪೋಗಿ ಬಪ್ಪುದು ಎಂದನಿಂದುಧರಂ || ೩೬ ||

ಬನ್ನಬಡುತಿಹ ಭಕ್ತರುನ್ನತಿ
ಗೆನ್ನ ಪರವದ್ವೈತ ಶಾಸ್ತ್ರವ–
ನಿನ್ನು ಮರ್ತ್ಯದಿ ಲಿಂಗ ಗರ್ಭದಿ ಪುಟ್ಟಿ ಸಾರುವದು
ನನ್ನ ಮಹಿಮೆಯು ಜನರ ಹೃದಯವ–
ನಿನ್ನು ಹದಗೊಳಿಸುತ್ತೆ ಪೇಳ್ವುದು
ನನ್ನ ಕೃಪೆಯಿದೆ ತೆರಳಿರಖಿಳರು ಸೇವಿಸುವರೆಂದಂ || ೩೭ ||

ರೇಣುಕನು ದಾರುಕನು ಘಂಟಾ–
ಕರ್ಣನಭವ ಪ್ರೇಮಪಾತ್ರರು
ಧೇನುಕರ್ಣನು ವಿಶ್ವಕರ್ಣನು ಐವರಾರಾಧ್ಯರ್
ಆಣತಿಯ ಕೈಗೊಂಡು ಮನದೊಳ–
ಗೇನನುಂ ಶಂಕಿಸದೆ ದೇವನೆ
ನೀನೆ ಗತಿ ಮತಿಯೆಂದು ನಡೆತಂದರು ಮಹೀತಲಕೆ || ೩೮ ||

ಆದರದಲೀ ಗುರುಚರಿತ್ರವ–
ನೋದುವುಸುರುವ ಕೇಳ್ವ ಸುಜನರಿ–
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಪರಿಸುತಾರೋ–
ಗ್ಯಾದಿ ಭಾಗ್ಯವ ಕರುಣಿಸುವನ್ನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂ ಬಿಡದೆ || ೩೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುರಬ ಜಡೆಮಠದೊಡೆಯನಾದರು
ಸಿರಿಗುಡೂರಕೆ ಬಂದು ನೆಲಸುತೆ
ಹರಮತವ ಸೇವಿಸುವ ಗಂಗಾಧರ ಶಿವಾಚಾರ್ಯ್ಯಂ
ಹರುಷದಿಂ ಭ್ರೂಲತೆಯ ನವಪುರ–
ದಿರುತ ಯೋಗಾನಂದ ತುಂದಿಲ–
ನೊರೆದನೀ ಕೃತಿಯನು ಜಗದ್ಗುರು ಸತ್‌ಪರಂಪರೆಯ || ೪೦ ||

ಇಂತು ದ್ವಿತೀಯಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋ ಭಗವತೇ ಭರ್ಗಾಯ

ತೃತೀಯೋಧ್ಯಾಯಃ

ಭಾ. ಷ.

ಸೂಚನಾ— ಮೊದಲಿನಾನಂದೆಂಬಕಾನನ
ವದರೊಳುಂ ಹರಿಕೇಶನಂದನ
ವದರೊಳಗೆ ಚಿತ್ಪ್ರೀತ ವಿಶ್ವಾರಾಧ್ಯ ನಿರ್ಮಿಸಿದಂ ||

ವಿಶ್ವನಾಥನು ವಿಶ್ವಪಾಲನು
ಶಾಶ್ವತದ ಸುಖವೀವ ದೇವನು
ವಿಶ್ವವಂ ಲೀಲಾವಿನೋದದಿ ಸೃಜಿಸಿ ನಲಿದವನು
ಪಾಶನಾಶನು ಲಿಂಗರೂಪನು
ಶೋಷಿಸುತ ಕಲ್ಮಷವನೆಲ್ಲವ
ಪೋಷಿಸಲಿ ! ಸಂತೋಷದಿಂದಂ ಸುಜನಸಂಕುಲವ || ೧ ||

ಏಕಾಕ್ಷರೋದ್ವ್ಯಕ್ಷರಶ್ಚ ತ್ರ್ಯಕ್ಷರಶ್ಚತುರಕ್ಷರಃ
ಪಂಚಾಕ್ಷರಃ ಕೃತಯುಗೇ ಪಂಚನಾಮಾನಿ ಸರ್ವಶಃ || ೧ ||

ಏಕವಕ್ತ್ರ ಶಿವಾಚಾರ್ಯೋ ದ್ವಿವಕ್ತ್ರಾರಾಧ್ಯಕೋ ಮತಃ
ತ್ರಿವಕ್ತ್ರ ದೇಶಿಕೇಂದ್ರಶ್ಚ ಚತುರ್ವಕ್ತ್ರ ಶಿವಾಭಿದಃ || ೨ ||

ಪಂಚವಕ್ತ್ರ ಗಣೇಶಾಖ್ಯಃ ಪಂಚಾರಾಧ್ಯಾಯಥಾಕ್ರಮಾತ್
ಪಂಚಾಭಿದ ತಯೂಜಾತಾಃ ತ್ರೇತಾಯಾಂ ಪರಿಕೀರ್ತಿತಃ || ೩ ||

ರೇಣುಕೇಶೋ ದಾರುಕೇಶೋ ಘಂಟಾಕರ್ಣ ಗಣೇಶ್ವರಃ
ಧೇನುಕರ್ಣೋ ವಿಶ್ವಕರ್ಣೋ ದ್ವಾಪರೇ ಪಂಚ ನಾಮಭಿಃ || ೪ ||

ಶ್ರೀ ರೇವಣ ಶಿವಾಚಾರ್ಯೋ ಮರುಲಾರಾಧ್ಯ ದೇಶಿಕಃ
ಏಕೋರಾಮ ಶಿವಾಚಾರ್ಯೋ ಪಂಡಿತಾರಾಧ್ಯ ದೇಶಿಕಃ || ೫ ||

ವಿಶ್ವಾರಾಧ್ಯ ಶಿವಾಚಾರ್ಯೋ ಪಂಚಸನ್ನಾಮ ಮಂಡಿತಾಃ
ಕಲೌಪಂಚ ಶಿವಾಚಾರ್ಯಾಃ ಪ್ರಸಿದ್ಧಾಃಖಿಲು ಸರ್ವಶಃ || ೬ ||

ಬೇರೆ ಬೇರೆಯ ಯುಗಗಳಲ್ಲಿಯು
ಬೇರೆ ಬೇರೆಯ ನಾಮಗಳು ತಾವ್
ಸೇರಿಕೊಂಡವು ಪಂಚಆಚಾರ್ಯರಿಗೆ ತಿಳಿಯಲ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾರಿಹುದು ಶಿವನಾಗಮವದೀ—
ಕಾರಣದಲಿ ಕಲಿಯ ಯುಗಕ್ಕನು—
ಸಾರವಾಗಿಯೆ ನಾಮ ನಿರ್ದೇಶವನು ಮಾಡಿಹುದು ॥ ೨ ॥

ಸುಕ್ಷಮದ ಕೃತಯುಗದಿಲಸದೇ—
ಕಾಕ್ಷರಂ ದ್ವಕ್ಷರನು ತ್ರ್ಯಕ್ಷರ
ಮೋಕ್ಷವಂ ಚತುರಕ್ಷರಂ ಪಂಚಾಕ್ಷರಂ ಎನಿಪರ್
ಈ ಕ್ಷಿತಿಯೊಳು ತ್ರೇತೆಯೊಳು ಕ್ರಮದಿಂ
ದಕ್ಷನೇಕಾಸ್ಯಂ ದ್ವಿಮುಖನಸ—
ಮಾಕ್ಷ ತ್ರಿಮುಖಂ ನಾಲ್ಮೊಗಂ ಪಂಚಾಸ್ಯನೆನಿಸಿಹರು ॥ ೩ ॥

ಸೋಮುಸದ್ಯೋಜಾತ ಭಾಸುರ
ವಾಮದೇವಾಘೋರ ತತ್ಪುರು—
ಷಾಮಳೇಶಾನ ಮುಖಗಳಿನುದಯಿಸುತೆ ಪೂರ್ವಂ
ಶ್ರೀ ಮಹಾರೇಣುಕನು ದಾರುಕ
ಸ್ವಾಮಿಘಂಟಾಕರ್ಣ ಗೋಕ—
ರ್ಣಾ ಮಹತ್ತರ ವಿಶ್ವಕರ್ಣರ್ ದ್ವಾಪರದಲೆಸೆದರ್ ॥ ೪ ॥

ವೇದ್ಯಕಲಿಯೊಳಗಾ ರೇವಣಾ—
ರಾಧ್ಯ ಮರುಳಾರಾಧ್ಯ ಶೃತಿತತಿ
ವೇದ್ಯನೇಕೋರಾಮ ಸನ್ನುತ ಪಂಡಿತಾರಾಧ್ಯಂ
ಆದ್ಯ ವಿಶ್ವಾರಾಧ್ಯನೆಂಬುವ
ಹೃದ್ಯನಾಮಗಳಾಂತು ಜಗದಾ—
ರಾಧ್ಯರೆಸೆದರ್ ಶಿವಮಹೋಜ್ವಲ ತೇಜರುನ್ನತರು ॥ ೫ ॥

ಕೊನಲುಪಾಕದ ಲಿಂಗಗರ್ಭದಿ
ಜನಿಸಿ ಘಟಭವನಿಷ್ಟದೊಲುತಾ
ಘನತಮದ ಷಟ್‌ಸ್ಥಲದ ತತ್ತ್ವವ ನವಗೆ ಬೋಧಿಸಿ ಮೇಣ್
ಕೊನೆಗೆ ರಂಭಾಪುರಿಯೊಳುಂ ರೇ—
ವಣ ಮಹಾಗುರು ವೀರಸಿಂಹಾ—
ಸನವ ನಿರ್ಮಿಸಿ ವೀರಶೈವವ ರಕ್ಷಿಸಿದನಂದು ॥ ೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರಮೆಸೆಯುವಾ ವಟ ಕ್ಷೇತ್ರದ-
ಲಿರುವ ಸಿದ್ಧೇಶ್ವರನೊಳುದಯಿಸಿ
ಮುರಿದು ಮಾಯೆಯುನುಜ್ಜಯನಿಯಲಿ ಧರ್ಮಪೀಠವನು
ನಿರಮಿಸುತ ತಾ ವೀರಶೈವದ
ಹಿರಿಮೆ ಹೆಚ್ಚಿಸಿ ಶಿಷ್ಯಕೋಟಿಗೆ
ಹರನ ತತ್ತ್ವವನೊರೆದು ಮರುಲಾರಾಧ್ಯ ಸೊಗಯಿಸಿದಂ ॥ ೭ ॥

ಮೆರೆವ ದಾಕ್ಷಾರಾಮಲಿಂಗದ-
ಲಿರದೆ ಪುಟ್ಟಿ ಹಿಮಾಚಲಾಗ್ರದ
ಲಿರುವ ಕೇದಾರದಲಿ ವಿರತಿಯ ಪೀಠವನು ಕಟ್ಟಿ
ನರಪತಿ ಸಮರ್ಚಿತ ಪದಂ ತಾ
ಭರತಖಂಡೋತ್ತರದಿ ಶಿವಮತ
ಮೆರೆಯಿಸಿದ ನೆಲೆಗೊಳಿಸುತೇಕೋರಾಮ ಗುರುರಾಜಂ ॥ ೮ ॥

ಗಿರಿಯ ಶಿವಲಿಂಗದೊಳು ತಾನವ-
ತರಿಸಿಯಲ್ಲಿಯೆ ಸೂರ್ಯಪೀಠವ
ನಿರಮಿಸುತ ಬುಧವೃಂದ ವಂದಿತನಾಗಿ ಶಿವಮತವ
ಧರಣಿಯಲಿ ನೆಲೆಗೊಳಿಸಿ ಬೆಳಸುತೆ
ಸರುವರಿಗೆ ಶಿವಧರ್ಮ ಮಹತಿಯ
ನೊರೆದ ಮಹಿಮನು ಪಂಡಿತಾರಾಧ್ಯನು ಜಗನ್ನುತನು ॥ ೯ ॥

ಕಾಶಿ ಯೀಶನ ರಾಜಧಾನಿಯು
ಕಾಶಿಯದ ವವಿನಾಶಿಯೆನಿಪುದು
ಕಾಶಿ ಪ್ರಲಯದಿ ಶಿವ ತ್ರಿಶೂಲದ ಮೇಲೆ ನಿಂತಿಹುದು
ಕಾಶಿ ತಾನವಿಮುಕ್ತ ತಾಣವು
ಕಾಶಿ ಶಿವನ ಮಹಾಸ್ಮಶಾನವು
ಕಾಶಿ ಪುರಿಯಾನಂದ ಕಾನನವೆಂದು ಪೇಳುವರು ॥ ೧೦ ॥

ವಿವಿಧ ಧರ್ಮದ ಜನಗಳಿರ್ಪರು
ವಿವಿಧ ಜಾತಿಯ ಜನಗಳಿರ್ಪರು
ವಿವಿಧ ವಿದ್ಯಾಲಯುಗಳೊಪ್ಪುವವಿಲ್ಲಿ ದೇಗುಲಗಳ್
ವಿವಿಧ ಬಗೆಯುದ್ಯೋಗಿಗಳು ಮೇಣ್
ವಿವಿಧ ಶಾಸ್ತ್ರಾಧ್ಯಯನ ಗೈದವ-
ರಿವರು ಶಿವಪುರಿಯುವರು ಇದು ಭಾರತದ ಮಸ್ತಿಷ್ಕಂ ॥ ೧೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶಿಯಲಿ ಗೈದಲ್ಪ ಪುಣ್ಯವಿ-
ಶೇಷವಾಗಿ ಫಲಪ್ರದಾತ್ಮವು
ಕಾಶಿಯೊಳು ಮರಣಿಸಲು ಮುಕ್ತಿಯು ತಾನೇ ಲಭಿಸುವದು
ಕಾಶಿವಾಸವು ಸಜ್ಜನರ ಸಹ-
ವಾಸ ಗಂಗಾಸ್ನಾನವೆಂಬಿವು
ಶೇಷಭೂಷಸಮರ್ಚನಂ ಸುಕೃತಾತ್ಮರಿಗೆ ಸಲ್ಗುಂ ॥ ೧೨ ॥

ಗಂಗೆಯಾತಟದಿಪ್ಪ ಕಾಶಿಯು
ತುಂಗ ಹಿಮಗಿರಿ ಹರದ್ವಾರವು
ಕಂಗೊಳಿಪ ವಾಲ್ಮೀಕಿ ರಾಮಾಯಣದ ಯೋಧ್ಯೆಯುತಾ
ಮಂಗಲದ ವಂತಿಕೆಯು ಕಾಂಚಿಯು
ಸಿಂಗರದ ಪುರ ಮಥುರೆಯಲ್ಲದೆ
ಮಂಗಲಕರಂಗಳು ದ್ವಾರಾವತಿಯು ಏಳ್‌ಪುರಗಳ್ ॥ ೧೩ ॥

ಹರಜಟಾವಾಸಿನಿಯು ಮೊದಲೊಳು
ವರವ ಪಡೆಯೆ ಭಗೀರಥನೃಪಂ
ಹರಿದುಬಂದಳು ಮರ್ತ್ಯಭೂಮಿಗೆ ಗಂಗೆಜಾನ್ಹವಿಯು
ಧರಿಸಿ ಭಾಗೀರಥಿಯ ನಾಮವ-
ನಿರದೆ ಯಮುನೆಯ ಬೆರೆಯುತುಂ ಸಡ-
ಗರದಿ ವಾರಣಾಸಿಯ ಮುಂದೆ ಪ್ರವಹಿಸುತ್ತಿಹಳು ॥ ೧೪ ॥

ಕಾಶಿಪುರಿ ಪ್ರಾಚೀನವಾದಿತಿ-
ಹಾಸದಲಿ ಸಂಶೋಭಿಪದಿವೋ-
ದಾಸ ನರಪತಿನಾಮವದು ಚಿರಜೀವಿಯಾಗಿಹುದು
ಕಾಶಿರಾಜ್ಯದ ಪ್ರಥಮರಾಜನು
ಕಾಶಿಪುರದಭಿವೃದ್ಧಿ ಮೂಲನು
ತೋಷಪಡಿಸುತೆ ಪ್ರಜೆಗಳಂ ಪಿತನಂತೆ ಪಾಲಿಸಿದಂ ॥ ೧೫ ॥

ಶಿವ ಶಿವೆಯರಾನಂದವನದಲಿ
ಯವಿರತಂ ವಿಹರಿಸುತಲಿರ್ದರು
ಶಿವನು ಸೃಷ್ಟಿಯ ಬಯಸಿ ಪುಟ್ಟಿಸಿದೋರ್ವಬಂಧುರನ
ಅವನ ವಿಷ್ಣುವು ಎಂದು ಕರೆದನು
ಭುವನ ರಕ್ಷಣ ದಕ್ಷನೆನ್ನುತ-
ಲವಗೆ ತಪಿಸಲು ಪೇಳಿ ತತ್ಕಾನನವ ಸೇರಿದನು ॥ ೧೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕ ವಿಷ್ಣುವು ಕೈಯ ಚಕ್ರದಿ
ನೆಲವಗಿದು ತಗ್ಗಿನಲಿ ಬೆಮರಿನ
ಜಲವ ತುಂಬುತಲದರ ತಟದಲಿ ತಪಿಸತೊಡಗಿದನು
ಹಲವು ಸಾವಿರ ವರುಷಗಳು ಕಳೆ-
ಯಲು ಸದಾಶಿವನಲ್ಲಿಗೈ ತಂ-
ದೊಲಿದು ನುಡಿವನು ದೀರ್ಘ ತಪಕಾಂ ಮೆಚ್ಚಿನಿಂದಿಹೆನು ॥ ೧೭ ॥

ಓ ಕುವರ ತಪಿಸುವದು ಸಾಕದು
ಬೇಕು ಬೇಕಾದಃದನು ಬೇಡೆನೆ
ಭೋಕಪರ್ದಿಯೆ ನಾನು ಧನ್ಯನು ಎಂದು ವಂದಿಸಿದಂ
ಸಾಕು ಸಾಕೆನುವಾಗ ಶಿವಶಿರ
ತೂಕ ತಪ್ಪಲ್ಲಾಡೆ ಕರ್ಣದಿ-
ಹೇಕ ಕುಂಡಲಬೀಳೆ ಪುಷ್ಕರಣಿಯಲಿ ಶಿವನೆಂದ ॥ ೧೮ ॥

ಇಂದು ಮಣಿ ಕುಂಡಲವು ಬೀಳ್ದುದ-
ರಿಂದ ಮಣಿಕರ್ಣಿಕೆಯು ಎಂಬುವ
ಸಂದುದೈನಾಮಿದಕೆ ಕೇಳೆಲೆ ಚಕ್ರಪುಷ್ಕರಣಿ
ಎಂದು ಪೇಳ್ವುದು ಈಗ ನಿಂತಿಹು-
ದೆಂದಿಗುಂ ಮಣಿಕರ್ಣಿಕೆಂಬುವ
ಬಂಧುರದ ಹೆಸರಿದಕೆ ಸುಸ್ಥಿರವೆನ್ನಲಿಕೆ ಶೂಲಿ ॥ ೧೯ ॥

ತೀರ್ಥವಿದು ಪರಶಿವನೆ ಮುಕ್ತಿ
ಕ್ಷೇತ್ರವಾಗಲಿ ! ಅಕಥನೀಯ
ಜ್ಯೋತಿಯು ಪ್ರಕಾಶಿಸಿದ ಕಾರಣ ಕಾಶಿ ಪೆಸರಕ್ಕೆ
ಜಾತಿ ಯಾವುದೆಯಿರಲಿ ಜೀವಿಗ-
ಳೋತು ಸತ್ಕರ್ಮವನು ಮಾಡಲು
ಪೂತವಾದಕ್ಷಯದ ಪದವಿಲ್ಲೀಯ ಬೇಕೆಂದ ॥ ೨೦ ॥

ತಿಳಿಯೆ ಪಂಚಕ್ರೋಶದಳತೆಯು
ನೆಲವು ಬಹುಪ್ರಿಯವಾದುದೆನಗಂ
ಚಲಿಸುವದು ಮಮಶಾಸನಂ ತಾನೊಂದೆಯೀಯೆಡೆಯೊಳ್
ಕಲುಷವಿಲ್ಲಿಗೆ ಬಾರದಿಪ್ಪುದು
ಕಲುಷಿಗಳು ಬಂದಾಗಳುಂ ಸಹ
ಕಳೆದು ಕಲುಷವ ನೀವೆನವರಿಗೆ ನಿಚ್ಚಸೊಗವೆಂದ ॥ ೨೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌರಿ–ಗಂಗೆಯರುಭಯರಭವನ
ನಾರಿಯರು ಕಲ್ಯಾಣಿಯರು ಪೇಳ್
ನಾರಿಕೇಳಫಲಂ ಬ್ರಹ್ಮಾಂಡವೆಂದರಿಯೆ
ಸಾರಜಲವದರೊಳಗೆ ಗಂಗಾ–
ಧಾರೆಯೆಂಬುವದತಿಶಯೋಕ್ತಿಯೆ !
ನೀರಪಾನವು ತೀರವಾಸವು ಸುಖದ ಸೋಪಾನಂ ॥ ೨೨ ॥

ಅಸಿವರಣೆ ಎಂಬೆರಡು ನದಿನಡು
ವೆಸೆವ ಕಾಶಿಯು ವಾರಣಾಸಿಯ
ದಸಿವರಣೆಯರ ಸಂಗಮದಿ ತಾವಾರಣಾಸಿಯಲಾ
ರಸ ಸರಿದ್ಗಂಗಾ ಸಮಾಗಮ
ಭಸಿತಪ್ರಿಯ ವಿಶ್ವೇಶಸನ್ನಿಧಿ
ವಸುಧೆಯಲಿ ದುರ್ಲಭವು ಕಾರಣ ವಾರಣಾಸಿವರಂ ॥ ೨೩ ॥

ಬಿದಿಯಹಂಕಾರದಲಿ ಶಿವನಂ
ಮದಿಸಿ ತೆಗಳಲು ಕಾಲಭೈರವ
ನುದಿಸಿ ಯವನೈದನೆಯತಲೆ ನಖದಿ ಕತ್ತರಿಸಲ್
ಬಿದಿದಲೆಯು ಕೈಗಂಟೆ ಪಿಡಿಯುತ
ಪದಪಿನಿಂದಲೆದೆಲ್ಲಕಡೆ ಬೇ–
ಡಿದನು ಭಿಕ್ಷೆಯ ಕೊನೆಗೆ ಮೋಚನವಾಯ್ತು ಕಾಶಿಯಲಿ ॥ ೨೪ ॥

ಯಕ್ಷಸುತ ಹರಿಕೇಶನವನಿಗೆ
ತ್ರ್ಯಕ್ಷ ಕರುಣಿಸಿ ವರವನಿತ್ತನು
ಲಕ್ಷಿಸದೆ ಲೌಕಿಕವಕಟ್ಟೇಕಾಗ್ರದಿಂ ತಪಿಸಲ್
ಮೋಕ್ಷಪುರಕಧಿಕಾರಿಯಾದನು
ದಕ್ಷ ದಂಡವ ಧರಿಸಿನಿಂದನು
ತ್ರ್ಯಕ್ಷ ಪೂಜೆಗೆ ಮುಂಚೆಯೀತನ ಪೂಜೆ ಸುರುವಾಯ್ತು ॥ ೨೫ ॥

ಕಾಲಬಲುಹಿಂದಾದ ಘಟನೆಯು
ಶೂಲ ಪಿಡಿದೀಶಾನ ದೇವನು
ಶೂಲಿಪುರಿಗಂಬರಲು ನೀರಿನಕೊರತೆ ಬಹಳಿಹುದು
ವೇಳೆ ವೇಳೆಗೆ ಮಳೆಯದಾಗದೆ
ಬಾಳುವದು ಕರಕಷ್ಟವಾದುದು
ತಾಳ್ಮೆ ತಳೆದಾನಂದ ಕಾನನದೊಳು ಪ್ರವೇಶಿಸಿದಂ ॥ ೨೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸನಿಹದಲಿ ಲಿಂಗವನು ಕಂಡನು
ಮನವು ಶಾಂತಿಯು ಹೊಳಹ ಕಂಡಿಹು–
ದನಿತರಲಿ ನಾಲ್ದಿಕ್ಕಿನೊಳು ದೀಪಗಳು ಬೆಳಗಿಹವು
ಮಣದು ಲಿಂಗಕೆ ಕೆಲ ಸುರರ್ಕಳು
ನೆನೆದು ಲಿಂಗವ ಹಲ ಸುರರ್ಕಳು
ಕುಣಕುಣಿದು ನಲವೇರಿ ಸುರಕನ್ಯೆಯರು ಯಜಿಸಿಹರು ॥ ೨೭ ॥

ಆದನು ಕಂಡೀಶಾನ ದೇವನು
ಉದಕದಿಂದರ್ಚಿಸುವನೆನ್ನುತ–
ಲದರ ದಕ್ಷಿಣ ದಿಕ್ಕಿನಲಿ ನೆಲಶೂಲದಿಂಬಗೆಯೆ
ಉದವು ಪುಟಿದೆದ್ದಿತ್ತು ಜಕ್ಕನೆ
ಮುದದಲಭಿಷೇಕವನು ಮಾಡಲು
ಸದಯಶಿವ ಪ್ರತ್ಯಕ್ಷನಾಗೀಶಾನಗಿಂತೆಂದ ॥ ೨೮ ॥

ಎಲೆಲೆ ಭಕ್ತನೆ ನಿನ್ನ ಭಕ್ತಿಂ–
ಗೊಲಿದೆ ವರವನು ಕೇಳು ನೀನೆ–
ನ್ನಲು ಮಹಾದೇವನಗೆ ನೀನೊಲಿದುದೆ ಮಹಾಭಾಗ್ಯಂ
ತಿಳಿಯೆ ಸುಜ್ಞಾನವದು ತೀರ್ಥವು
ಕೊಳೆಯು ಮನದೆಲ್ಲವನು ತೊಳೆವುದು
ಬೆಳಗದುವೆ ದಿಟವಾದುದೈ ನೀನಿಪ್ಪೆ ತದ್ರೂಪಿ ॥ ೨೯ ॥

ಅರಿವು ನೀನೆಂದರಿಯುವದೆ ಘನ–
ಪರಿವು ನಾನೆಂದರಿವುದೇ ಘನ–
ವರಿದು ಜೀವಿಗಳೆಲ್ಲ ಸುಖಿಸಲಿ ! ಕಾರಣೇವಾಪಿ
ಅರಿವಿನುರು ಪೆಸರಿಂದ ಮೆರೆಯಲಿ !
ಧರೆಯಜನಕುಪಯುಕ್ತವಾಗಲಿ !
ಹರನೆ ಕರುಣಿಪುದೆಂದು ಕೇಳೆ "ತಥಾಸ್ತು" ಎಂದಭವಂ ॥ ೩೦ ॥

ವ್ಯಾಸಮುನಿ ತಾನೆತ್ತಿ ಕೈಯು–
ನ್ನೀಶಗಿಂತಲು ವಿಷ್ಣುವಧಿಕನೆ
ಕಾಶಿಯೊಳು ನಂದೀಶನಾಗಳ್ ಸ್ತಂಭಿಸಿದಭುಜವ
ಶೇಷಶಯನನು ಅಯ್ಯೋ ! ಮರುಳೇ
ಶೇಷಭೂಷಣನೆನಗೆ ಯಾಣ್ಮನು
ಗಾಸಿಯಾಗುವದೇಕೆ ನುತಿಸೀಶ್ವರನನೆನ್ನಲಿಕೆ ॥ ೩೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಿರಿಜೆಯುರಸನೆ ಅದ್ವಿತೀಯನು
ಪರಮಘನ ಹರಿಗಿಂತ ಪಿರಿಯನು
ಶರಧಿಯಲಿ ವಿಷಜನಿಸಿ ಲೋಕವ ಸುರುಪುವಾ ಪೊಳ್ತು
ಹರಿಗೆ ತದ್‌ಜ್ವಾಲೆಯದು ಸೋಂಕಲು
ಹರಿಯು ಕಪ್ಪಾದನು ವಿರಂಚಿಯು
ಭರದಲೋಡಿದ ಸುರರಸುರಕುಲ ಕಾಯೊ ಶಿವನೆನಲು || ೩೨ ||

ಪರಶಿವನು ತದ್ವಿಷವನೀಂಟುತ
ಧರೆಯ ಮಂಡಲವನ್ನು ಕಾಯ್ದನು
ಸುರರಸುರರಖಿಳರು ಮಹಾದೇವಾಂಘ್ರಿಯಂ ನೆನೆದರ್
ಹರಿಯು ಬೊಮ್ಮನು ಯಾವ ದೇವನ
ಚರಣಮಸ್ತಕ ಕಾಣದಾದರೊ
ಗಿರಿಜೆ ಜಗದಾಧಾರೆ ಯಾವನ ಪತ್ನಿಯೋ ಅವನ || ೩೩ ||

ಮರೆದು ನಾ ಕಲುಷಾತ್ಮನಾದೆನು
ಕರುಣೆಸೆನ್ನನು ವಿಶ್ವನಾಥನೆ
ಪರಕೆ ಪರವಾದವನೆ ಕರುಣಾಕರನೆ ಶಿವಶಂಭೊ
ಸ್ಮರನ ಮದವನು ಮುರಿದ ದೇವನೆ
ಪರಿಹರಿಸು ! ಬಂಧನವನೀಗಲೆ
ಚರಣಭಕ್ತಿಯನಿತ್ತು ಪೊರೆಯೆಂದಾಗ ತುತಿಸಲಿಕೆ || ೩೪ ||

ಮೊದಲಿನಂದದಿ ಬಾಯಿಬಂದುದು
ಮೊದಲಿನಂದದಿ ಬಾಹುವಾದುದು
ಸದಯ ನಂದೀಶ್ವರನು ಶಿಕ್ಷಿಸಿ ಪುನಹ ರಕ್ಷಿಸಿದಂ
ಮುದದಿ ಘಂಟಾಕರ್ಣ ತೀರ್ಥದ
ಬದಿಯೆ ವ್ಯಾಸೇಶನ ಸ್ಥಾಪಿಸು–
ತದನು ಬಳಿಕಾರಾಧಿಸಿದನಾ ವ್ಯಾಸ ಕಾಶಿಯೊಳು || ೩೫ ||

ವಿಶ್ವನಾಥನು ಸತಿಗೆ ತಾ ವಿ–
ಶ್ವಾಸದಲಿ ಸೂಚಿಸಿದ ವೇದ
ವ್ಯಾಸಮುನಿ ಶಿವಭಕ್ತಿಯಾಳವ ನೋಡಬೇಕದರಿಂ
ಕಾಶಿಯೊಳು ಭಿಕ್ಷಾನ್ನವವನಿಗೆ
ಲೇಶವಾದರು ದೊರೆಯದೊಲುಗ್ಗೈ
ಗಾಸಿಗೊಂಡವನೇನು ಮಾಳ್ಪನೊ ತಿಳಿಯಬಹುದೆಂದ || ೩೬ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರುದಿವಸ ಭಿಕ್ಷಾನ್ನ ವಾತಗೆ
ದೊರಕದಾದುದು ನಗರದಲಿ ತಾ
ನೆರಡು ಮೂರ್ದಿನ ಕಳೆದರುಂ ಮನೆಮನೆಗೆ ತಿರುಗಿದರು
ಕರೆದು ಶಿಷ್ಯರ ಪೇಳ್ದನವರಿಗೆ
ಕೊರತೆಯನ್ನಕ್ಕಿಹುದೆ ತಿಳಿಯಿರಿ
ಪರಿಕಿಪುದು ನೀವದರ ಕಾರಣವರಿದು ಬರ್ಪುದೆನೆ || ೩೭ ||

ಆಶ್ರಯವು ತಾನಿಹುದು ವಿದ್ಯೆಗೆ
ಕಾಶಿ ಲಕುಮಿಗೆ ತವರು ಮನೆಯಿದು
ವಾಸ ಮಾಡಿದೆ ದೇವಕೋಟಿಯದನ್ನಕೇಂ ಕೊರತೆ
ಏಸು ಕೇರಿಗಳಲ್ಲಿಯಲೆದರು
ತ್ರಾಸು ಎಂಬುದು ತೋಚಲಿಲ್ಲವು
ವ್ಯಾಸಮೌನಿಯೆ ನಿಜವಿದೆಂದರು ಮರಳಿಬಂದವರು || ೩೮ ||

ಕೋಪದಿಂದುರಿದೆದ್ದು ನಗರಿಗೆ
ಶಾಪವಿತ್ತಂ ವ್ಯಾಸನಾಗಳ್
ಲೋಪವಾಗಲಿ ಮೂರು ತಲೆಮಾರ್ ವಿದ್ಯೆಧನ ಮೋಕ್ಷಂ
ತಾಪಗೊಳ್ಳಲಿ ಜನಗಳಲ್ಲಿಯು
ಭೂಪತಿಗಳಾಗಿರ್ದೊಡೇಂ ಫಡ
ಶಾಪ ತಟ್ಟದೆ ತನ್ನದೆಂದಬ್ಬರಿಸಿದಂ ಪಸಿದು || ೩೯ ||

ಮರುದಿವಸ ಭಿಕ್ಷಾನ್ನಕೋಸುಗ
ತಿರುಗಿದರು ಏನೊಂದು ಲಭಿಸದೆ
ಮರಳಿಬರುತಿರಲೊಂದು ಮನೆ ಯಜಮಾನಿಯಾತಂಗೆ
ದರುಶನವು ಅಪರೂಪವಾಯಿತು
ಕರುಣದಲಿ ಒಳಹೊಕ್ಕು ಭಿಕ್ಷೆಯ
ನಿರದೆಕೊಂಬುವದೆಂದು ನುಡಿದಳ್ ವ್ಯಾಸಮಾರ್ನುಡಿದಂ || ೪೦ ||

ಇರುವರೈ ದಶಸಹಸ್ರ ಶಿಷ್ಯರು
ಬರಿದೆ ಭುಂಜಿಸಲಾರೆನೋರ್ವನೆ
ಕರೆದವರೆಲ್ಲರು ಬಂದು ಭೋಜನ ಮಾಳ್ಪೆವೆನ್ನಲಿಕೆ
ಆರರೆ ಇದಕೇತಕ್ಕೆ ಯೋಚನೆ
ಸರುವರೊಂದಾಗಿಲ್ಲಿಭುಂಜಿಸಿ
ತೆರಳಬೇಕೆಂದವಳು ವಿಜ್ಞಾಪಿಸಿದಳುಲ್ಲಸದಿ || ೪೧ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೂಡಿ ಬಂದಖಿಳರಿಗೆ ಕೂಡಲೆ
ಬೇಡಿ ಬೇಡಿದ ಷಡ್ರಸಾನ್ನವ
ನೀಡಿ ಸಂಭ್ರಮಿಸಿದಳು ಯಜಮಾನಂ ಮುದಂಗೊಳಲು
ಬೇಡುವದು ಬೇಕಾದವಸ್ತುವ
ನೀಡುವೆನು ಸಂಕೋಚಪಡದಿರಿ
ನಾಡೆ ಸಂತೃಪ್ತರನು ಮಾಡುವದೆನ್ನ ಕರಣೀಯಂ ॥ ೪೨ ॥

ಎನಲು ಮನದಣಿವಂತೆಯುಂಡರು
ತಣಿದು ತಾಯಿಯೆ ಎಷ್ಟು ಜನವನು
ತಣಿಸಿದೆಯೊ ನೀನನ್ನಪೂರ್ಣೆಯು ನೋಡು ಎಂದಿಹರು
ತ್ರಿಣಯನಿಹ ಮಾದಾನಿ ಕೊಡುವವ–
ನನುದಿನಂ ನಾವೇನು ಮಾಳ್ಪೆವು
ಘನಮಹಿಮನವನೆಂದು ನುಡಿಯಲು ಸೋಜಿಗವನಾಳ್ದರ್ ॥ ೪೩ ॥

ಸರಳ ಧರ್ಮದ ತಿರುಳದಾವುದೊ
ಸರುವರಿಗೆ ಸಾಧಿಸಲು ಸಾಧ್ಯವೊ
ವರಮುನಿಯೆ ಪೇಳೆಂದು ಮನೆ ಯಜಮಾನ ಪ್ರಶ್ನಿಸಿದಂ
ಪರರಿಗಪಕಾರವನು ಮಾಡದೆ
ಪರರಸಿರಿಗೀರ್ಷೆಯನು ತಾಳದೆ
ನೆರೆ ವಿಚಾರಿಸಿ ಗೃಹದ ಕೃತ್ಯವ ಸಾಗಿಸುವದೆಂದ ॥ ೪೪ ॥

ಶಮೆ ದಮೆಗಳುಳ್ಳವರು ನೀವ್ಗಳು
ನಮಗೆ ಶಾಪವನಿತ್ತು ಪರಿಚಿತ
ರಮಿತ ಕೋಪಕ್ಕೇನು ಕಾರಣ ನಗರವಾಸಿಗಳೆ
ಸುಮಧುರದ ಸದುವಿನಯದುಕ್ತಿಯು–
ದಮಲತರವಾದುದು ಮಹಾತ್ಮರೆ
ನಮಗೆ ಶಾಪದ ಫಲವು ಸೋಂಕದು ಸ್ವಾರ್ಥಿಗಳಿಗಕ್ಕು ॥ ೪೫ ॥

ನಿರಪರಾಧಿಗೆ ಕೊಟ್ಟ ಶಾಪವು
ಮರಳಿಕೊಟ್ಟವರನ್ನೆ ತಡೆವುದು
ತೊರೆದು ಕಾಶಿಯ ಬೇರೆಡೆಗೆ ನೀವ್ ಪೋಗಿ ! ಸುಕ್ಷೇಮಂ
ಬರಿದೆ ರುದ್ರಪಿಶಾಚಿಯಾಗುತೆ
ಧರಣಿಯೊಳಗಲೆಯುವದು ಬೇಡೆನೆ
ತರತರನೆ ನಡುಗುತ್ತ ಮನ್ನಿಪುದೆಂದನಾ ಮುನಿಯು ॥ ೪೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಷ್ಟಮಿ ಚತುರ್ದಶಿಯು ದಿವಸದೊ–
ಳಿಷ್ಟ ಪಡುವೆನು ಬಂದು ಹೋಗಲು
ಬೆಟ್ಟಗುವರಿಯೆ ಕರುಣಿಸಲು ಪೇಳ್ ಪತಿಗೆಯೆನ್ನಲಿಕೆ
ಇಷ್ಟದಂತಕ್ಕೆಂದು ನುಡಿಯುತ
ದಿಟ್ಟ ಮೂರುಳ್ಳವನು ಸತಿಸಹ
ತಟ್ಟನಂತರ್ಧಾನನಾದನು ತತ್‌ಕ್ಷಣಾರ್ಧದಲಿ || ೪೭ ||

ಲೋಲ ಅರ್ಕದ ಅಗ್ನಿಕೋಣದಿ
ಲೋಲೆ ಗಂಗೆಯ ಪೂರ್ವತಟದಲಿ
ಕಾಲ ಕಾಲನ ಭಕ್ತಿಭಾವವನಾಳ್ದು ಕೂತಿರುತ
ಶೂಲಪಾಣಿಯ ದಿವ್ಯಭೂಮಿಯ
ನೀಲ ಕಂಧರ ನಮಲ ಕಾಶಿಯ
ಪಾಲಿಸಯ್ಯೆಂದು ಬೇಡುತ ನೋಡುವಂ ವ್ಯಾಸಂ || ೪೮ ||

ಸಿರಿಹರಿಶ್ಚಂದ್ರನು ನರೇಂದ್ರನು
ತೊರೆದಯೋಧ್ಯೆಯ ಕಾಶಿ ಪಟ್ಟಣ–
ದಿರುತ ಹೊಲೆಯನಿಗಾಳು ತಾನಾಗುತ್ತ ಮಸಣವನು
ನಿರುತ ಕಾಯ್ದನು ಸತ್ಯವಚನದ
ಗರಿಮೆಯನು ತೋರಿದನು ವಿಶ್ವೇ–
ಶ್ವರನ ಕೃಪೆಯನು ಪಡೆದು ಸತ್ಕೀರ್ತಿಯನು ಪೊಂದಿದನು || ೪೯ ||

ರಾತ್ರಿಯೊಳು ಶಿವರಾತ್ರಿ ಹೇಗೋ
ಧಾತ್ರಿಯಲಿ ಭಾರತವು ಹೇಗೋ
ಯಾತ್ರೆಯಲಿ ಕಾಶಿಯ ಮಹಾಯಾತ್ರೆಯು ಪವಿತ್ರವಲ
ಮತ್ತು ಶ್ರೀಪರ್ವತದ ಯಾತ್ರೆಯು
ಸಾತಿಶಯವದು ಪಂಚಕ್ರೋಶದ
ಯಾತ್ರೆ ಕಾಶಿಯ ಪರಿಧಿಯೊಳಗಿನದುತ್ತಮಂನೋಡೆ || ೫೦ ||

ಅತ್ರಿ ಅನಸೂಯೆಯರ ತನುಜನು
ಸತ್ತಮನು ಕೋಪಿಷ್ಠನಾತನು
ಮತ್ತವನು ಮುನಿ ನಿಗ್ರಹಾನುಗ್ರಹ ಸಮರ್ಥನಲಾ
ಕೃತ್ತಿವಾಸನ ನೀಲಕಂಠಂ–
ಬತ್ಯುಚ್ಛ ನಾಮಕ್ಕೆ ಕಾರಣ–
ನೀತನೆಂಬುದು ಲೋಕವದು ತಿಳಿದಿಪ್ಪಸಂಗತಿಯು || ೫೧ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚರಿಸಿ ಭೂಲೋಕದಲಿ ಗಿರಿವನ
ಪುರಗಳಲಿ ಸ್ವೇಚ್ಛೆಯದಿಂದಂ
ಬರಲು ತಾನಾನಂದ ಕಾನನಕೊಮ್ಮೆ ದುರ್ವಾಸಂ
ತರತರದ ಹೂಬಳ್ಳಿಗಳು ತಾವ್
ತರುಗಳನ್ನಪ್ಪುತ್ತಲೊಪ್ಪಿರೆ
ಬಿರಿದ ಪೂವಿನಿಗಂಪಿನಿಂದಾ ಕಾಡು ಕಂಪಾಯ್ತು ॥ ೫೨ ॥

ಕುಳಿತು ಕೋಗಿಲೆ ತಳಿತ ಮಾಮರ
ಗಳಲಿ ಕುಹುಕುಹು ಎಂದು ತಾ ಕೂ–
ಗಲು ವಿರಹಿಜನದೆದೆ ಹಾರಹತ್ತಿತು ಕಾಮನಾಳಿನೊಲು
ಎಲರು ಸುಳ್ಳನೆ ಸುಳಿದುಸೂಸಿತು
ಬಲ ಬಸಂತಗೆ ಬಂದುಬಿಟ್ಟಿತು
ಕಳೆಯು ಮೊಗದಲಿ ನಿಂದುದಾಗಳ್ ನಲ್ಲನಲ್ಲೆಯರ ॥ ೫೩ ॥

ಬೇಗನೆದ್ದೆಲೆ ಮನೆಗಳೊಳು ತಾವ್
ನಾಗ ಕಂಕಣ ನಡಿಯು ಕೀರ್ತಿಸಿ
ರಾಗದಿಂದುದಕವನು ತಂದು ಸುಬಿಲ್ವಸುಮಗಳನು
ಆಗ ಲಿಂಗವನರ್ಚಿಸಿದ ಬಳಿ–
ಕಾಗ ಮಂಗಳನೋದಿ ಕೇಳ್ವ ವಿ–
ರಾಗಿ ಮಾಹೇಶ್ವರರ ನೋಡುತ ನಲಿದನಾ ಮುನಿಪಂ ॥ ೫೪ ॥

ಅವರವೊಲು ತಾನಿರ್ದು ತಪಿಸುತ
ಶಿವನೊಲುಮೆ ಪಡೆಯಲ್ಕೆ ಮನದಂ–
ದವನು ಎಷ್ಟೋ ವರ್ಷ ತಪಿಸುತಲಿರ್ದು ಬೇಸರಿದು
ಶಿವಕರುಣವಾಗುವ ಸುಲಕ್ಷಣ–
ವವಗೆ ಯಾವುದು ತೋರದಾಗಲು
ತವಸಿ ತಪಕುಂ ಕಾಶಿಗುಂ ಧಿಕ್ಕಾರವೆಂದುರಿದಂ ॥ ೫೫ ॥

ಗಿರಿಶನಾಗಳ್ ಮುಂದಹಾಸದಿ
ವರಮುನಿಯು ಪೂಜಿಸಿದ ಲಿಂಗದ–
ಲಿರದೆ ಪ್ರಕಟಿತನಾಗಿ ದುರ್ವಾಸನನು ಸಂತಯಿಸಿ
ವರವಕೇಳ್ ಬೇಕಾದುದೀವೆನು
ಹರಪುರಿಗೆ ಶಾಪವನು ಕೊಟ್ಟರೆ
ಹುರಿದು ಹೋಗುವೆನೀನು ಕೇಳೆಲೆ ತಿಳಿದು ನಡೆಯೆಂದ ॥ ೫೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನಿಯು ಲಜ್ಜಿತನಾಗಿ ಮಣಿದನು
ಮನದ ಮುಸ್‌ಸಂದೇಹವಳಿದನು
ಚಿನುಮಯನೆ ಮನ್ಮನದ ತಾಮಸಗುಣವನಳಿಸೆಂದ
ಮುನಿಯೆ ಲಜ್ಜಿತನಾಗದಿರು ನೀ–
ನನುಪಮ ಜ್ಞಾನವನು ಪಡೆ ಶಿವ–
ನನುಭವಿಯು ನೀನಾಗಿ ಮುಕ್ತಾಗೆಂದನೀಶ್ವರನು || ೫೭ ||

ಸುರರು ಸುರಪತ್ನಿಯರು ಅಪ್ಸರೆ–
ಯರು ದಿಶಾಧಿಪ ದಿತಿಭವರು ಮುನಿ–
ವರರು ವಿದ್ಯಾಧರರು ಯಕ್ಷರು ನವಗ್ರಹೇಶ್ವರರು
ಗರುಡ ಮೊದಲಾದ ಖಿಳರ್ರೈ ಪ್ರಮ–
ಥರು ಸ್ವನಾಮದಲಿಂಗ ವರ್ಚಿಸಿ
ಹರದಯವ ಸಂಪಾದಿಸಿದರ್ರೈ ಕಾಶಿಕಾ ತಲದಿ || ೫೮ ||

ರುರುವು ಎಂಬಸುರನ ಕುಮಾರನು
ದುರಗನೆಂಬನು ಘೋರತಪದಿಂ
ಪುರುಷರಿಂದ ಲಜೇಯನೆಂಬುವ ವರವಪೊಂದಿರ್ದು
ಬರಿದೆ ದೇವತೆಗಳನು ಮುನಿಗಳ–
ನಿರದೆ ಪೀಡಿರುತಿರ್ದನಲ್ಲದೆ
ಗರುವದಿಂದತಿ ಹೇಯ ಕೃತ್ಯಗಳೆಸಗಿ ನೀಚಾದಂ || ೫೯ ||

ಆವನ ಹಾವಳಿ ಬಹಳವಾಗಲು
ಶಿವನ ಕೈಲಾಸಕ್ಕೆ ತೆರಳುತ–
ಲವಗೆ ದುರ್ಗಾಸುರನ ವಿಷಯುವನುಸುರಿದರ್ ಸುರರು
ಶಿವನು ದೇವಿಗೆ ದುರುಳದೈತ್ಯನ
ಜವದಿ ಸಂಹರಿಸಲ್ಕೆ ಸೂಚಿಸ–
ಲವಳು ಸಮರದಿ ಕೊಂದು ದುರ್ಗಾನಾಮ ತಳೆದಿಹಳು || ೬೦ ||

ಕಾಶಿ ರಾಜ ಸುಬಾಹುವಿನ ಮಹ–
ದಾಸೆ ಗೋಸುಗ ದುರ್ಗೆ ಭರ್ಗೆಯು
ವಾಸಿಸಿದಳ್ಳೆ ತನ್ನ ನಾನಾ ಶಕ್ತಿಯರ ಕೂಡಿ
ಕಾಶಿಯಲಿ ತತ್ಪುರವ ಪಾಲಿಸು–
ತೀಶನಾ ದೇಶದೊಲು ವರ್ತಿಸಿ
ವಿಶ್ವ ಪೂಜಿತಳಾಗಿ ಭಜಕರಿಗಭಯ ವೀಯುವಳು || ೬೧ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶೀತಿ ಕಾಚಿದಬಲಾ ಭುವನೇಷುರೂಢಾ
ಲೋಲಾರ್ಕ ಕೇಶವ ವಿಲೋಲ ವಿಲೋಚನಾಚ ॥ ೧ ॥

ತದ್ಭ್ರೋರ್ಯುಗಂ ಚ ವರಣಾಸಿರಿಯಂ ತದೀಯಾ
ವೇಣೀತಿ ಯಾತ್ರ ಗದಿತಾ ಕ್ಷಯ ಶರ್ಮಭೂಮಿಃ ॥ ೨ ॥

ಕಾಶಿಯ ಮಹಾರಾಜ ದಿವೋ–
ದಾಶನಿಹ ಕಾಲದಲಿ ಬೊಮ್ಮದ–
ಶಾಶ್ವಮೇಧದ ಯಜ್ಞಗಳ ನೆರವೇರಿಸಿದನಲ್ತೆ
ಅಶ್ವಮೇಧದ ದಶಕ ಘೂಟವು
ಕಾಶಿಯೊಳಗದು ಹೆಸರುವಾಸಿ ದ–
ಶಾಶ್ವಮೇಧೇಶ್ವರನ ಮಂದಿರವುಂಟು ತತ್ಸ್ಥಲದಿ ॥ ೬೨ ॥

ತೀರ್ಥಗಳು ಬಹಳುಂಟು ವಿಶ್ವ–
ಖ್ಯಾತಿ ಪಡೆದಿಹ ಕಾಶಿಯಲಿ ಮೇಣ್
ಪೂತವಾದ ಕ್ಷೇತ್ರಗಳು ತಾವ್‌ವಿಪುಲವಾಗಿಹವು
ಮಾತು ಮಾತಿಗೆ ವಿಶ್ವನಾಥನ
ಕೂತು ಕೂತಲ್ಲುಮೆಯ ಮಹಿಮೆಯು–
ನೋತು ಪೇಳುವ ಕೇಳ್ವಜನಕಾವಾಸ್ಯ ಮೀಕಾಶಿ ॥ ೬೩ ॥

ಭಾಸ ಮಾನಾನಂದ ವನದಲಿ
ಕಾಶಿಯೊಳು ಸಂಪೂಜ್ಯ ಮಾದಾ
ವಿಶ್ವನಾಥನಲಿಂಗದಿಂ ಶಿವರಾತ್ರಿಯಾಪೊಳ್ತು
ವಿಶ್ವ ಆರಾಧ್ಯನು ಸಮುದ್ಭವಿ–
ಸೀಶ ಧರ್ಮಸ್ಥಾಪಿಸುತ ಸಂ–
ತೋಷದಿಂದ ಜ್ಞಾನಪೀಠವನಾಗ ನಿರ್ಮಿಸಿದಂ ॥ ೬೪ ॥

ಶಿವಕುಮಾರನು ಷಣ್ಮುಖನು ತಾ
ಲವಲವಿಕೆಯಿಂ ಕೇಳತೊಡಗಿದ
ಶಿವತಪೋಧನನಾದ ಕುಂಭೋದ್ಭವಗೆ ಸಂತಸದಿ
ಭುವನದಲಿ ಕೈಲಾಸವೆನಿಸಿದ
ಶಿವಪುರಿ ಮಹಾತ್ಮ್ಯೆಯ ನಿರೂಪಿಸಿ
ಶಿವನ ಭಕ್ತರ ಭಕ್ತಿ ಭಾಗ್ಯವ ಪೆರ್ಚಿಸಿದನಲ್ತೆ! ॥ ೬೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರದಲೀ ಗುರುಚರಿತ್ರವ-
ನೋದುವ್ರುಸುರುವ ಕೇಳ್ವಸುಜನರಿ-
ಗಾದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ನೈ ॥ ೭೬ ॥
ಮೇದಿನಿಯಲಿರುವನ್ನೆಗಂ ಕಾಪಾಡುವಂಬಿಡದೆ

ಮರಬಜಡೆಮಠದೊಡೆಯನಾದರು
ಸಿರಿ ಗುಡೂರಕೆ ಬಂದು ನೆಲಸುತೆ
ಹರ ಮತವ ಸೇವಿಸುವ ಗಂಗಾಧರ ಶಿವಾಚಾರ್ಯರಿಂ
ಹರುಷದಿಂಭ್ರೂಲತೆಯ ನವಪ್ರರ-
ದಿರುತಾ ಯೋಗಾನಂದ ತುಂದಿಲ- ॥ ೭೭ ॥
ನೊರೆದನೀಕೃತಿಯನು ಜಗದ್ಗುರುಸತ್ಪರಂಪರೆಯ

ಇಂತು ತೃತೀಯಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋಭಗವತೇ ವಿಶ್ವಕರ್ಮಾಯ

ಚತುರ್ಥಾಧ್ಯಾಯ

ಭಾ. ಷ.

ಸೂಚನಾ– ಗುರುವಿನಿಂ ಶಿವದೀಕ್ಷೆ ಪೊಂದುತ
ವರಮುನಿಯು ದುರ್ವಾಸ ತಾ ದ್ವಾ–
ಪರದಿ ಗುರು ಕರುಣಿಸಲು ಸಲೆ ಶಾಂತಾತ್ಮನೆನಿಸಿಹನು ॥

ಸಚ್ಚಿದಾನಂದ ಸ್ವರೂಪನೆ
ನಿಚ್ಚನಿಚ್ಚವು ನೆನೆವೆ ನಿನ್ನನೆ
ಕಿಚ್ಚುಗಣ್ಣನ ದೇವದೇವನೆ ಶೈಲಜಾಧವನೆ
ಅಚ್ಚು ಮೆಚ್ಚಿನ ಭಕ್ತಜನವನು
ನೆಚ್ಚಿನಿಂದನೆ ನಿತ್ಯಪೂರ್ಣನೆ
ಸ್ವೇಚ್ಛೆಯಿಂ ಲೋಕಗಳ ನಿರ್ಮಿಸಿ ಸಾಕ್ಷಿಯಾಗಿಹನೆ ॥ ೧ ॥

ಪರಮ ಚಿದ್ಗುರು ವಿಶ್ವಕರ್ಮನು
ಸುರುಚಿರಾನಂದಾಖ್ಯ ವನದಲಿ
ಹರನ ಯೋಗಾನಂದಿಯಾಗಿರಲೊಂದು ದಿನದುದಯ
ಅರಸುತೈತಂದನು ನಿರಂತರ
ಪರಶಿವನ ಪೂಜನ ಪರಾಯಣ
ಗುರು ವರೇಣ್ಯನ ಸನ್ನಿಧಿಗೆ ದುರ್ವಾಸ ಪೆಸರಿನವಂ ॥ ೨ ॥

ಬರುವಿಕೆಯನರಿದವನ ಸದ್ಗುರು
ಹರುಷವಾಳ್ದನು ಬರ್ಪುದೆನ್ನುತ
ಕರೆದುತಾನು ಪಚರಿಸಿ ಕುಳ್ಳಿರಿ ಎಂದನಾಸನದೊಳ್
ಗುರುಚರಣಸರಸಿಜಕೆ ಮಣಿದ–
ಲ್ಲಿರುವ ದರ್ಭಾಸನದಿ ಕುಳಿತನು
ಗುರುರವಿಯದರ್ಶನದಿ ತನಗುಲ್ಲಾಸವಾಯ್ತೆಂದ ॥ ೩ ॥

ಯತಿಯೆ ನೀನು ಸಮರ್ಥನೈಸುರ–
ಪತಿಯು ಸಿರಿಸಾಗರದಿ ಬೀಳಿಸೆ
ದಿತಿಜದಿವಿಜರು ಕೂಡಿ ಕಡೆದರ್ ಕಡಲ ಕಡೆಗೆ ವಿಷಂ
ಅತಿ ಮಥನದಿಂದೊಗೆಯೆ ಕೂಡಲೆ
ಶಿತಿಗಲಂ ತಾನೀಂಟಿದಂ ತವ
ಕತದಿ ಕರುಣಾಮಯ ಶಿವಂ ವಿಷಕಂಠನೆನಿಸಿಹನು ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಂತಿ ಸೇವೆಗೆ ಮೆಚ್ಚಿ ಯಾಕೆಗೆ
ಮಂತ್ರವನ್ನುಪದೇಶ ಮಾಡಲು
ಮಂತ್ರ ಪಠಣದಿ ಪಾಂಡವರು ಮೇಣ್ ಕರ್ಣನುದಿಸಿದನು
ಮಂತ್ರಸಿದ್ಧನು ನೀಕಣಾ ದು-
ಷ್ಯಂತನಂ ನೆನಪಿಸುತ ಕುಂತಳ-
ಕುಂತಲೆಯ ಶಪಿಸುತ್ತೆ ನಿಶ್ಯಾಪವನು ನೀನಿತ್ತೆ ॥ ೫ ॥

ಹೊರಗೆ ಬರಲಾ ಕೃಷ್ಣರುಕ್ಮಿಣಿ
ಬರಿಯ ಬತ್ತಲೆಯಾಗಿ ಶಪಿಸಿಕು-
ದುರೆಗಳಾಗಲ್ ರಥಕೆ-ಹೂಡುತಲವರನೀ ಕುಳಿತು
ಪುರದ ಲೆಳೆಯುವದೆನ್ನಲೆಳೆದರು
ಹರುಷದಲಿ ಶಾಪವ ವಿಮೋಚಿಸಿ
ಕರುಣಿಸಿದೆಯವರನ್ನು ತಾಪಸಹಂಸದುರ್ವಾಸ ॥ ೬ ॥

ಗೌತಮಾಹಲ್ಯೆಯರ ಲಗ್ನದಿ
ಸೋತು ಹೋದರಹಲ್ಯೆರೂಪಕೆ
ಭೀತರಾಗುತ ಶಾಪಕಂ ಮೊರೆ ಹೋಗಲು ದೇವತೆಗಳ್
ಭೂತಿಯಂಧರಿಸುತ್ತಲವರನು
ಪೂತರಾಗಿಸಿದಂಥವನು ನೀ-
ನೇತಕೆಮ್ಮೆಡೆ ಯಾಗಮನ ಪೇಳೆಂದ ಗುರುವರ್ಯಂ ॥ ೭ ॥

ಗುರುವೆ ತವದಯದೊಳಿತದೆಲ್ಲವು
ಪರಿಹರವ ಕಾಣೆನು ಸಮಸ್ಯೆಗೆ
ಧರಣಿಯೊಳಗಾರ್ಪುಗೆಗಳಂ ಗೆಲಿದವರು ಸರ್ವತ್ರ
ಚಿರವಿಜಯಿ ಚಿರಸುಖಿಗಳೆಂಬುದ
ನರಿದರಿದು ಕೋಪಾಂಧನಾಗುವೆ
ಕರುಣಿಪುದುಗುರುವರ್ಯ ಶಾಂತಾತ್ಮನನು ಮಾಳ್ಪುದೆನಲ್ ॥ ೮ ॥

ಆಲಿಸೆಲೆ ದುರ್ವಾಸ ತಾಪಸ
ಮೂಲಧನ ಸನ್ಮುನಿಗೆ ಶಾಂತಿಯು-
ದೆಲ್ಲ ಶಾಸ್ತ್ರಂಗಳನು ಬಲ್ಲವನಾವನಿಹನೆನಲು
ಕೇಳು ಯಾವನ ಮನದಿ ಶಾಂತಿಯು
ಬಾಳುತಿರುವುದೊ ಬೆಳಗುತಿರುವುದೊ
ಬಲ್ಲವನು ಎಲ್ಲದರೊಳ್ಸಂ ಆವನೆನಿಸಿ ಕೊಂಬುವನು ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಂತಿಗೋಸುಗ ನೆಲದ ತಾಳ್ಮೆಯು
ಶಾಂತಿಗೋಸುಗ ಜಲವು ಪರಿವುದು
ಶಾಂತಿಗೋಸುಗ ವಗ್ನಿವುರಿವುದು ಸರ್ವಸಮತೆಯೊಳು
ಶಾಂತಿಗೋಸುಗ ವಲೆವುದನಿಲವು
ಶಾಂತಿಗೋಸುಗವಾಗಸದ ನೆಲೆ
ಶಾಂತಿಗೋಸುಗ ಪಂಚಭೂತಗಳಾಟವೋಟಗಳು ॥ ೧೦ ॥

ಶಾಂತಿನಿಜ ಸೌಭಾಗ್ಯ ಸಂಪದ
ಶಾಂತಿಯದು ಸಂತುಷ್ಟಿ ಪುಷ್ಟಿಯು
ಶಾಂತಿಯೇ ಸರ್ವಸ್ವವೆಂದರಿದವರ ಸನ್ಮತವು
ಶಾಂತಿಸಮ ಜಪತಪಗಳಿಲ್ಲವು
ಶಾಂತಿಸರಿ ಸದ್ಗತಿಯದಿಲ್ಲವು
ಶಾಂತಿಸಂಯಮಿಗಳಿಗೆ ಯಂತಸ್ಸತ್ತ್ವವಾಗಿಹುದು ॥ ೧೧ ॥

ಸಕಲರುಂ ಕೇಳುವರು ಸೌಖ್ಯವ
ಸಕಲರುಂ ಬೇಡುವರು ಭಾಗ್ಯವ
ಸಕಲರಿಗೆಯದು ಸಿಕ್ಕಬಲ್ಲುದೆ ಬೇಕದರ್ಹತೆಯು
ಸುಕವಿಗಾದರ ದೊರೆವುದಲ್ಲದೆ
ಕುಕವಿಗಾದರ ದೊರೆವುದೆ ! ನಪುಂ-
ಸಕಗೆ ಪುರುಷತ್ವಲ್ಲಿ ! ಸುಖವೆಲ್ಲಿಯದಶಾಂತನಿಗೆ ॥ ೧೨ ॥

ಶಾಂತನವನು ಸ್ವತಂತ್ರನೆನಿಪನು
ಶಾಂತನವನು ಪುನೀತನಪ್ಪನು
ಶಾಂತನವ ಪರಮಾತ್ಮನಂತಾಗುವನು ನಿಶ್ಚಿಂತಂ
ಶಾಂತನಾತನು ಯುಕ್ತಭಕ್ತನು
ಶಾಂತನವನಿಹ ಸಿದ್ಧಶಂಕರ
ಶಾಂತನವನು ನಿಶಾಂತಕಾಂತನು ಸಂತತಂ ತಿಳಿಯೆ ॥ ೧೩ ॥

ಆತ್ಮನು ಸ್ವಾತಂತ್ರ್ಯಪೊಂದಿರ
ಲಾತ್ಮ ಸಂತೃಪ್ತಾಗಲಾ ವಿರ್-
ಭೂತವಾಗುವದಷ್ಟೆ ! ತನ್ನೊಳು ತಾನೆ ಶಾಂತಿಯದು
ಅತ್ತಲಿತ್ತಲೆದಾಡುವಾ ಮನ
ವೆತ್ತ ಪೋಗದಹಾಗೆ ನಿಲ್ಲಿಸೆ
ಕತ್ತಲೆಯು ಮನದಳಿದು ಭಾವವುಬತ್ತಲಾಗುವದು ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾನು ಸಾಕೆಂದೆನಿಸದಿದು ಮೇ–
ಣೇನನುಂ ಬೇಕೆನಿಸದಿದು ದಲ್
ಸ್ಥಾಣುವೊಲು ತಾನೆಂದಿಗುಂ ಸಂಚಲಿಸದಿದು ಕಾಣಾ
ನೀನಹಾಭಾವವನು ತೋರೆವುದು
ಮಾಣು ! ಮಾಣು ! ಸಕಾಮ ತಪವನು
ಜಾಣತನ ತಾನಿರಲಿ ! ಕರ್ಮವ ಮಾಡುವೆಡೆಯಲ್ಲಿ || ೧೫ ||

ಮಾಡುವಂತಿರಬೇಕು ಕರ್ಮವ
ಮಾಡದಂತಿರಬೇಕು ನೋಡೈ
ಮಾಡುವಾ ಮಾಟದಲಿ ತಾನಿಲ್ಲದೆಯೆ ಇರಬೇಕು
ನೀಡುವೆಡೆಯೊಳು ಕೊಂಬುವೆಡೆಯೊಳು
ನೋಡುವೆಡೆ ಪ್ರತಿ ಕಜ್ಜದೆಡೆಯೊಳು
ಪ್ರೌಢವಾದ ಶಿವಾನುಭವ ಸಂಪನ್ನತೆಯುಬೇಕು || ೧೬ ||

ತನುವಿನಲಿ ನಿರ್ಮೋಹ ಬೇಕದು
ಮನದಿ ನಿರಹಂಕಾರ ಬೇಕೈ
ಕನಸಿನಂದದಿ ವಿಷಯಗಳಲುದಾಸೀನನಾಗುವದು
ಚಿನುಮಯಾತ್ಮನನರಿಯೆ ಸೊಗದಾ
ಹೊನಲು ಚಿತ್ತದಿ ಹರಿದುಬರುತಿದೆ
ಮನವದಾಗೇನನ್ನಪೇಕ್ಷಿಸದಿಹುದು ದುರ್ವಾಸ || ೧೭ ||

ಯೋಗ ಮಾರ್ಗದಿ ನೀನು ಸಿದ್ಧಿಯ
ನಾಗಳೆಯೆ ಪಡೆದಿಹುದು ನಿಶ್ಚಿತ–
ವೀಗನೀ ಶಿವಯೋಗವನು ಸಾಧಿಸುವದೊಳಿತೈಸ
ಯೋಗ ನಾಲ್ಕರಸಾರವಿದುಕೇಳ್
ಯೋಗರಾಜವಿದೆಂದು ತಿಳಿ ! ಶಿವ
ಯೋಗದಿಂ ಶಿವಸಮರಸವ ಪೊಂದುವದದುವೆ ಮೇಲೆಂದ || ೧೮ ||

ರುದ್ರನಂಶದಿ ಪುಟ್ಟಿರುವನೀ
ರುದ್ರನಾಗೈ ! ಮೊದಲನಂತರ
ರುದ್ರನರ್ಚಿಸು ! ರುದ್ರನೇ ನಾನೆಂದು ಭಾವಿಪುದು
ಛಿದ್ರಗೊಳಿಸುವದೇನು ಕಿನಿಸಿಂ
ಕ್ಷುದ್ರ ಮನವನ್ನನವಗೊಳಿಪುದು
ಭದ್ರರೂಪನು ಆಗಿ ನಿನ್ನೊಳು ನೀನೆ ನಲಿಯೆಂದ || ೧೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನಯೋಗವು ಹೇಗೆ ಸುಲಭವು
ಶಿವನ ಯೋಗವು ಹೇಗೆ ಸಾಜವು
ಶಿವನ ಯೋಗವು ನಾಲ್ಕು ಯೋಗಂಗಳಲಿ ಮಿಗಿಲೆಂತು
ಶಿವನ ಯೋಗದ ತಿರುಳನೀಗಳ್
ತವಕಿಸುವ ನನಗಿಂದು ವಿವರಿಸಿ
ತವೆ ಕೃತಾರ್ಥನ ಮಾಳ್ಪುದೆಂದನು ಮುನಿಯು ಗುರುವರಗೆ ॥ ೨೦ ॥

ಯೋಗವೆಂಬರು ಪ್ರಕೃತಿ ಪುರುಷ ವಿ–
ಯೋಗವನು ಕೆಲರರಿದವರು ಮೇಣ್
ಯೋಗವೆಂಬರು ಚಿತ್ತವೃತ್ತಿ ನಿರೋಧವನು ಕೆಲರು
ಯೋಗವದು ಸುಖ–ದುಃಖ ಸಮತೆಯು
ಯೋಗವದು ಜಾಣ್ಮೆಯೊಳು ಕರ್ಮವ
ಸಾಗಿಸುವುದೆಂದೊರೆವರಿನ್ನು ೞದಿರ್ಪವರು ನೋಡಾ ॥ ೨೧ ॥

ಯೋಗದರ್ಥಗಳಿಂತಿರಲು ಶಿವ
ಯೋಗಿಗಳು ಲಿಂಗಾಂಗಗಳ ಸಂ–
ಯೋಗವೇ ಶಿವಯೋಗವೆನಿಸುವದೆಂದು ಪೇಳುವರು
ಯೋಗಭೇದಗಳರಿವೊಡಿನ್ನೈ
ದಾಗಿರುವವುಗಳೊಳು ತಾಂ ಶಿವ–
ಯೋಗವೇ ಮೇಲೆನಿಸಿಕೊಂಬುದು ವೀರಶೈವರೊಳು ॥ ೨೨ ॥

ಚಲಿಸದಿರೆ ದಿಟ್ಟಿಯದು ಮನವುಂ
ಚಲಿಸದಿರುವದು ತನ್ಮನದೆ ಶಿವ–
ಕಳೆಯ ಭಾವಿಸುತಿರಲು ಜನಿಪುದು ಭಾವ ಸಂಶುದ್ಧಿ
ತಳೆದ ಭಾವದ ಶುದ್ಧಿಯಲಿ ಶಿವ
ಕಳೆಯು ಸಮ್ಯಗ್ ರೂಪುಗೊಳ್ವುದು
ಬಳಿಕ ತದ್ಭಾವಿಕನು ಶಿವತೇಜದಲಿ ತೇಲುವನು ॥ ೨೩ ॥

ದಿಟ್ಟಿ ನಿಲ್ಲಿಸುವುದಕೆ ಪರಮೋ–
ತ್ಕೃಷ್ಟ ಸಾಧನ ವಿಷ್ಟಲಿಂಗವು
ನೆಟ್ಟ ದೃಷ್ಟಿಗೆ ಕಟ್ಟುಬೀಳ್ವವು ಪ್ರಾಣ ಮನಸುಗಳು
ಬಿಟ್ಟೊಡಿದ ಶಿವಯೋಗದಲ್ಲಿಹ
ಗುಟ್ಟು ಗೊತ್ತಾಗದು ಮುನಿಯೆ ಕೇ–
ಳಿಷ್ಟ ಲಿಂಗದ ಕಳೆಯೆ ತತ್ಪಥ ತೋರ್ವಬೆಳಕಹುದು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರ ಸಮರ್ಚನ ಜಾನಮುಂ ಸು–
ಸ್ಥಿರದ ಭಕ್ತಿಯು ವಿದ್ಯೆಸುವ್ರತ
ವರಿವೊಡ್ಡೈದಿವು ಕೂಡಿದರೆ ಶಿವಯೋಗವಾಗುವದು
ಗುರುವು ದೀಕ್ಷಿತನಾದ ಶಿಷ್ಯನಿ–
ಗೊರೆವನಿವುಗಳ ಪರಿಯ ಕೃಪೆಯಿಂ
ಸರಿಯೆನಿಸವೀ ಯೋಗಕಿನ್ನುಳಿದಿರ್ಪ ಯೋಗಗಳು ॥ ೨೫ ॥

ಶಿವನಿರುವನೆಂಬುದನು ವಿದ್ಯೆಯೊ–
ಳವಧರಿಸಿ ಶಿವಪೂಜೆ ಗೈಯುತ
ಶಿವನ ಮಂತ್ರವ ಜಪಿಸುತುಂ ತನ್ನಂತರಂಗದಲಿ
ಶಿವನ ಜಾನಿಪ ಭಕ್ತಿ ವೈಶಿ-
ಷ್ಟ್ಯವನು ಗುರುವಿಂದರಿದು ನಡೆಸುವ
ಸುವಿಮಳವ್ರತದಿಂದೆ ಶಿವಯೋಗವಿದು ಸಿದ್ಧಿಪುದು ॥ ೨೬ ॥

ಎಳಸಿ ದೈಹಿಕ ಸಿದ್ಧಿಗಳು ಶರ–
ತಳದೊಳಿರ್ಪವು ಯೋಗಿಯಾದಗೆ
ತಿಳಿವೊಡಾ ಸಿದ್ಧಿಗಳೆ ಸಾಕೆನೆ ಯೋಗಿ ಶಿವಸುಖವ
ಗಳಿಸಲಾರನು ತತ್ಪರಮ ಸುಖ–
ಕಿಳೆಯಸಿದ್ಧಿಯು ವಿಘ್ನವಪ್ಪುದು
ತಿಳಿಯಬೇಕೀ ಮಾತನೊಂದನು ಮೊದಲು ಮುನಿಚಂದ್ರ ॥ ೨೭ ॥

ವಿಷಯ ದೋಷವ ಕಂಡು ತಾತ-
ದ್ವಿಷಯ ವಶನಾಗದೆಯೆ ತನ್ನಯ
ವಶದಲಿಡೆ ವಿಷಯಗಳನದು ವೈರಾಗ್ಯವೆನಿಸುತಿದೆ
ಎಸೆಯುವೀ ವೈರಾಗ್ಯದಿಂದಲಿ
ವಿಷಯಕೆರಗುವ ಚಿತ್ತವನು ತಿರು-
ಗಿಸುವ ಸತತಾಧ್ಯಯನ ವೇಕಾಗ್ರತೆಯ ನೀಯುವದು ॥ ೨೮ ॥

ವಿಷಯ ಪರತೆಯೆ ಭೋಗವಾದಡೆ
ವಿಷಯ ವಿಮುಖತೆ ಯೋಗವೆನಿಪುದು
ವಿಷಯ ಪರನನುಭವಿಸುವನು ಸುಖ-ದುಃಖ ಮೋಹಗಳ
ವಿಷಯ ವಿಮುಖಂ ಸ್ವಸ್ವರೂಪದೊ–
ಳೆಸೆಯುವಮಳಾನಂದದಲಿ ಪರ–
ವಶನೆನಿಪನಿದೆ ಯೋಗದಿಂದಾಗುವ ಪ್ರಯೋಜನವು ॥ ೨೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀಕ್ಷೆಯಿಲ್ಲದೆ ಶಿಕ್ಷೆ ದೊರೆಯದು
ಶಿಕ್ಷೆಯಾಗದೆ ಮೋಕ್ಷವಾಗದು
ದೀಕ್ಷೆಯದು ಮಲಮೂರನಳುಕಿಸಿ ಶಿವನರಿವನೀಗುಂ
ದೀಕ್ಷಿತನೆ ಮೋಕ್ಷಾಧಿಕಾರಿಯು-
ದೀಕ್ಷಿತನೆ ಭವಿಯೆನಿಪನದರಿಂ-
ದುಕ್ಷವಾಹನ ಕೃಪೆಗೆ ಕಾರಣವದುವೆ ಶಿವದೀಕ್ಷೆ || ೩೦ ||

ನೀನು ಗುರು ಕರುಣಾ ಕಟಾಕ್ಷದಿ
ಮಾಣದೀ ಸಂಸ್ಕಾರ ಪೊಂದುತ
ಪೂರ್ಣ ಶಿವ ನೀನಾಗಿ ಬಾಳುವದೆನಲು ತದ್ಗುರುವು
ಸ್ಥಾಣು ರೂಪನೆ ದೀಕ್ಷೆಗೈಯುತೆ
ನಾನು ಸಾರ್ಥಕವಾಗುವಂದದಿ
ನೀನು ಮಾಡುವದೆಂದು ಗುರುಪದಕೆರಗಿದಂ ಮುನಿಯು || ೩೧ ||

ಆಗ ಗುರುವರನವನನೇಳಿಸಿ
ಜಾಗು ಮಾಡದೆ ಸೂಕ್ತಕಾಲದ-
ಲಾಗ ಮೋಕ್ತ ವಿಧಾನದಿಂ ಶಿವದೀಕ್ಷೆಯೆಸಗಿದನು
ಯೋಗವಾಚರಿಸುವ ರಹಸ್ಯವ
ರಾಗದಿಂದ ನಿರೂಪಿಸುತ ಶಿವ
ಯೋಗದಿಂ ಶಿವನಾಗಿ ಬದುಕುವದೆಂದು ಪರಸಿದನು || ೩೨ ||

ಗುರುವರನು ತೋರಿಸಿದ ವಿಧಿಯೊಲು
ವರಮುನಿಯು ದುರ್ವಾಸನಲಸದೆ
ಗುರುಚರಣ ಕಾರುಣ್ಯದಿಂ ನಿರ್ಮಲನು ತಾನಾಗಿ
ಪರತರದ ಕರದಿಷ್ಟಲಿಂಗದ-
ಲಿರಿಸಿ ದಿಟ್ಟಿಯನೇಕ ಚಿತ್ತದಿ
ಹರಸಮರ್ಚನ ಮಾಡುತುಂ ಶಾಂತಾತ್ಮನಾಗಿಹನು || ೩೩ ||

ಇರುವ ಚರ ಮೇಣಚರ ವೆಲ್ಲಕೆ
ಪರಶಿವನೆ ಪರಬ್ರಹ್ಮನಹುದೆಂ-
ದರ ಪುವಾ ಸತ್ಪಂಚವರ್ಣದ ಸೂತ್ರಮಂ ಬಳಿಕ
ಮರೆಯದಿರು ನೀನೆಂದು ತನ್ಮುನಿ-
ವರಗೆ "ಶಿವ ಏವಾತ್ಮ" ಎಂಬುವ
ಪರಿಯ ಪರಿಪರಿಯಿಂದಲುಪದೇಶಿಸಿದನಾಚಾರ್ಯಂ || ೩೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರನ ಪಥಕಿಂ ಗುರುಪಥವೆ ಮೊದ-
ಲಿರುವದೆಂದರು ಶರಣರಖಿಳರು
ಗುರು ಕರುಣವಿಲ್ಲದಲೆ ಹರಕರುಣವದು ಸಮನಿಸದು
ಅರಿವು ತೋರುವ ಗುರುವೆ ಪರವೆಂ-
ದರಿದವರು ಡಂಗುರವ ಹೊಡೆದಿಹ-
ರರಿವಿನುದರದಲನುಭವಂ ಸಂಭವಿಸುತಿಹುದಲ್ತೆ ॥ ೩೫ ॥

ಆದರದಲೀ ಗುರು ಚರಿತ್ರವ-
ನೋದುವುಸುರುವ ಕೇಳ್ವ ಸುಜನರಿ-
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾ ರೋ-
ಗ್ಯಾದಿ ಭಾಗ್ಯವ ಕರುಣಿಸುವನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂ ಬಿಡವೆ ॥ ೩೬ ॥

ಮರಬ ಜಡೆಮಠದೊಡೆಯನಾದರು
ಸಿರಿ ಗುಡೂರಕೆ ಬಂದು ನೆಲಸುತೆ
ಹರ ಮತವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪುರ-
ದಿರುತ ಯೋಗಾನಂದ ತುಂದಿಲ-
ನೊರೆದನೀ ಕೃತಿಯನು ಜಗದ್ಗುರು ಸತ್ ಪರಂಪರೆಯ ॥ ೩೭ ॥

ಇಂತು ಚತುರ್ಥಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ವಿಶ್ವಕರ್ಣ ಗಣೇಶಾಯನಮಃ

"ಪಂಚಮಾಧ್ಯಾಯ"

ಭಾ. ಷ.

ಸೂಚನೆ– ವೀರಶೈವರ ಧರ್ಮ ವಿಷಯವ
ವೀರಮುನಿ ದುರ್ವಾಸ ನಿಚ್ಛೆಯ
ಮೇರೆಗುಪದೇಶಿಸಿದನಾಸುಜ್ಞಾನ ಪೀಠೇಶಂ ||

ಕಾಯದವಗುಣಗಳನು ಖಂಡಿಸಿ
ಮಾಯೆಯನು ಮೋಹವನು ದಂಡಿಸಿ
ಕಾಯವನು ಪಾವನವ ಮಾಡುವ ಲಿಂಗವನು ಧರಿಸಿ
ಹೇಯವೆನಿಸುವ ಪಥವ ತೊಲಗಿಸಿ
ಶ್ರೇಯವನು ಕರುಣಿಸುವ ಸದ್ಗುರು
ರಾಯನುಪದೇಶವನು ಬೇಡುವೆ ವಿಶ್ವನಾಯಕನೆ || ೧ ||

ವೀರಶೈವೋತ್ಪತ್ತಿ ಮತ್ತಂ
ವೀರಶೈವೆಂದಾರಿಗೆಂಬುದು
ವೀರಶೈವ ವಿಚಾರವೆಲ್ಲವನರುಹಬೇಕೆಂದು
ವೀರಶೈವಾಚಾರ್ಯವರ್ಯಗೆ
ವೀರಮುನಿ ತಾನೊಮ್ಮೆ ಕುತುಹಲ
ವೇರೆ ವಿಜ್ಞಾಪಿಸಲು ಪೇಳಿದನಾಗುರೂತ್ತಮನು || ೨ ||

ಇತ್ತು ತನ್ನೊಳು ತಾನು ವಿಶ್ರಮಿ–
ಸುತ್ತ ಬಹುಕಾಲಂ ಸ್ವಶಕ್ತಿಯ
ಸತ್ತೆಯಿಂ ಸಚ್ಚಿತ್ಸುಖಾತ್ಮಕ ನಿರ್ವಿಕಲ್ಪಕವು
ನಿತ್ಯ ಪರಿಪೂರ್ಣ ಸ್ವತಂತ್ರವು
ಮತ್ತು ಭೇದಾಭೇದವಿರಹಿತ
ಗೊತ್ತು ಹಿಡಿಯಲುಬರದ ಪರವಸ್ತೊಂದು ದುರ್ವಾಸ || ೩ ||

ಚನ್ನ ಪರಶಿವನಾತ್ಮ ಲಿಂಗವು
ತನ್ನ ಸುಖದಿ ಸ್ಫೂರ್ತಿಗೊಳ್ಳುತ–
ಲಿನ್ನು ಜಗವನು ಸೃಷ್ಟಿಪಿಪ್ಪವ ತಾಳ್ದುದಾವಾಗಳ್
ಮುನ್ನವಾದಿಯು ಶೂನ್ಯ ಚೇತನ
ತನ್ನ ಸಂಕಲ್ಪದಲಿ ಹೊರಬರ–
ಲುನ್ನತದ ಶಿವರೂಪವನು ತಾ ತಳೆದು ರಾಜಿಸಿತು || ೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈಶಿ ಸಚ್ಚಿತ್ಸೌಖ್ಯ ರೂಪಿಣಿ
ಯೀಶನಾನಂದಾಭಿವರ್ಧಿನಿ–
ಯೀಶ ಸಾಕ್ಷಾತ್ ತತ್ತ್ವರೂಪವ ತಾಳಿವ ಸಂತಸದಿ
ಈಶ್ವರೇಚ್ಛಾ ಯಿಂಗಿತಾಂಗಿನಿ
ಯೀಶನಿಚ್ಛಾ ಮಾತ್ರದಿಂ ತಾ
ನೀಶ ಸಮ ಸಮ ರೂಹನಾಂತಳು ಲೋಕಕಾರಣಕೆ ॥ ೫ ॥

ಶಕ್ತಿ ಸಹಿತನು ಶಂಭುದೇವನು
ಶಕ್ತನಲ್ಲವೆ । ದೇವ ದೇವನು
ಮುಕ್ತಿದಾಯಕನಾದ ಸರ್ವಜ್ಞನು ತ್ರಿಲೋಚನನು
ಯುಕ್ತಿಯಿಂದೀಜಗವ ನಿರ್ಮಿಪ
ಶಕ್ತಿ ಯುಕ್ತನ ಪ್ರಥಮ ಪುತ್ರನ
ರಕ್ತಿಯಿಂ ಪುಟ್ಟಿಸಿದನಾಗಳ್ ಬೊಮ್ಮನಂ ತಾನು ॥ ೬ ॥

ಆದಿಗುರು ಶಿವಲಿಂಗ ಶಂಕರ
ನಾದಿ ತನುಜಗೆ ಸಕಲ ವಿದ್ಯೆಯ–
ನಾದರಂ ವಿೞಗೆ ಬೋಧಿಸಿದನ್ನೈ ಜ್ಞಾನಸಾಗರನು
ಮೋದದಿಂದಲಿ ಪಾರ್ವತೀಶನ
ಪಾದ ಕಮಲಕೆ ಮಣಿದ ಬ್ರಹ್ಮನಿ–
ಗಾದಿ ಸೃಷ್ಟಿಯ ಮಾಡುವತ್ಯುತ್ಸಾಹ ವೈತರಲು ॥ ೭ ॥

ಸೃಷ್ಟಿ ಕಾರ್ಯದ ಸಕಲ ವಿದ್ಯೆಯು–
ನಿಷ್ಟ ಸಿದ್ಧಿಯ ನಿಂತು ಕರುಣಿಸಿ
ದಿಟ್ಟಿ ಮೂರುಳ್ಳವನು ಮೌನದಿಮುಳುಗಿ ಮರೆಯಾದಂ
ದೃಷ್ಟಿ ಮಾಂದ್ಯವು ಮಾಯೆಯಾವರಿ–
ಸಿಷ್ಟ ಕಾರ್ಯವು ಕಷ್ಟವಾಯಿತು
ಸೃಷ್ಟಿಗೈಯುವ ಮಾರ್ಗಕಾಣದೆ ಬೊಮ್ಮ ದೇವಂಗೆ ॥ ೮ ॥

ಜಗದ ಸೃಷ್ಟಿಯ ಮಾಳ್ವಕಲೆಯನು
ಜಗದ ಜೀವನೆ ಸರ್ವ ಶಕ್ತನೆ
ಯುಗಕತೀತನೆ ಸರ್ವಭರಿತನೆ ಬಹುಸನಾತನನೆ
ಮಗನು ನಾನಿಹೆ ಕರುಣೆ ಬೋಧಿಸು ।
ಮುಗಿಯದಾಗಿದೆ ತಂತ್ರರೀತಿಯು
ಸಿಗದೆ ಹೋಯಿತು ರೂಪವೈವಿಧ್ಯತೆಯು ನೆಲೆ ನಿಲವು ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕ ಸೃಷ್ಟಿಗೆ ಆದ್ಯಕಾರಣ
ಲೋಕ ಪಾಲಕ ಶಿವನು ಬೊಮ್ಮಗೆ
ಲೋಕ ರಚನೆಯ ಮರ್ಮ ತಿಳುಹಿದನೆದೆಯು ಮಿಡಿವಂತೆ
ಲೋಕ ಸೃಷ್ಟಿಯ ಮರ್ಮವರಿತರು
ಲೋಕ ಸೃಷ್ಟಿಪ ಧೈರ್ಯಸಾಲದೆ
ಮೂಕಯಾತನೆಯಿಂದ ಬೊಮ್ಮನು ಮರಳಿ ತುತಿಸಿದನು ॥ ೧೦ ॥

ಅಲ್ಪಮತಿ ನಾನಲ್ಪ ಶಕ್ತನು
ಎಲ್ಲವನು ನೀ ಬಲ್ಲ ದಕ್ಷನು
ಕಲ್ಪನೆಗೆ ಮಿಗಿಲಾಯ್ತು ಪೇಳಿದುಪಾಯ ರೀತಿಯದು
ಕಲ್ಪಿಸುತ ನೀನೆನಗೆ ತೋರಿಸು !
ಕಲ್ಪನಾತಿಗ ಸೃಷ್ಟಿ ಸಂಪದ-
ವೆಲ್ಲ ತೆರನೊಳು ನೋಡಿ ಮಾಡುವೆ ನಿನ್ನ ಕರುಣದೊಳು ॥ ೧೧ ॥

ಇಂತು ನುತಿಸಲು ವಿಶ್ವಯೋನಿಯು
ಕಂತು ಸಂಹರ ನೀಲ ಲೋಹಿತ
ಸಂತಸಂಮಿಗೆ ಪುಟ್ಟಿಸಿದನೈ ತನಗೆ ಸರಿಯಹರ
ಅಂತು ಮಹಿಮಾನ್ವಿತಗಣಂಗಳ-
ನಂತಕಾಂತಕ ಪ್ರಮಥ ಸಂಕುಲ-
ವಂತೆ ಸೃಷ್ಟಿ ಸ್ಥಿತಿಲಯಂಗಳ ಮಾಳ್ಪ ರುದ್ರರನು ॥ ೧೨ ॥

ತನ್ನ ಸೃಷ್ಟಿಯ ಗಣ ಸಮೂಹ-
ಕ್ಕುನ್ನತಾದ ಪ್ರಾಕೃತದ ನಡೆ-
ಯನ್ನು ವರ್ಣಾಶ್ರಮದ ತೀತವ ಪೇಳ್ದನಾ ಪ್ರಭುವು
ಮುನ್ನ ಶಿವನಿಂದಾದ ಸೃಷ್ಟಿಯು
ಮುನ್ನ ಮೊರೆದಾ ತತ್ತ್ವಬೋಧೆಯು
ಮಾನ್ಯವಾದಾಧಾರವೆನಿಸಿತು ಸೃಷ್ಟಿಸುವ ವಿಧಿಗೆ ॥ ೧೩ ॥

ಗಣಗಳುರು ಗೋತ್ರಂಗಳಲಿ ಸಂ
ಜನಿಸಿರುವ ಮಾಹೇಶ್ವರರ್ಕಳು
ಗಣನೆ ಯಾಗುವರವರು ಅಪ್ರಾಕೃತರು ತಾವೆಂದು
ವನಜ ಪೀಠನು ನಿರ್ಮಿಸಿರುವಾ
ಜನರವರ್ ಪ್ರಾಕೃತರು ತಾವೆಂ-
ದೆನಿಸುವರು ಮಾನವರೊಳಿತ್ತೆರನಿರ್ಪುದರಿಯುವದು ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನು ಪ್ರಮಥರಿಗುಂದು ಬೋಧಿಸಿ-
ರುವದದ ಪ್ರಾಕೃತದ ಧರ್ಮವು
ಪ್ರವಿದಿತಂ ಶ್ರೀ ವೀರಶೈವಾಭಿದವು ತಿಳಿಯಲ್ಕೆ
ಶಿವ ತಪವು ಶಿವಕರ್ಮ ಶಿವಜಪ
ಶಿವನ ನೆನಹು ಜ್ಞಾನಮೆಂದದು
ವಿವರವಾಗೈದು ಪ್ರಕಾರವು ಕೇಳು ಮುನಿವರ್ಯಾ ॥ ೧೫ ॥

ಗುರುವಿಗೋಸುಗ ಲಿಂಗ ಕೋಸುಗ
ಚರನಿಗೋಸುಗ ಸೇವೆಗಾಗಿಯೆ
ಶರಿರ ಶೋಷಣ ಮಾಳ್ಪುದದು ತಾತಪವು ಎಂದೆನಿಕುಂ
ಬರಿದೆ ಬೇರೆಯೆ ಯಾವ ತಪವಾ-
ಚರಿಸಿದರು ತಪವೆನಿಸದದು ಕಿಂ-
ಕರನ ಭಾವದಿ ಸೇವೆಸತ್ಕಾರಗಳ ಗೈಯುವದು ॥ ೧೬ ॥

ಶಿವನ ಪೂಜೆಯೆ ನೈಜವಾಗಿಹ
ಸುವಿಮಲದ ಕರ್ಮಂ ನಿರಂತರ
ಹವನ ಹೋಮವು ಯಾಗ ಮುಂತಾದವುಗಳನವಶ್ಯಂ
ಶಿವನ ಪಂಚಾಕ್ಷರದ ಮಂತ್ರವು
ಶಿವನ ರುದ್ರಾಧ್ಯಯನ ವೋಂಕಾ-
ರವು ಸದಾಜಪ ಮಾಡಲರ್ಹತೆಯುಳ್ಳವಾಗಿಹವು ॥ ೧೭ ॥

ಶಿವನ ರೂಪಾದಿಗಳ ಚಿಂತನ
ತವಕದಿಂ ಮಾಳ್ಪುದು ಧ್ಯಾನಂ
ಶಿವನ ಆಗಮದರ್ಥ ತಿಳಿಯಲ್ ಜ್ಞಾನವೆನಿಸುವದು
ಇವುಗಳುಳ್ಳುದು ವೀರಶೈವವು
ತವೆ ವಿಚಾರಿಸೆ ಪಂಚಯಜ್ಞವು
ಬುವಿಯಲಿದನಾಚರಿಸಲೊಂದೇ ಜನುಮದಲಿ ಮುಕ್ತ ॥ ೧೮ ॥

ಇದಕೆ ಹಾನಿಯು ಯಾವ ಕಾಲ-
ಕ್ಕೊದಗುವದೊ ಭೂತಳದೊಳಾಗಳೆ-
ಯುದಯಿಸುತ ಗುಣಪರನು ಶಿವಧರ್ಮವನು ಪೋಷಿಸುವಂ
ಅದರ ಕಾರಣದಿಂದ ಪ್ರತಿಯುಗ-
ವೊದಗಿಬರೆ ಗುರು ಪಂಚಕಂತಾ
ನುದಯಿಸುತ ಶಿವಲಿಂಗ ಮುಖದಿಂ ಧರ್ಮ ರಕ್ಷಿಸುಗುಂ ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೈವ ವೇಳ್ಪಗೆಯಿಹುದು ವೀರರ
ಶೈವವದು ನಾಲ್ಪಗೆಯದಾಗಿದೆ
ಶೈವ ತತ್ತ್ವದ ಸಾರವೆನಿಪುದು ವೀರಶೈವವದು
ಶೈವ ತಂತ್ರಾಮ್ರದ ಸುರಸ ಫಲ
ಶೈವವನ ಮಂದಾರಸುಮವಿದು
ಶೈವಗಣರ ಪ್ರಾಕೃತರು ಪ್ರಥಮಜರಿದರುಪಾಸಕರು ॥ ೨೦ ॥

ಇದು ವಿಕಲ್ಪ ವಿದೂರ ವಾದುದು
ಇದು ವಿರೋಧವದಿಲ್ಲದಿರ್ಪುದು
ಇದು ಸದಾಸರ್ವಾತ್ಮರಿಗೆ ಸುಕ್ಷೇಮ ಪಾಲಿಪುದು
ಇದು ಶಿವಾದ್ವೈತಂ ಮಹಾಮುನೆ
ಇದುವೆ ಭೇದಾಭೇದ ರೂಪವು
ಇದುವೆ ಶಕ್ತಿ ವಿಶಿಷ್ಟವಾದ ದ್ವೈತವೆನಿಸುವದು ॥ ೨೧ ॥

ವೇದ ಬಾಹಿರ ಮತವ ಖಂಡಿಸಿ
ವೇದ ಸಮ್ಮತವಾದ ವಿಷಯದ
ಬೋಧೆಗೈವುದು ತಿಳಿಯೆ ಶಿವಜೀವೈಕ್ಯ ಸಿದ್ಧಾಂತ
ವೇದ ಸಿದ್ಧಾಂತಂಗಳೆರಡರ
ಸಾದೃಶಂಗಳು ಸಪ್ರಮಾಣವು
ಭೇದವೆಣಿಸರು ಮಾನ್ಯ ಮಾಡುವರೆಲ್ಲ ಪಂಡಿತರು ॥ ೨೨ ॥

ಶಿವನ ಭಜಕನು ಶೈವನೆನಿಪನು
ಶಿವನ ಜೀವನ ಐಕ್ಯಗೊಳಿಸುವ
ಸುವಿಮಲದ ವಿದ್ಯೆಯನು ವೀ ಅಕ್ಕರವು ಪ್ರತಿನಿಧಿಕುಂ
ಅವಿರತಂ ತದ್ವಿದ್ಯೆಯಲಿ ರಮಿ-
ಸುವಸುಶೈವಂ ವೀರಶೈವಂ
ಶಿವನ ಇಪ್ಪತ್ತೆಂಟು ಆಗಮಗಳಲಿ ಕಥಿತ ಮತಂ ॥ ೨೩ ॥

ಕರದಿಲಿಂಗವ ಪಿಡಿದು ದೃಷ್ಟಿಸು-
ತಿರದೆ ತಲ್ಲೀನಾಗಿ ಹೊರಗಿನ
ದರಿಯದಂ ತದ್ವೃತ್ತಿ ಬಲಿಯಲು ವೀರಶೈವೆನಿಪಂ
ಶರಿರದಷ್ಟಾವರಣಗಳು ಮೇಣ್
ಹರಣ ಪಂಚಾಚಾರಗಳು ಕೇ-
ಳಿರುವ ವಾತ್ಮವೆ ಷಟ್‌ಸ್ಥಲಂಗಳು ವೀರ ಶಿವಮತಕೆ ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೈವ ಧರ್ಮಾಚಾರ ವೀರನು
ಶೈವ ಧರ್ಮವಿಚಾರ ವೇತ್ತನು
ಶೈವ ಮತಸಾಹಿತ್ಯ ಸಂವರ್ಧನದೊಳುಂ ವೀರಂ
ಶೈವ ನಿಂದನೆ ಕೇಳನಾತನು
ಶೈವ ಮತಕಂ ಬಂದ ವಿಘ್ನವ
ಸಾವಧಾನದಿ ಶೂರನಂತೆದರಿಸುವ ವೀರನವಂ || ೨೫ ||

ಪರಶಿವನ ಪಂಚಾನನಗಳಿಂ ಪು
ಟ್ಟಿರುವ ಪಂಚಾಚಾರ್ಯರವರಿಂ
ಹರನ ದೀಕ್ಷೆಯ ಪಡೆಯುತುಂ ಗುರುಲಿಂಗಜಂಗಮರ
ನಿರುತವಾರಾಧಿಸುತಲವರುಗ-
ಳುರು ಕರುಣಮಂ ಪೊಂದಿದಾತನು
ಧರೆಯೊಳೆನಿಪನು ವೀರಶೈವ ಮತಾನುಸರನೆಂದು || ೨೬ ||

ಲಿಂಗದುಂ ಪಾಡುತ್ತ ನಲಿವನು
ಲಿಂಗಮಂ ನೋಡುತ್ತ ನಲಿವನು
ಲಿಂಗಕಳೆಯನು ಭಾವಿಸುತ ಪುಳಕಿಸುತ ಪೂಜಿಪನು
ಲಿಂಗದುದಕ ಪ್ರಸಾದಕೊಂಬನು
ಲಿಂಗದಲ್ಲಿಂಗಿಸುತಮನವನು
ಲಿಂಗಮಯನಾಗುವವಂ ಕೇಳ್ ಲಿಂಗವಂತ ಕಣಾ || ೨೭ ||

ಪಂಚಮುಖ ನೀಶಾನ ಮುಖದಿಂ
ಪಂಚವಕ್ತ್ರಗಣೇಶನೊಗೆದನು
ಪಂಚಮಾಸ್ಯದಿ ಜನಿಸಿ ಬಂದುದರಿಂದ ಪಂಚಮನು
ಪಂಚ ಮುಖಧರ್ಮಾವಲಂಬನು
ಪಂಚಮನ ಮುಖದಿಂದಲೊಗೆದರು
ಪಂಚ ಪಂಚಮರಿವರು ಸಹ ವರವೀರಶೈವರಲಾ || ೨೮ ||

ಹೆಸರು ಮುಖದರಿ ಕಾಲದರಿ ಮೇ-
ಣೆಸೆವ ಪುರದರಿಯು ಸ್ಮರಾರಿಯು
ಹೆಸರು ಕೊನೆಯದು ವೇದದರಿ ಎಂಬುದು ಕ್ರಮಾನುಗುಣಂ
ಒಸೆದು ದೀಕ್ಷೆಯ ನಿವರಿಗಿತ್ತಿಹ-
ರೆಸೆವ ಪಂಚಾಚಾರ್ಯ ರಾಗಳೆ
ಮಿಸುಪ ಗುರುವಿನ ಗೋತ್ರಸೂತ್ರಗಳಿವರಿಗನ್ವಯವು || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಐದು ಜನ ಪಂಚಮುರಿಗೇಕಿಲೆ
ಐದುಃ ಜನರಾಚಾರ್ಯರೆಂದರೆ
ಯೈದು ಜನಗಳು ಓರ್ವ ಗುರುವಿನ ಶಿಷ್ಯರಾಗಲ್ಕೆ
ಐದು ಜನರ ಪರಸ್ಪರಂ ಲ–
ಗ್ನಾದಿ ಕಾರ್ಯಂಗಳಿಗೆ ಭಂಗವು
ಆದಕಾರಣ ವಂಶ ಬೆಳೆಯಲು ಸಾಧ್ಯವಾದುದಲಾ ॥ ೩೦ ॥

ವೀರಶೈವರೆ ಆದ ಈ ಜನ
ವೀರಶೈವ ಮತಾಭಿವೃದ್ಧಿಗೆ
ಕಾರಣವು ಗುರುಲಿಂಗಜಂಗಮ ಭಕ್ತರಗ್ರಣಿಗಳ್
ಮಾರಹರಣನಿಗಿವರು ಮೊದಲನೆ
ವೀರಭಕ್ತರು ಕೃಪೆಗೆ ಪಾತ್ರರು
ವೀರಶೈವ ಮತಾನುಯಾಯಿಗಳಲ್ಲಿ ಮೊದಲಿಗರು ॥ ೩೧ ॥

ಮೊದಲು ಗರ್ಭಾಧಾನ ಪುಂಸವ–
ನದುವು ಸೀಮಂತವು ಅನಂತರ
ವಿದಿತ ಜಾತದ ಕರ್ಮವನ್ನ ಪ್ರಾಶನಂ ಚೌಲ
ಇದುವೆ ವಿದ್ಯಾರಂಭ ದೀಕ್ಷೆಯು
ಮದುವೆ ಯುತ್ಯೇಷ್ಟಿಯದು ಕ್ರಮದೊಳ್
ಸದಮಲಾತ್ಮನ ಮಾಳ್ಪ ದಶಕರ್ಮಂಗಳುಂಟವಗೆ ॥ ೩೨ ॥

ಮೊದಲು ಋತುಮತಿಯಾಗೆ ತನ್ನವ–
ಳದನರಿದು ಮೂರ್ ದಿನದ ಮೇಲೆಯೆ
ಸುದಿನ ಸರಿಯಿರಲಾಗ ಪದಿನಾರ್ ದಿವಸಗಳ ಒಳಗೆ
ಮುದದಿ ಗರ್ಭಾಧಾನದುತ್ತಮ
ವಿಧಿಯ ತಪ್ಪದೆ ಮಾಳ್ಪುದುಚಿತವು
ಹದವ ತಪ್ಪಿಸಬಾರದೆಲೊ ಪ್ರತಿಯೊಂದುಕಜ್ಜದಲಿ ॥ ೩೩ ॥

ಧರಿಸಿ ಗರ್ಭವ ಮೂರು ತಿಂಗಳು
ಉರುಳೆ ಪುಂಸವನದನನಾಗಳೆ
ಮರೆಯದಲೆ ಮಾಡುವದು ಸೀಮಂತವನು ನಾಲ್ಕನೆಯ
ಬರಲು ತಿಂಗಳು ಗರ್ಭವಸ್ಫುಟ–
ವಿರಲು ಆರನೆ ಮಾಸದಲ್ಲಿಯೆ
ಪುರುಷನಕ್ಷತ್ರದಲಿ ಶುಕ್ಲದ ಪಕ್ಷದಲಿ ಮಾಳ್ಕೆ ॥ ೩೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗರುಭದೆಂಟನೆ ತಿಂಗಳಲ್ಲಿಯೆ
ಗುರುವು ಸಂಸ್ಕರಿಸುತ್ತೆ ಲಿಂಗವ
ಗರುಭಕಂ ಧರಿಸಿರುವನಷ್ಟೆ ತದೀಯಲಿಂಗವನು
ಗುರುವು ಮಗುಜನಿಸಲ್ಕೆ ಕೊಡಲೆ
ಧರಿಸುವದು ಶಿಶುಕಂಠದೊಳು ಕೇ–
ಳಿರಿಸುವದು ಪೆಸರನ್ನು ಪನ್ನೆರಡನೆಯ ದಿವಸದಲಿ || ೩೫ ||

ಕೂಸಿಗೆಂಟನೆ ತಿಂಗಳಥವಾ
ಕೂಸಿಗಂ ಪಲ್ಲುಗಳು ಮೂಡಲು
ಕೂಸ ಪೂರ್ವಕೆ ಮುಖವ ಮಾಡಿಸಿ ಕುಳ್ಳಿರಿಸಿ ಬಳಿಕಂ
ಕೂಸಿಗನ್ನಪ್ರಾಶನಾನ್ನ–
ಪ್ರಾಶನವ ಮಾಡಿಸುವೆನೆನ್ನುವ
ಲೇಸು ಸಂಕಲ್ಪದಲಿ ಮಾಡಿಸಬೇಕು ಕ್ರಮದಿಂದ || ೩೬ ||

ವರುಷ ಮೂರೊಳು ಚೌಲವಿಧಿಯಾ–
ಚರಿಸುವದು ಆಯುಷ್ಯ ವೃದ್ಧಿಗೆ
ಬರಲಿಕೆಂಟನೆವರ್ಷ ಗುರುವಿಂ ದೀಕ್ಷೆ ಕೊಡಿಸುವದು
ವರುಷ ಇಪ್ಪತ್ತೈದು ಕಳೆಯಲು
ವರವಿವಾಹವ ಜರುಗಿಸುವದೈ
ಬೆರೆಯೆ ಹರನೊಳು ಕಡೆಗೆ ಯಂತ್ಯೇಷ್ಟಿಯನು ಗೈಯುವದು || ೩೭ ||

ಇವನಿಗತಿವರ್ಣಾಶ್ರಮಿಯು ಮೇ–
ಣಿವನಿಗೆಂಬುವದೈ ಶಿರೋವ್ರತಿ
ಯಿವನಿಗೆಂಬುವದಯ್ಯ ಅಪ್ರತಿಹತ ಶಿವವ್ರತಿಯು
ಇವಗೆ ಚರಮಶರೀರಿಯೆಂಬುವ–
ದಿವಗೆ ನಡೆನುಡಿ ವೀಶನೆಂಬುವ–
ದಿವಗೆ ಶೈವಾಗಮವು ಸದ್ಯೋಮುಕ್ತ ಎಂದಿಹುದು || ೩೮ ||

ಲಿಂಗಧಾರಿಗಳುರು ಮಹತ್ತ್ವವ
ವಿಂಗಡಿಸಲಳವೇನು ಜಗದೊಳ
ಗಂಗಜಾರಿಗು ಸಾಧ್ಯವಿಲ್ಲವಿದಾದ ಕತದಿಂದ
ಹಿಂಗದರುಣಾಚಲ ಮಹೇಶನ
ತುಂಗಭಕ್ತನು ಪಿಂತೆ ಸೈರಿಭ
ದಂಗಧರನಾಗೀಶ ಲಿಂಗವತಳೆದು ಗರ್ವಿಸಿದಂ || ೩೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮದಿಸಿದಾ ಮಹಿಷಾಸುರಂ ತಾ
ತ್ರಿದಶರಿಪು ತತಿ ಚಕ್ರವರ್ತಿಯು
ಪದವಿಭೂಷಿತನಾಗಿ ಯಮರೇಂದ್ರಾದಿದಿಗ್ವರರಂ
ಒದೆದು ಭಂಗಿಸು ತೋಡಿಸಿಯೆ ತ–
ತ್ಪದವಿಗಳಿಗದಿನಾಥನಾಗಿಯೆ
ಮುದದಿ ಸುರನರ ಭುಜಗಲೋಕಾವಳಿಯನಾಳಿದನು ॥ ೬೦ ॥

ದಿವಿಜರವನುಪಟಳವ ತಾಳದೆ
ಶಿವಗೆ ಮೊರೆಯಿಡಲಾಗದೇವಿಯು
ತವಕದಿಂ ಪರಶಕ್ತಿಯವತಾರವನು ತಾಳುತಲಿ
ಅವನಿತಾರಾಪಥಗಳಿಂದೇ
ಕವಹ ಮಹದುರ್ಗಾಕೃತಿಯೊಳಾ
ಶಿವೆಯು ತನ್ಮಹಿಷನನು ಸಂಹರಿಸಿದಳು ಸಮರದಲಿ ॥ ೬೧ ॥

ಕೊಂದ ಮಹಿಷನ ದೇವತಾದ್ಯರ
ದಂದುಗವ ಪರಿಹರಿಸಿ ಶಾಂತಿಯ
ಪೊಂದಿನಿರ್ಮಲ ಮನದಿ ಯೋಚನೆ ಗೈದು ಚಿಂತೆಯೊಳು
ನೊಂದು ಗೌತಮ ಮುನಿಯ ಕುರಿತಿದ–
ನೆಂದಳೆಲೆ ತಾಪಸನೆ ದಿವಿಜರ
ವೃಂದಕಭಯವನಿತ್ತು ನಾನನ್ಯಾಯ ಕೃತಿಗೈದೆ ॥ ೬೨ ॥

ಅನ್ಯ ಕಾರ್ಯದೆ ಧರ್ಮಬುದ್ಧಿಯ
ಶೂನ್ಯಮತಿಯನ್ನಾಂಪ್ರಯೋಗಿಸಿ
ಮಾನ್ಯನಾ ಶಿವಭಕ್ತಮಹಿಷಾಸುರನ ಕೊಂದೆನಹಾ !
ಕನ್ಯೆಗೆ ನಗೀ ಕಾರ್ಯವತಿ ಸಾ–
ಮಾನ್ಯ ವೈರಾಜಸರಿಗಾಗುರು
ಮಾನ್ಯ ಸದನುಗ್ರಹವದಾಗದು ಧರ್ಮಸಂಗ್ರಹವು ॥ ೬೩ ॥

ಲಿಂಗಧಾರಿಗಳಾದ ಶೈವರ
ಭಂಗಗೊಳಿಸಲ್ಕಾರಿಗಾಗದು
ಪಿಂಗದಧಿಕಾಚಾರಶೀಲರು ಶಿವನ ಸೇವಕರು
ಮಂಗಲಾನ್ವಿತರಾದಕಾರಣ
ವಂಗಜಾರಿಯುಮಿವರ ಕರುಣಾ–
ಪಾಂಗನಾಗಿಯೆ ಪ್ರೀತಿಸುತ್ತಿಹನಾವಗಂಬಿಡದೆ ॥ ೬೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾನು ಮಹಿಷನ ಕೊರಳಲಿರುವೀ–
ಶಾನುಲಿಂಗವ ಕರದೊಳಿರಿಸಲ–
ನೂನ ಶುಭಕರಲಿಂಗವದು ಮತ್ಕರವಬಿಡದೆನುತಂ
ಮೇನಕಾತ್ಮಜೆ ನುಡಿಯೆ ಗೌತಮ
ಮೌನಿಯವ ತ್ರೈಲೋಕ್ಯ ಜನನಿಯೆ
ದಾನವಂ ಪಿಂತಿವನರುಣ ಶೈಲೇಶ್ವರನ ಭಜಕಂ || ೪೫ ||

ಅತುಳಭಕ್ತಿಯಲೀಶಲಿಂಗವ
ಹಿತದಿ ಧರಿಸಿದನನ್ನು ವಧಿಸಲಿ–
ಕತಿ ಸಮರ್ಥನಿಗಾವನಿಂಗಳವಲ್ಲ ಮೂಜಗದಿ
ಸುತಳೆ ನೀ ಕತ್ತರಿಸಿದಸುರನ
ವಿತತ ಕಂಠಪ್ರಾಪ್ತ ಲಿಂಗವ–
ದತಿಶಯದ ಶಿವದೀಕ್ಷೆ ಸಂಸ್ಕಾರವನು ಪೊಂದಿರದು || ೪೬ ||

ಅದರಿನಾ ಮಹಬಲನ ಮಹಿಷನ
ವಧಿಸಿದೌ ಶಿವದೀಕ್ಷೆ ಸಂಸ್ಕೃತಿ
ಯೊದಗದಾ ಲಿಂಗವನು ಬಹುಭಕ್ತಿಯಲಿ ಕಂಧರದಿ ||
ಮುದದಿ ಧರಿಸುತ ಯಜಿಸಿದಂ ಪೂ–
ರ್ವದ ತಪೋಬಲ ಶಿವನನುತಿ ತವ
ಪದದ ತಾಡನಗಳಿನಮಳ ಕೈವಲ್ಯವಂ ಪಡೆದಂ || ೪೭ ||

ಎಂದು ಗೌತಮ ಮುನಿಯು ದೇವಿಗೆ
ಮುಂದಹಾಸದಿನೊರೆದ ಪೂರ್ವದೆ
ಸ್ಕಾಂದಮಹ ಪೌರಾಣದರುಣಾಚಲದ ಮೈಮೆಯನು
ಚಂದದಿಂಬೋಧಿಸುವ ಖಂಡದೊ–
ಳಂದವೆನೆ ಪೇಳಿಹುದು ವೃಜಿನದ
ವೃಂದಮಂ ಪೋಗೊಳಿಸಿ ಮೋಕ್ಷವನೀವುದೀಚರಿತಂ || ೪೮ ||

ಶಿವನು ಕಾಲಾತೀತನಂತೆಯೆ
ಸವನಿಸದು ಕಾಲ ಪ್ರಮಾಣವ–
ದವನಿಯೊಳಗೀ ವೀರಶೈವ ಮತಕ್ಕೆ ಯೋಚಿಸಲು
ಶಿವಮಯು ಜಗವೆಲ್ಲವೆಂಬುವ
ಶಿವನೆ ಸರ್ವೋತ್ತಮನುಮೆಂಬುವ
ಪ್ರವಿಮಲದನ್ನಿಗಮೋಕ್ತಿಯನುಕರಿಸಿರ್ಪುದೀಭುವನಂ || ೪೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಶಿವನ ಮುಖ ಪಂಚಕದಲವ-
ತರಿಸಿ ವಸುಧಾತಲದಿ ಶಿವಮತ-
ವಿರದೆ ನೆಲೆಗೊಳಿಸುತ್ತೆ ಬೆಳೆಸುತೆ ಪರಶಿವಾಣತಿಯಿಂ
ವಿರಚಿಸುತೆ ಪೀಠಂಗಳಂಸಲೆ
ಮೆರೆದ ಪಂಚಾಚಾರ್ಯರವರೇ
ಗುರುವರೇಣ್ಯರು ಧರ್ಮಸಂಸ್ಥಾಪಕರು ಪೋಷಕರು || ೫೦ ||

ನಾನು ಶಿವಮತ ವೃತ್ತವನು ಶಿವ
ತಾನೆ ಹೃದಯದಿ ನೆಲಸಿ ನುಡಿಸ-
ಲ್ಕೇನು ಸಂಶಯವಿಲ್ಲದೊರೆದೆನು ಎನಲು ಗುರುವಿಂತು
ಜೇನುಸಕ್ಕರೆ ಸವಿಯಕಿಂತಲ-
ನೂನಮಾದೀ ವಿಷಯ ರುಚಿಸಿತು
ಧನ್ಯನಾದೆನು ಕೇಳಿ ತಿಳಿಯುತಲೆಂದನಾ ಮುನಿಯು || ೫೧ ||

ಆದರದಲೀ ಗುರುಚರಿತ್ರವ-
ನೋದುವುಸುರುವ ಕೇಳ್ವ ಸುಜನರಿ-
ಗಾದ ಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂಬಿಡದೆ || ೫೨ ||

ಮುರಬಜಡೆಮಠದೊಡೆಯನಾದರು
ಸಿರಿಗುಡೂರದಿ ಬಂದು ನೆಲಸುತೆ
ಹರಮತವಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯನವಪುರ
ದಿರುತ ಯೋಗಾನಂದತುಂದಿಲ-
ನೊರೆದನೀ ಕೃತಿಯ್ನನು ಜಗದ್ಗುರು ಸತ್ ಪರಂಪರೆಯ || ೫೩ ||

ಇಂತು ಪಂಚಮಾಧ್ಯಾಯ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ......2189......

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಜಗದ್ಗುರು ವಿಶ್ವಾರಾಧ್ಯಾಯ ನಮಃ

ಷಷ್ಠೋಽಧ್ಯಾಯ

ಭಾ. ಷ.

ಸೂಚನಾ- ಪರಮಪೂಜ್ಯ ಪದಾರವಿಂದನ
ಗುರುವರನ ವಿಶ್ವಾಭಿವಂದ್ಯನ
ಗುರು ಪರಂಪರೆ ಚರಿತೆಯೊರೆಯುವೆ ಕೇಳ್ವುದೊಮ್ಮನದಿ ॥

ಯಾರು ಸಾಂಬನೊ ವಿಶ್ವಲಿಂಗನೊ
ಯಾರು ನಿಷ್ಕಲನಾರು ನಿರ್ಮಲ
ನಾರು ಪಂಚಬ್ರಹ್ಮರೂಪನೊ ನಟನ ಕೋವಿದನೊ
ಯಾರ ಕಳೆಯಿಂ ಪ್ರಕೃತಿ ಪೊಳೆವುದೊ
ಯಾರ ಸುಖದಂಶದಲಿ ನಲಿವುದೊ
ಯಾರ ವೈಭವ ಗುಣಕತೀತವೊ ನೆನೆವೆನಾಶಿವನ ॥ ೧ ॥

ಭಾಸಮಾನಾನಂದ ವನದಲಿ !
ಕಾಶಿಯೊಳು ಸಂಪೂಜ್ಯಮಾದಾ
ವಿಶ್ವನಾಥನ ಲಿಂಗದಿಂ ಶಿವರಾತ್ರಿ ಸಮಯದಲಿ
ವಿಶ್ವಆರಾಧ್ಯನು ಸಮುದ್ಭವಿ-
ಸೀಶಧರ್ಮಸ್ಥಾಪಿಸುತೆ ಸಂ-
ತೋಷದಿಂದ ಜ್ಞಾನಪೀಠವನಾಗ ನಿರ್ಮಿಸಿದಂ ॥ ೨ ॥

ಸಾರಶಿವನಾಗಮ ರಹಸ್ಯದ
ವೀರಶೈವಾದರ್ಶ ತತ್ತ್ವವ
ಬಾರಿ ಬಾರಿಗು ತಾ ನಿರೂಪಿಸುತಿರ್ದ ಪೀಠದಲಿ
ಸೂರಿ ಜನ ಸಂದೇಹವನ್ನು ನಿ-
ವಾರಿಸುತ ವಿದ್ವತ್ಪ್ರಭಾವದಿ
ವೀರಶೈವಾರಾಧ್ಯ ವಿಶ್ವಾರಾಧ್ಯನೆಸೆದಿರ್ದಂ ॥ ೩ ॥

ಲಿಂಗ ಪೂಜಾನಂದದಲಿ ಬುಧ
ತುಂಗರನು ಸನ್ಮಾನಿಸುತ್ತಲಿ
ಸಂಗಿಸಿದ ಶಿವನನುಭವಿಗಳಂ ಸಂಮೋದಗೊಳಿಸುತಲಿ
ಲಿಂಗರೂಪನ ವಿಶ್ವನಾಥನ
ಮಂಗಲದ ಮಹಿಮೆಯನುಜನಕು-
ತ್ತುಂಗಗುರು ಚಿತ್ತರಿಸುತಿರ್ದನು ಮನವು ಮಿಡಿವಂತೆ ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನ್ಯರೆಂಬರು ಬಂದು ಮಣಿದರು
ಧನ್ಯತೆಯನಾಂತಿಪರು ಶಿಷ್ಯರು
ಗಣ್ಯವಾದಿಗಳೆಲ್ಲ ತಲೆವಾಗಿಹರು ಸಮ್ಮುಖದಿ
ಉನ್ನತರು ದರ್ಶನವ ಪೊಂದುತ
ಪನ್ನುತಿಯಗೈದಿಹರು ಕವಿಜನ
ಬಣ್ಣಿಸಿತು ಗುರುದೇವಗುಣವನು ಭಕ್ತಿಭರದಿಂದ ॥ ೫ ॥

ಚಳಿಯ ಬೆಟ್ಟದ ಶಿಖರದಲ್ಲಿಯು
ಲಲಿತ ಕೇದಾರದ ಪವಿತ್ರ
ಸ್ಥಲಕೆ ವಾರಂವಾರ ನೇಪಾಲ ಪ್ರದೇಶಕ್ಕಂ
ಹಲವು ಸಿದ್ಧರ ಸಾಧಕರ ತಾತಿಳಿ–
ಯಲಿಕೆ ಯೋಗಕ್ಷೇಮವಂ ಗುರು–
ತಿಲಕನಾಗಸ ಪಥದಿ ಪೋಗುತಬರುತಲಿರುತಿಹನು ॥ ೬ ॥

ಪಾಪಿಗಳು ಬಂದೆರಗುತಂ ಸಂ–
ತಾಪವನ್ನಳಲುತ್ತ ಪೇಳಲು
ಪಾಪಿಗಳ ಬಾವಳಲ ಕಳೆಯುತೆ ಕರುಣವಲಿ ಬಳಿಕ
ಪಾಪ ಕರ್ಮವ ನಾಚರಿಸದಿರಿ
ತಾಪ ಕೊಡದಿರಿ ಬೇರೆಯವಳಿಗೆ
ಪಾಪಹರನಂ ಮರೆಯುದಿರಿ ನೀವೆಂದು ಪೇಳುವನು ॥ ೭ ॥

ಜಂಗಮರು ಗುಂಪಾಗಿ ಬರ್ಪರು
ಜಂಗಮರು ತಾವಿದ್ದು ಪೋಪರು
ಜಂಗಮರು ವಿದ್ಯಾರ್ಜನಾ ತುರರಾಗಿ ಯಿಲ್ಲಿಹರು
ಲಿಂಗಧರರುಪದೇಶಕೋಸುಗ
ಸಂಗಳಿಸುತಲಿಲ್ಲಿರ್ಪರದರಿಂ
ಜಂಗಮರ ವಾಟಿಕೆಯು ಎಂಬಭಿಧಾನ ಬಂದಿಹುದು ॥ ೮ ॥

ಎಲ್ಲವೊಳ್ಳೆಯ ಗುಣಗಳುಳ್ಳಗೆ
ಮಲ್ಲಿಕಾರ್ಜುನನೆಂಬ ಮೂರ್ತಿಗೆ
ಸಲ್ಲಿಸುತ ಪೀಠಾಧಿಕಾರವ ತನ್ನನಂತರದೊಳ್
ಅಲ್ಲಿರುವ ವಿಶ್ವೇಶ ಲಿಂಗದಿ
ನಿಲ್ಲದಡಗಿದ ನಂದು ಭೋಂಕನೆ
ಬಲ್ಲಿದರ ಬಲ್ಲಂಥ ವಿಶ್ವಾರಾಧ್ಯಗುರು ದೇವಂ ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಳಿಕ ಗುರು ಪಟ್ಟವನು ಪಡೆಯುತ
ಕಳೆದನಾ ಶ್ರೀ ಮಲ್ಲಿಕಾರ್ಜುನ-
ನಿಳೆಯುಗುರು ಶಿವಯೋಗ ದನುಸಂಧಾನದಲಿ ಕಾಲವನು
ತಿಳಿದಜನ ಶಿವರೂಪನೆಂದುದು
ಚಲಿಸುತಿಹ ಮಲ್ಲೇಶನೆಂದುದು
ಬೆಳಗುವಾ ಶಿವತೇಜವೆಂದುದು ಕಾಶಿಕಾಪುರದಿ ॥ ೧೦ ॥

ಪತ್ತೆರಡು ನೂರ್‌ವರುಷವರೆಗುಂ
ತತ್ತಪಶ್ವಿಯು ಪೀಠಮಂ ತಾ-
ನುತ್ತಮದ ರೀತಿಯಲಿ ಮುನ್ನಡೆಸುತ್ತ ವಟುವಿಂಗೆ
ಉತ್ತರದ ಅಧಿಕಾರವನ್ನೀ-
ಯ.ಿತ್ತ ಕೊನೆಗೆ ಸಜೀವವಾಗಿಯೆ
ಕೊತು ಯೋಗ ಸಮಾಧಿಯುಂ ಕೈಗೊಂಡನಂತ್ಯದಲಿ ॥ ೧೧ ॥

ಗದ್ದಿಗೆಯು ಮೇಲ್ ತೋರುತಿಪ್ಪುದು
ಗಾದಿಯಸ್ವಾಮಿವನು ಎಂಬುವ -
ದಾದರದಿಜನ ನಿತ್ಯಪೂಜೆಯು ತಪ್ಪದಾಗುವದು
ಖೇದ ಮೋದಂಗಳಿಗೆ ಕಾರಣ
ನಾದ ಕಠದಿಂ ಪೀಠದಿಂದಿಗು
ವೇದ ಮೂರ್ತಿಯು ಎಂದು ಮನಗಾಣುವರು ಮಹಿಮೆಯನು ॥ ೧೨ ॥

ಹೀಗೆ ಯೆಪ್ಪತ್ತೇಳು ಗುರುವರ-
ರಾಗಿ ಹೋದರು ಸಿಂಹಪೀಠದಿ
ರಾಗ ದೂರರು ಮಲ್ಲಿಕಾರ್ಜುನರೆಂಬ ಪೆಸರಿನೊಳು
ಆಗಲೆಪ್ಪತ್ತೆಂಟನೆಯನವ-
ನಾಗಿ ಶಿವಲಿಂಗಾಭಿಧಾನದ
ಯೋಗಿಯೇರಿದನೀ ಮಹಾಸಿಂಹಾಸನವ ಮೊದಲು ॥ ೧೩ ॥

ಕಾಶಿ ಜಯನಂದನನರೇಶನು
ಕ್ರಿಸ್ತಶಕದ್ವೆದೇಳು ನಾಲ್ಕನೆ
ಯಿಶ್ವಿಯಲಿ ಐವತ್ತುಒಂದನೆ ಮಲ್ಲಿಕಾರ್ಜುನಗೆ
ಶಾಸನವ ಬರೆದಿತ್ತು ಭೂಮಿಯು
ಲೇಸಿಗೋಸುಗ ದಾನ ಕೊಟ್ಟಿಹ-
ನಾಸ್ತಿಯಿದುವೀವನಕ ಪೀಠಾಳ್ವಿಕೆಯದೆನಿಸಿರ್ಕುಂ ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲಹಬಾದ ಗಯೂಗಳಲ್ಲಿಯು
ತಿಳಿಯೆ ನೇಪಾಳದಲಿ ಭಾತ್‌ಗಾಂವ್
ದಲಿ ಮಹಾಪೀಠದ ಸುಶಾಖಾ ಮಠಗಳಾಗಿಹವು
ಬಲುಹ ಕಾರ್ಯಗಳಿರ್ದದಿವಸದಿ
ಗಳಿಲನಾಚಾರ್ಯರುಗಳಲ್ಲಿಗೆ
ನಿಲದೆ ಗಗನದ ಮಾರ್ಗದಲಿ ತಾವ್‌ಪೋಗಿಬರುತಿಹರು ॥ ೧೫ ॥

ಭಕ್ತ ಪುರದಲ್ಲಿರುವ ಪೀಠದ
ಶಾಖೆಯಾ ಜಂಗಮರ ಮಠಕಂ
ಭಕ್ತಿಯಲಿ ಕ್ರಿಸ್ತಾಬ್ದದಾರೊಂದೆಂಟರಲಿ ನೇಪಾಲ್
ಶಕ್ತನೃಪನಾ ವಿಶ್ವಮಲ್ಲನು
ಯುಕ್ತಕಾಶಿಯ ಪೀಠದಾಣ್ಮನಿ-
ಗಿಕ್ಕಿ ಶಾಸನ ಕಲ್ಲಿನೊಳು ಭೂದಾನ ಗೈದಿಹನು ॥ ೧೬ ॥

ಹುಡುಗನೋರ್ವ ಮಠಸ್ಥಲೀಯನು
ಕಡೆಯುಲನಿರೀಕ್ಷಿತವದೆನೆ ತ-
ನ್ನೆಡೆಗೆ ಬರಲಿಕೆ ಸಿದ್ಧಲಿಂಗೆಂಬವನು ನಡೆನೋಡಿ
ಬಿಡದುಚಿತ ಶಿಕ್ಷಣವನಾತಗೆ
ಕೊಡಿಸಿ ಶಿವಲಿಂಗೇಶ ಸದ್ಗುರು
ಗಡ ಹರೀಶ್ವರನೆಂದು ಪೆಸರಿಸಿ ಪಟ್ಟಗಟ್ಟಿದನು ॥ ೧೭ ॥

ಪುರಕೆ ಬಹು ಸಂಭ್ರಮದಿ ಮೈಸೂ-
ರರಸ ತಾ ಶ್ರೀ ಗುರು ಹರೀಶನ
ಬರಿಸುತುಂ ರೂಪಾಯಿಯಾರ್‌ನೂರ್ ವರುವರುಷಕಳಿಸಲ್
ಬರೆದು ಕೊಟ್ಟನು ತಾಮ್ರಪತ್ರವ-
ನಿರದೆ ದೀನರಿಗಿತ್ತುಳಿದುದನು
ಮರಳಿ ಕಾಶಿಗೆ ತಂದನಾಗುರುವರನುದಾರಗುಣಿ ॥ ೧೮ ॥

ವರುಷದಲಿ ಶಿವರಾತ್ರಿ ಸಮಯದಿ
ಗುರುಜಯಂತಿಯನಾಚರಿಸುತುಂ
ಬರುವ ಛಾತ್ರರಿಗೊದಗಿಸುತ ಸೌಕರ್ಯಮಂ ಮಠದಿ
ಕರೆದು ಗೌರವಿಸುತ್ತ ಬುಧರನು
ಹರಸಮರ್ಚನ ಲೋಲನಾಗುತ
ಕರಮೆಸೆದನಾ ಗುರು ಹರೀಶ್ವರನೀಶ ಪತ್ತನದಿ ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಂಧ್ರದೇಶದಲಿಪ್ಪ ರಾಜ ಮ-
ಹೇಂದ್ರಿಯವನಾಗಿರ್ಪ ಪೀಠದಿ
ನಿಂದು ಕಲಿಯುವ ವೀರಭದ್ರನಿಗಿತ್ತು ಪಟ್ಟವನು
ಅಂದು ಗುರುಲಿಂಗೈಕ್ಯನಾದನು
ಚಂದದಿಂ ಗುರು ವೀರಭದ್ರನು
ಸಂದಸಂಶಂಪುವಳಿದು ಸಿಂಹಾಸನದಿ ನಿಂದಿಹನು ॥ ೨೦ ॥

ತೆರೆದು ವಿಶ್ವಾರಾಧ್ಯನಾಮದಿ
ವರ ಮಠದಿ ಬ್ಯಾಂಕನ್ನು ಹಣವನು
ಪರರ ಮೂಲಕ ಪಡೆದು ರಕ್ಷಿಸಿ ಬಡ್ಡಿಯನು ಕೊಡುತ
ಬರುತಿರಲು ಬಹಳಷ್ಟು ಜನರಿಗೆ
ಪಿರಿದುಪಕೃತಿಯು ಸಂಭವಿಸಹತ್ತಿತು
ಪರಿ ಪರಿಯ ರೀತಿಯಲಿ ಗುರುವುಪಯುಕ್ತನೆನಿಸಿದನು ॥ ೨೧ ॥

ಕೊಡಗಿನಾ ಹಾಲೇರಿ ವಂಶದ
ಪೊಡವಿಯೊಡೆಯರು ತೊರೆದು ನಾಡನು
ಕಡೆಗೆ ಕಾಶಿಗೆ ಬಂದು ಪೀಠದಿ ನೆಲಸಿಯಸು ದೊರೆದರ್
ಕೊಡಗಿನೊಡತಿಯು ರಾಣಿ ಛತ್ರವ
ಗಡನೆ ಕಟ್ಟಿಸಿದಳು ಶಿವಾತ್ಮರ
ಬೆಡಗಿನ ಸ್ಮಾರಕಗಳೀಗಳು ಶೋಭೆ ಪಡೆದಿಹವು ॥ ೨೨ ॥

ಕಾಶಿಯೊಳಗಿನ ದೀನ ಜನರಿಗೆ
ಕಾಶಿಗಾಗಮಿಸುವರಿಗಂ ಮೇಣ್
ಕಾಶಿಗೋಸುಗ ಬರುವ ವಿದ್ಯಾರ್ಥಿಗಳಿಗೋಸುಗವು
ಕಾಸನೇನನು ತೆಗೆದುಕೊಳ್ಳದೆ
ವಿಶ್ವವಂದ್ಯನ ಸೇವೆಯೆನ್ನುತ
ತೋಷದಿಂದುಚಿತ ಪ್ರಸಾದವನೇರ್ಪಡಿಸಿದಂಪ್ರಭುವು ॥ ೨೩ ॥

ಇವನ ಬಳಿಕೆಂಭತ್ತು ಒಂದನೆ
ಯವನು ರಾಜೇಶ್ವರನು ಎಂಬವ-
ನಿವನು ಆಂಧ್ರಪ್ರಾಂತದವನಾಗಿರ್ದು ಕಲಿಯಲಿಕೆ
ಶಿವಪುರಿಗೆ ಬಂದಿರಲು ಗುರುವರ-
ನಿವನ ಮೆಚ್ಚುತೆ ಪಟ್ಟಗಟ್ಟಿದ-
ನಿವನು ಜಂಗಮರಾಜನೆಂಬಗ್ಗಳಿಕೆ ಗಳಿಸಿಹನು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಕುಲದಿ ಸಾಕಷ್ಟು ಛಾತ್ರರು
ಹುರುಪಿನಲಿಯೋದುತ್ತಲಿರ್ದರು
ಮುರುಘಮಠ ಜಯದೇವ ಪೂಜ್ಯರ್ ಮೂರುಸಾವಿರದ
ವರಮಠದ ಗಂಗಾಧರಾಖ್ಯರು
ಸರಸ ಕಾಶೀನಾಥ ಶಾಸ್ತ್ರಿಗ-
ಳಿರುತ ಮುದೆ ಸಮಾಜ ಸೇವೆಯನೆಸಗಿ ಪೆಸರಾದರ್ || ೨೫ ||

ವೀರಸಿಂಹಾಸನದ ಬಾವುಟ
ಭಾರತದ ಮಧ್ಯದಲಿ ಏರಿಸಿ
ಹಾರಿಸುತ್ತುಂ ಪೀಠದೇಳ್ಗೆಯ ಸಾಧಿಸುತೆ ಮತ್ತೆ
ಸಾರ ವಿದ್ವತ್ಪ್ರೇಮಿಯಾಗಿಹ
ವೀರಶೈವರ ಧರ್ಮಮಹತಿಯ
ತೋರಿದ ಶಿವಾನಂದ ಸದ್ಗುರುವಿಲ್ಲಿಯೋದಿಹನು || ೨೬ ||

ಶ್ರೀಗಿರಿಯ ಪೀಠದೊಳು ಮಂಡಿಸಿ
ಸಾಗಿಸುತ ಕಲ್ಯಾಣ ಕರ್ಮವ
ಶ್ರೀಗಿರಿಯ ಮೈಮೆಯನು ಮನಗಾಣಿಸಿದ ವಾಗೀಶಂ
ಆಗಲವ ತಾರುಣ್ಯವಯದಲಿ
ರಾಗದಿಂ ಗುರುಕುಲದಲೋದುತ
ಭೋಗಿಭೂಷಣ ಮಲ್ಲಿಕಾರ್ಜುನನಂಘ್ರಿ ಭಜಿಸಿಹನು || ೨೭ ||

ಚಿಕ್ಕ ಮಣ್ಣೂರ್ ಮಠದ ಗುರು ದೇ-
ವಾಖ್ಯಗುರು ತಾ ನವಿಲಗುಂದದಿ
ಬೇಕೆನಲು ಕಾಲೇಜ ಜನ ಸರ್ವಸ್ವವರ್ಪಿಸುತ
ಇಕ್ಕಿ ಮುಂದಡಿ ಕಲೆಯ ಶಾಲೆಯ-
ನಕ್ಕರದಿ ನಿರ್ಮಾಣ ಗೈದನು
ಸಕ್ಕದವ ಕಲಿತವನು ಗುರುಕುಲದಲ್ಲಿ ನೆಲಸುತ್ತೆ || ೨೮ ||

ವೈದ್ಯರುರು ವಿದ್ಯೆಯಲಿ ಪಳಗಿದ
ಖೇದಗೊಂಡೈತಂದ ರೋಗಿಯ
ಮೋದಗೊಳಿಸುತ ಛಾತ್ರಕುಲ ಸಂಪೋಷಕಂ ಎನಿಸಿ
ಸಾಧುಸೇವಿತನಾದ ಕೊಪ್ಪಳ
ದಿದ್ದು ರಾಜಿಪ ಗವಿಮಠವಧಿಪ
ನಾಪ ಶಾಂತ್ವೀರ್‌ಸ್ವಾಮಿ ಯಭ್ಯಸಿಸಿದನು ಗುರುಕುಲದಿ || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಸೆಯೊಳಗೆ ಪೂವಲ್ಲಿ ಪಿರಿಮಠ-
ದೆಸೆವಚರ ನೀಲ್‌ಕಂಠನಾಮನು
ಪೆಸರು ಪಡೆದಾ ಹೊಳಲ ಶಾಸ್ತ್ರಿಯು ಚಂದ್ರಶೇಖರನು
ರಸಿಕ ಪಂಡಿತ ವೀರಭದ್ರನು
ಮಿಸುಪ ಕೋಗ್ನಾಡೂರಿನಾತನು
ಒಸೆದು ಗುರುಕುಲವಾಸಿಯಾಗಿಯೆ ವಿದ್ಯೆಯಾರ್ಜಿಸಿದರ್ ॥ ೩೦ ॥

ನಲವಡಿ ಶ್ರೀಕಂಠ ಶಾಸ್ತ್ರಿಯು
ಬಲು ಸರಳ ವರ್ತನನು ನಾಟಕ-
ಗಳನು ಬರೆದಗ್ಗಳಿಕೆಯಿಂ ಕವಿಚಂದ್ರನೆನಿಸಿಹನು
ಛಲವಿಡಿಯು ತೊಂದಿರುಳಿನಲ್ಲಿಯು
ಚಲುವ ಬಯಲಾಟವನು ಬರೆದನು
ಕಲಿತಿರುವ ನೀ ಗುರುಕುಲದಿ ಪ್ರತಿಭಾ ಸಮನ್ವಿತನು ॥ ೩೧ ॥

ಈಶಕೇನಾದ್ಯುಪನಿಷತ್ತಿಗೆ
ಸಾಸದಿಂ ತಾವೀರಶೈವದ
ಭಾಷ್ಯಮಂ ಬರೆದಂಥ ಉಮಚಗಿ ಶಂಕರಾಖ್ಯಬುಧಂ
ಶಾಸ್ತ್ರಿವರ ಜಗದೀಶ ನಾಲ್ವಾರ್
ಈಶಕವಿ ಬಿದರೆಯ ಹರೀಶ್ವರ
ಶ್ರೀ ಶಿವಕುಮಾರಸ್ವಾಮಿ ವೈದ್ಯಂ ಬೆಂಗಳೂರಿನವಂ ॥ ೩೨ ॥

ಘನ್ನ ಪಂಡಿತ ಚಿದ್ಘನಾರ್ಯ್ಯಂ
ಚನ್ನವೀರಾಚಾರ್ಯ ಬಿಚ್ಚಲಿ
ಯಿನ್ನು ಕೇದಾರದ ಮಹಾಗುರು ನೀಲಕಂಠಾರ್ಯ್ಯಂ
ಸನ್ನುತಂ ಶ್ರೀ ಶಾಂತಲಿಂಗಂ
ಮೇಣು ಹೊಳೆ ಹುಚ್ಚಾರ್ಯ ಕಮತಗಿ
ಮೇಣು ರಂಭಾಪುರಿಯ ರುದ್ರಮುನೀಂದ್ರ ಗುರುವರ್ಯ್ಯಂ ॥ ೩೩ ॥

ಚಂದ್ರಶೇಖರ ಗುರುವು ಕರಮಳ
ಜೌಂಧಕರ ಆಚಾರ್ಯ ಬಾರ್ಸಿಯ-
ಮಂದಮತಿ ಶಿವಲಿಂಗಗುರು ಅಪಮೃದನ ಪುರದವನು
ಬಂದು ಹೊನಗೊಂಡದಬುಧಂ ತಾ
ನಿಂದು ರೌಡದ ಕುಂದಿ ಶಾಸ್ತ್ರಿಯು
ಚಂದದಲಿ ಗುರುಕುಲದಲಭ್ಯಾಸವನು ಮಾಡಿಹರು ॥ ೩೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬರೆದು ವಿವಿಧ ಗ್ರಂಥಗಳನುಂ
ಪರಿಚಿತನು ತಾನಾದ ನಾಡಿಗೆ
ಸಿರಸಿ ಗುರುಶಾಂತಾಖ್ಯ ಶಾಸ್ತ್ರಿಯು ಸೂಡಿಯಾಚಾರ್ಯಂ
ಗುರುವು ಸಿದ್ಧಸ್ವಾಮಿ ಬಾರಸಿ
ಗುರುವು ಸಿದ್ಧಸ್ವಾಮಿ ಪರಿಹರ
ಬರಪಗಾರಂ ಸೋಮಶೇಖರಶಾಸ್ತ್ರಿ ಗುಂಟೂರು || ೨೫ ||

ಇಂತು ಎಷ್ಟೋ ಮಂದಿ ಬಂದುಸ-
ಮಂತು ಗುರುಕುಲವಾಸ ಮಾಡುತ
ಸಂತಸದಿ ವಿದ್ಯಾರ್ಜನೆಯು ಗೈದಿಪರು ಬೆಳ್ಳಸವ
ಆಂತಿಹರು ನಾನಾವಿಧಾನದಿ
ಸಂತಸವಗೊಳಿಸುತ್ತ ಲೋಗರ
ಕಂತುವೈರಿಯ ಕರುಣವನು ಪೊಂದಿಪುದು ಪೆಪ್ಮೆಯಲಾ || ೨೬ ||

ಹಿಡಿತವಿಲ್ಲದೆ ಹಣವನೆಲ್ಲವ
ಕೊಡುತಲಿರೆ ಪಂಡಿತರಿಗಲ್ಲದೆ
ಒಡವರಿಗೆ ಯುಂ ಬ್ಯಾಂಕಿನಲ್ಲಿಯ ಠೇವಣಿಯು ಕೂಡ
ತಡೆಯದಾಯಿತು ಕರ್ಮಚಾರಿಗ-
ಳೆಡಬಿಡದೆ ತಪ್ಪುತ್ತ ನಡೆದರು
ಕಡು ವಿವೇಕಿಗಳಿರ್ದರುಂ ತಡೆಯಲ್ಕೆ ಬರದಾಯ್ತು || ೨೭ ||

ಶಿವಕುಮಾರಂ ಮಿಶ್ರನೆಂಬವ-
ನಿವನು ಪಂಡಿತರಾಜ ನೆನಿಪನು
ಶಿವನ ಪ್ರತಿರೂಪೆಂಬ ಭಾವನೆ ಜನದಿ ಮೂಡಿಹುದು.
ದಿವಸಕೊಮ್ಮೆಯು ಬಂದು ಪೀಠಕೆ
ತವಸಿಯುಡಿದಾವರೆಗೆ ತಾ ನಮಿ-
ಸುವ ಸುವ್ರತವನು ದೃಢದಿ ಕೈಬಿಡದಿರ್ದನಾ ಪ್ರಾಜ್ಞಂ || ೨೮ ||

ಬರದಿರಲು ದಿನವೇಳು ವಿಬುಧನು
ನೆರೆ ವಿಚಾರಿಸಲುದರ ಶೂಲಿಯು
ಮುರಿದು ಕಾಡುವದೆಂದು ಪೇಳ್ದರು ಸೇವಕರ್ ಮರಳಿ
ವರಭಸಿತವಿದು ಕೊಂಬುದೆನ್ನಲು
ಭರದಿ ಪೋಗೀಯಲ್ಕೆ ವಿಬುಧಂ
ಮರೆಯದಲೆ ಕೊಂಡಿಹನು ಪರಿಹರವಾದುವಾಶೂಲಿ || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದಿನಿಂ ಪಂಡಿತ ಮಹೋದಯ–
ನಿಂದುಧರನಿವನೆಂದು ಭಾವಿಸಿ
ಬಂದು ವಂದಿಸಿ ಪೋಪುದನು ತಾ ಮುಂದುವರಿಸಿದನು
ತಂದೆ ಮಕ್ಕಳ ಹಾಗಿರುವ ಸಂ–
ಬಂಧವದು ಪೆರ್ಚುತ್ತ ಪೋದುದು
ತಂದೆ ರಾಜೇಶ್ವರ ಜಗದ್ಗುರುವೆಂದು ನಂಬಿದವಂ || ೪೦ ||

ಲಿಂಗಧಾರಣ ಚಂದ್ರಿಕೆಗೆ ಬುಧ
ತುಂಗಮಿಶ್ರನು ಶರನ್ನಾಮ ದು–
ತ್ತುಂಗ ಟೀಕೆಯ ಬರೆದು ಗುರುವರ್ಯನಿಗೆ ಸಲ್ಲಿಸಿದಂ
ಲಿಂಗಧಾರಣ ಪದ್ಧತಿಯು ಶಾ–
ಸ್ತ್ರಂಗಳಲಿ ಸಂಸಿದ್ಧವೆಂಬುದ–
ರಿಂಗಿತವು ತಾನೆಲ್ಲೆಡೆಯ ಜನಗಳಿಗೆ ಗೊತ್ತಾಯ್ತು || ೪೧ ||

ಬಳಿಕ ಪೀಠಾಧೀಶನಾದನು
ಕಲಿತ ಶಿವಲಿಂಗಾಭಿಧಾನನು
ಬೆಳಗಿನೊಳು ಗಂಗೆಯಲಿ ಪ್ರತಿದಿನ ಮಿಂದು ಬರುತಿರ್ದಂ
ಕಲಹದಲಿ ವಿಜಯವನು ಪಡೆಯುತ
ವಿಲಸಿತ ಶ್ರೀಗುರು ಮಹೋತ್ಸವ
ನಲಿನಲಿದು ಪರಳಿಯ ಮಹಾಜನವಂದು ಮಾಡಿದುದು || ೪೨ ||

ಒಂದುವೊಂಭತ್ತೊಂದುಯೆಂಟರ
ಸಂದಕ್ರಿಸ್ತನ ಶಕದಿ ಪೀಠದಿ
ನಿಂದು ಪಂಚಾಚಾರ್ಯ ಸಮ್ಮೇಲನವ ಜರುಗಿಸಿದಂ
ಒಂದು ಪೀಠಕ್ಕೋರ್ವನೇ ಸರಿ–
ಯೆಂದು ನಿರ್ಣಯವಾಗಲಾಯಿತು
ಹಿಂದೆ ಯಿರ್ವಧಿಕಾರವಿದ್ದುದು ತರವದಲ್ಲೆಂದರ್ || ೪೩ ||

ಮದನ ಮೋಹನ ಮಾಲವೀಯನು
ಹದುಳದಲಿ ವಿದ್ಯಾಲಯಕ್ಕಂ
ಸದಯ ಶಿವಲಿಂಗೇಶ ಸನ್ನಿಧಿಯಲ್ಲಿಗೈತಂದು
ಸದಮಳನೆ ಸುಸ್ಥಲವು ಬೇಕಿದೆ
ಬದುಕಬೇಕಿದೆ ವಿದ್ಯೆಯಿಂ ಜನ
ವೊದಗಿಸಲು ಬೇಕೆನಲು ಸನ್ನಿಧಿಯೊಪ್ಪಿ ಕೊಟ್ಟಹುದು || ೪೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶಿಯರಸನು ಕೊಟ್ಟನೆಲದಲಿ
ಕಾಶಿ ಹಿಂದೂ ವಿಶ್ವ ವಿದ್ಯೆಯ
ಭಾಸುರದ ಮಂದಿರವು ಸಂಸ್ಥಾಪಿತವು ಮಾಳ್ವೀಯ
ಭಾಸಮಾನವು ಜಂಗಮರಪುರ
ಶ್ರೀ ಸಮಾಧಿಗಳಲ್ಲಿ ಹಿಂದಿನ
ವಿಶ್ವವಂದ್ಯಾಚಾರ್ಯರವು ಪೂಜೆಯನು ಕೊಂಬುವವು ॥ ೪೫ ॥

ಬಿರ್ಲಾ ಎಂಬುದ್ಯೋಗಪತಿತಾ
ಸುರುಚಿರದ ಸುಶ್ವೇತ ಶಿಲೆಯಿಂ
ವಿರಚಿಸಿಹನಲ್ಲಿಯೆ ಸದಾಸಂದರ್ಶನೀಯವಿಹ
ಪರತರ ಶ್ರೀ ವಿಶ್ವನಾಥನ
ಮೆರೆವ ಪಾವನವಾದ ಸನ್ಮಂ-
ದಿರವ ನವನೀಕೃತಿಯು ಬಹಳಭಿನಂದನೀಯವಲ ॥ ೪೬ ॥

ಏಷಿಯಾ ಖಂಡದಲಿ ಒಂದನೆ
ವಿಶ್ವವಿದ್ಯಾಲಯವಿದಾಗಿದೆ
ವಿಶ್ವದೆಲ್ಲಾ ಕಡೆಯು ಬೆಳುಜಸವಿದರ ಪಸರಿಸಿದೆ
ವಿಶ್ವಗುರುಗಳ ಭೂಮಿಗುಣವಿದು
ಶಾಶ್ವತದ ಪಾವಿತ್ರ್ಯದೆಡೆಯಿದು
ವಿಶ್ವನಾಥಾನುಗ್ರಹದ ಪರಿಣಾಮಂ ಪ್ರಪಂಚಕ್ಕೆ ॥ ೪೭ ॥

ಇಲ್ಲಿ ಜಂಗಮ ಪುರವ ನಿರ್ಮಿಸು-
ತಿಲ್ಲಿ ಗೋಶಾಲೆಯನು ಕಟ್ಟುತ-
ಲಿಲ್ಲಿ ಕೃಷಿಯಂ ಮಾಡಿಸುತಲಿರ್ದರ್ ಮಹಾಗುರುಗಳ್
ಬಾಳೆ ತೆಂಗಿನ ತೋಟವನು ಮೇಣ್
ಮಲ್ಲಿಗೆ ಗುಲಾಬಿಗಳ ತೋಟವ-
ನಲ್ಲಿ ಬೆಳಸುತಲೊಳ್ಳೆ ಲಾಭವನವರು ಪಡೆದಿಹರು ॥ ೪೮ ॥

ಹಸುಗಳೆಂದರೆ ಯೀ ಮಹಾತ್ಮರಿ-
ಗುಸಿರಿಗಿಂತಲು ಹೆಚ್ಚು ಮಮತೆಯು
ಮೊಸರು ಪಾಲ್ತುಪ್ಪಗಳ್ಳಲಿಂಗಾರ್ಪಿತಕೆ ಸಲ್ಲುವವು
ಹಸುವ ಕಾವವರಿಲ್ಲದಾಗಲು
ಹಸಿರು ಹುಲ್ಲಿರುವಂಥ ತಾಣಕೆ
ಹಸುಗಳನು ಕಾಯಲಿಕೆ ಮತ್ತೇರ್ಪಾಡು ಮಾಡುವರು ॥ ೪೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವು ಬೇವುಗಳಿವು ಸುಖಾವಹ
ಗೋವು ಲೋಕದ ಕಾಮಧೇನುವು
ಗೋವಿನಿಂ ಪುಟ್ಟುವದು ಭಸಿತವು ಗೋವಿನಂಗದಲಿ
ದೇವಕೋಟಿಯು ವಾಸವಾಗಿದೆ.
ಗೋವುಗಳ ಗೋವಿಂದ ಕಾಯ್ದನು
ಗೋವು ಕಾವುದು ಸುಕೃತ ಕಾರ್ಯವಿದೆಂದು ಪೇಳುವರು || ೫೦ ||

ಹಿಂದೆ ದಿನಪಾನ್ವಯದಿಲೀಪನು
ನಂದಿನಿಯ ಪರಿಚರ್ಯೆಯಿಪ್ಪ-
ತ್ತೊಂದು ದಿನ ತೊತ್ತಾಗುತೆಸಗಲು ತನುಜಕಾಮನೆಯಿಂ
ಮುಂದೆ ಬೇಗನೆ ರಘುವು ಜನಿಸಿದ
ನಂದಿವಿನುತನು ಎತ್ತನೇರಿದ
ಮಂದಿ ಯೆತ್ತುಗಳಿಂದ ಬೆಳೆದನ್ನವನು ಭುಂಜಿಪರು || ೫೧ ||

ಆವುಗಳು ಪರಮೋಪಕಾರವ
ಗೈವ ಸಭ್ಯ ಸುಪೂಜ್ಯವೆನಿಸುವ
ಜೀವಿಗಳು ತಜ್ಜಾತವಸ್ತುವು ಪುಷ್ಟಿದಾಯಕವು
ಗೋವುಗಳು ನಿಜವಾದ ಸಂಪದ
ಗೋವುಗಳ ಕಟುಕರಿಗೆ ಮಾರುವ-
ರೋವದೆ ಸ್ವಾರ್ಥಿಗಳು ಗಳಿಸುವರಕಟ ದುರ್ದೆಶೆಯ || ೫೨ ||

ಕಾಲ ಕಾಲಕೆ ಮೊಗಲ ರಾಜರು
ಕಾಲ ಕಾಲಕ್ಕುಚಿತವಾಗಿಹ
ಕೇಳಿ ಹೇಳಿಕೆಗಳನು ಜಂಗಮರಿಂದ ಬಂದಿರುವ
ಮೇಲು ಭಾವನೆಯಿಂದ ಬರೆದಿರು-
ವೋಲೆಗಳನಿತ್ತಿರುವರಾಗಳೆ
ಗಾಳಿಗೋಪುರವಲ್ಲಿ ನೋಡಲುಬಹುದು ಕಾಗದವ || ೫೩ ||

ಮೊಗಲ ಚಕ್ರೇಶ್ವರರೊಳಕಬರ
ಮಿಗಿಲು ಹಿಂದು ವಿರೋಧಿಯಾಗದೆ
ಬಗೆಯುತಿರ್ದನು ಹಿಂದು ಮುಸಲರು ಇವರು ಸಮನೆಂದು
ಜಗಳಮಂ ಕಾಯದಲುಪಾಯದ
ಬಗೆಯನನುಸರಿಸುತ್ತಲೀರ್ವರ
ಬಗೆಯನಪಹರಿಸಿದನು ಚಾಣಾಕ್ಷತೆಯೊಳಾಳ್ವಿಕೆಯೊಳ್ || ೫೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಂದು ವಂಚಿಸುತಣ್ಣ ತಮ್ಮರ
ತಂದೆಯಾದ ಶಹಾಜಹಾನನ
ಬಂಧನದಲಿರಿಸುತ್ತ ಕೊನೆಗೌರಂಗಜೇಬನವಂ
ಹಿಂದು ಮತ ವಿದ್ವೇಷಿಯಾದನು
ಹಿಂದು ನೃಪ ಸಹಕಾರವಿಲ್ಲದೆ
ದಂದುಗಕ್ಕೊಳಗಾಗಿ ಕಾಳಗದಲ್ಲಿ ದಿನಗಳೆದಂ || ೫೫ ||

ತೆರಿಗೆ ಹಾಕಿದ ಹಿಂದು ಜನ ಮೇಲ್
ಕಿರಿಕಿರಿಯ ಕೊಡುತಿರ್ದು ಹಿಂದೂ
ನರಪರಿಗೆ ದೇಗುಲಗಳಂ ಪಾಳ್ಗೆಡವಿ ಮಸಿದೆಗಳಂ
ನಿರಮಿಸುತ ಲಂಜಿಸುತ ನಡೆವವ-
ನರಿದು ರಜಪೂತಾದಿಜನ ತತಿ-
ಯಿರದೆ ಪ್ರತಿಭಟಿಸಿತ್ತು ಶಿವಜೀ ಖಡ್ಗ ಝಳಪಿಸಿದಂ || ೫೬ ||

ಕಾಶಿಪುರಿಯಸ್ಸೊಮ್ಮೆ ಮುತ್ತುತ
ನಾಶಗೊಳಿಸೌರಂಗಜೇಬನು
ವಿಶ್ವನಾಥನಮಂದಿರವ ಜಂಗಮರ ವಾಟಿಕೆಯು
ನಾಶಪಡಿಸಲು ಬೇಕು ಎಂದು ಸ-
ಲೀಸ ತಾ ಮುನ್ನುಗ್ಗಿ ಬಂದನು
ನಾಶವಪ್ಪುದವಶ್ಯ ಹಿಂದೂ ಜನರ ತಾಣೆಂದು || ೫೭ ||

ಪೊಡವಿ ಮುಗಿಲಾವರಿಸಿ ಕಣ್ಣಿಂ
ಕಿಡಿಗಳುದುರಿಸುತಿರಲು ನೋಡಲು
ನಡುಗಿ ಪೆದೆ ಭೀಕರದ ಮೂರುತಿ ಕಾಣೆ ಮತ ಮುಂದೆ
ಅಡಡೆ ತಪ್ಪಿದೆನಿಲ್ಲಿಯೆನ್ನುತ
ಖಡುಗ ಕೈಕೆಳಗಿಳಿಸಿ ದೈನ್ಯತೆ-
ಯಡರೆ ದಿನಚರಿಯಲ್ಲಿ ಬರೆದನು ದಾನವಿತ್ತಿಹನು || ೫೮ ||

ವಾಚನಾಲಯು ಬೇಕು ಎನ್ನುವ
ಸೂಚನೆಯು ಸನ್ನಿಧಿಯ ಸಭೆಯೊಳ
ಗುಚ್ಚರಿಂ ಬಂದಿರೆ ಸಮಸ್ತರು ಮೆಚ್ಚಿ ಸೈಯೆಂದರ್
ಸ್ವಚ್ಛಬಗೆ ಭಾಲಾಕ್ಷ ಶಾಸ್ತ್ರಿಯು-
ಯಾಚಿತನು ತಾನಾಗಿ ಹರ್ಷಿಸಿ
ಯೋಚಿಸದೆ ತನ್ನೆಲ್ಲ ಪುಸ್ತಕಗಳ ಸಮರ್ಪಿಸಿದಂ || ೫೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಲವರುಂ ಸ್ವಾಮಿಗಳು ಇರ್ದರು
ಕೆಲವರುಂ ಶಾಸ್ತ್ರಿಗಳು ಇರ್ದರು
ಕಲಿಯುಗ್ಗೆ ತಂದವರಿಗಿದು ಬಹು ಮುಖ್ಯ ವಿಷಯೆಂದರ್
ಸುಲಭದಲೆ ಗ್ರಂಥಾಲಯವು ಆ-
ಗಳಿಯೆ ಸುರುವಾಯ್ತಿೀಗಳದು ತಾ || ೭೦ ||
ಬೆಳಿದು ಬೆಳಕಾಗಿಹುದು ಪೀಠಕ್ಕೊಪ್ಪುವಾ ತೆರದಿ

ಬಳಿಕ ಯಂಭತ್ಮೂರನೆಯ ಗುರು-
ತಿಲಕನಾದನು ತಾಸಗಾಂವದ
ಲಲಿತ ಪಂಚಾಕ್ಷರ ಶಿವಾಚಾರ್ಯಂ ಮಹಾಮಠಕೆ
ಬಲಿತ ಬ್ಯಾಂಕಿನ ದೋಷದಿಂ ಬಲು
ಬೆಳೆಯೆ ಸಾಲವು ಸಾಲಗಾರರು
ಬಳಿಗೆ ಬಂದಾಸ್ತಿಯನು ಮಾರುವದೆಂದು ಛಲವಾಂತರ್ || ೭೧ ||

ಅಲಹಬಾದ ಶ್ರೇಷ್ಠ ನ್ಯಾಯದ
ನೆಲೆಯಲೀ ಪೀಠಕ್ಕೆಹಾಸ್ತಿಯು
ಕಳೆಯ ತಕ್ಕದ್ದಲ್ಲವೆಂಬುದ ಸಿದ್ಧಪಡಿಸಿದನು
ಉಳಿದ ಉತ್ಪನ್ನದಲಿ ಸಾಲವು
ಕಳೆದು ಹೋಗುವ ಹಾಗೆ ಮಾಡುತ-
ಲಳಿಸವಲೆ ಪೀಠಾಸ್ತಿಯನು ಸಾಹಸದಲುಳಿಸಿಹನು || ೭೨ ||

ಚೆಲುವನ್ನೆ ಮೃದುಲಸ್ವಭಾವಿಯು
ಕಳೆಯು ಮುಖದೊಳಗಿನದು ಶಾಂತವು
ಕಲಿತ ಶಿಕ್ಷಿತಜನಗಳಂ ಕಂಡುತ್ಸಾಹಗೊಳ್ಳುವನು
ತಳಮಳಿಸುವಂ ನೋಡಿದೀನರ
ಕಳವಳವಕಳೆಯಲ್ಕೆ ನಿಲ್ವನು
ಬಳಲಿ ದೇಹಾಲಸ್ಯದಿಂ ಲಿಂಗೈಕ್ಯನಾಗಿಹನು || ೭೩ ||

ಅಂತ್ಯದಲಿ ಬರೆದಿಟ್ಟ ಲೇಖನ-
ದಂತೆ ಗುರು ಪಂಚಾಕ್ಷರೇಶನು
ಸಂತಬುಧ ಸಂತತಿಯ ಸಂಪ್ರೀತಿಯನು ಗಳಿಸಿರ್ದ
ಶಾಂತ ಶರ್ಮನು ಚಿದರೆ ಮಠದ-
ತ್ಯಂತ ವಿದ್ವಾನ್ ವೀರಭದ್ರನು
ಕಾಂತಸಿಂಹಾಸನದಿ ಮುಡಿಸಿದಂ ವಿಚಕ್ಷಣನು || ೭೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರದಲೀ ಗುರುಚರಿತ್ರವ-
ನೋದುವುಸುರುವ ಕೇಳ್ವ ಸುಜನರಿ-
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಪರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂ ಬಿಡದೆ ॥ ೬೫ ॥

ಮರಬ ಜಡೆಮಠದೊಡೆಯನಾದರು
ಸಿರಿಗುಡೂರಕೆ ಬಂದು ನೆಲಸುತೆ
ಹರ ಮತವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪುರ-
ದಿರುತ ಯೋಗಾನಂದ ತುಂದಿಲ-
ನೊರೆದನೀ ಕೃತಿಯನು ಜಗದ್ಗುರು ಸತ್‌ಪರಂಪರೆಯ ॥ ೬೬ ॥

ಇಂತು ಷಷ್ಠೋಽಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋ ಭಗವತೇಸ್ಕಂದ ದೇವಾಯ

ಸಪ್ತಮಾಧ್ಯಾಯ

ಭಾ. ಷ.

ಸೂಚನಾ–ಚಿದರೆ ಮಠಜನು ವೀರಭದ್ರನು
ಚದುರ ಸಾಹಸಿ ವಿಬುಧನಾಗುತ
ಪದೆದು ಕಾಶಿಯ ಪೀಠ ವಾರೋಹಿಸಿದನುಜ್ವಲನು ||

ಪಾಹಿ ಪರಮಾಕಾಶನೀಶನೆ
ಪಾಹಿ ಪರಮಜ್ಯೋತಿ ರೂಪನೆ
ಪಾಹಿ ಮೃತ್ಯುಂಜಯನೆ ಮಹದಾನಂದ ಮಂದಿರನೆ
ಪಾಹಿ ಪಶುಪತಿ ಪಂಚವದನನೆ
ಪಾಹಿ ಪ್ರಮಥಾಧಿಪನೆ ಶರ್ವನೆ
ಪಾಹಿ ವಿಶ್ವೇಶ್ವರನೆ ಸರ್ವಜ್ಞನೆ ಸದಾಶಿವನೆ || ೧ ||

ಭಾರತದ ದಕ್ಷಿಣದ ದಿಶೆಯಲಿ
ಭೂರಿ ವೈಭವ ಪೊಂದಿದಾಂಧ್ರವು
ವೀರಶೈವಾಚಾರ ನಿರತರಿ ಗಾಸ್ಪದದ ರಾಜ್ಯಂ
ಮೂರು ದಿಕ್ಕುಗಳಲ್ಲಿ ಸಾಂಬನು
ಮೂರು ಲಿಂಗಗಳಾಗಿ ನೆಲಸಲು
ಸಾರಿ ಕರೆದರು ಬುಧರು ಮೊದಲು ತ್ರಿಲಿಂಗವೆಂದಿದನು || ೨ ||

ವೀರ ಧರ್ಮಸ್ಥಾಪನಾಢ್ಯನು
ವೀರಶೈವಾಚಾರ್ಯದಿನಮಣಿ
ವೀರ ರೇಣುಕ ಕುಲ್ಯಪಾಕದೊಳುದಯಿಸಿದನವನು
ಮಾರಹರನಾಲಯಗೊಳುಸಲೆ
ವೀರಶೈವ ಕ್ಷೇತ್ರ ನಿವಹದಿ
ಸಾರವು ಶ್ರೀಶೈಲವದು ಪ್ರಖ್ಯಾತವಾಗಿಹುದು || ೩ ||

ಕೊನಲು ಪಾಕ ಕ್ಷೇತ್ರ ಸನಿಹದ–
ಲಿ ನಲಗೊಂಡದ ಚಿದರೆ ಮಠದಲಿ
ಮಿನುಗುವ ಶ್ರೀ ನಾಗಭೂಷಣ ಶಾಮಲಾಂಬೆಯರ
ತನುಭವ ಶ್ರೀ ವೀರಭದ್ರನು
ಜನನಿಜನಕರುಚಿಕ್ಕವಯದಲಿ
ತನುವನಳಿಯಲ್ ಶಿಕ್ಷಕನು ತಾನಾಗಿ ಶ್ರಮಿಸಿಹನು || ೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೈದರಾಬಾದದಲಿ ಕೆಲ ದಿವ-
ಸೋದಿ ಸಂಸ್ಕೃತ ವುರ್ದು ಭಾಷೆಯ
ಸಾಧಿಸಲು ಹೆಚ್ಚಾಗಿ ನೀರಡಗುಂಭದಲ್ಲಿರ್ದು
ಓದಿದನು ಸಕ್ಕದವ ಕನ್ನಡ
ವಿದ್ವು ನಾರಾಯಣನ ಪೇಟೆಯು-
ಲೋದಿದಂ ಪಾಂಡಿತ್ಯ ಸಂಪಾದಿಸಿದ ನಳ್ತಿಯಲಿ ॥ ೫ ॥

ವೀರಶೈವರ ಸಭೆಯು ಇಟಗಿಯ
ವೂರೊಳಗೆ ನಡೆದಿರಲು ಪ್ರಥಮದಿ
ವೀರಭದ್ರನು ಅಲ್ಲಿ ಭಾಷಣ ಮಾಡಿದಂ ಕೇಳಿ
ವೀರಶೈವರ ಪ್ರಮುಖರೆಲ್ಲರು
ಭಾರಿ ಹರ್ಷೋದ್ಗಾರ ಗೈದರು
ಭೂರಿ ಯೂದಧ್ಯಯನ ಮಾಡಲ್ ಪ್ರೇರಿಸಿದರವನ ॥ ೬ ॥

ದೇಶಮುಖರಾಬಾಪುರಾವರ-
ದಾಶ್ರಯವು ದೊರೆಯಲ್ಕೆಯಾತನು
ಕಾಶಿಗೋದಲು ಬಂದು ಜಂಗಮವಾಡಿಯಲ್ಲಿರ್ದು
ವರ್ಷ ಮೂರ್‌ವರೆಗೋದಿ ವೇದವ
ಪಾಸು ಆದನು ವೇದ ತೀರ್ಥದ
ಭೂಷಣಾಸ್ಪದವಾದ ಪದವಿಯ ಪಡೆದುದಲ್ಲದಲೆ ॥ ೭ ॥

ಕಾವ್ಯ ಮೇಣ್ ಸ್ಮೃತಿ ದರ್ಶನಂಗಳ
ಕಾವು ತಪ್ಪಿಸದೋದಿ ತೀರ್ಥ ಪ್ರ-
ಭಾವಯುತ ಪದವೀಪ್ರತಿಷ್ಠಿತನಾದನವನಂದು
ದಿವ್ಯ ಧರ್ಮಾಚಾರ್ಯ ಮತ್ತಂ
ಸೇವ್ಯ ಸಾಹಿತ್ಯದ ವಿಶಾರದ
ನವ್ಯವಾದ ಪರೀಕ್ಷೆಗಳಲುತ್ತೀರ್ಣನಾಗಿರ್ದಂ ॥ ೮ ॥

ವಿದ್ಯೆಯುಳ್ಳ ಮಹಾಜನಂಗಳು
ವಿದ್ಯೆಯಾಮನೆ ಕಾಶಿಯಲಿ ತಾ-
ವಿದ್ದು ವಿದ್ಯಾರತ್ನ ಪದವಿಯನಿತ್ತು ಸತ್ಕರಿಸಲ್
ವಿದ್ಯೆಯಾನಿಧಿಯೆಂದು ಕಾಶಿ ಜ-
ಗದ್ಗುರುಗಳಿತ್ತರ್ ಪ್ರಶಸ್ತಿಯ-
ನಾದರುಂ ಗರ್ವಿಸದೆ ಸದುವಿನಯವನು ತಾಳಿರ್ದಂ ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಕ್ಕದವು ಕನ್ನಡವು ಹಿಂದಿಯು
ಪ್ರಾಕೃತವು ಮೇಣ್ ಪಾಲಿ ತೆಲುಗಿನ–
ನೇಕ ಭಾಷೆಗಳಲ್ಲಿಯುಂ ಪರಿಣತನು ತಾನಾದಂ
ತಕ್ಕಮಟ್ಟಿಗೆ ತಮಿಳು ಇಂಗ್ಲೀಷ್
ತಕ್ಕ ಮಟ್ಟಿಗೆಯುರ್ದು ಬಂಗಾಲ್
ತಕ್ಕ ಮಟ್ಟಿಗೆಯಾದರುಂ ಜ್ಞಾನವನು ಗಳಿಸಿರ್ದಂ ॥ ೧೦ ॥

ಹಳೆಯಲಿಪಿಗಳನೋದುತಿರ್ದನು
ಹಳೆಯಲಿಪಿಗಳನೋದಿ ಲೇಖನ
ಗಳನು ಪತ್ರಿಕೆಗಳಲಿ ಬರೆಯುತ್ತಿರ್ದನಾ ಪ್ರಾಜ್ಞಂ.
ಕೆಲವು ಇತಿಹಾಸಜ್ಞರೀತನ
ನಿಲವಬಂಣಿಸುತ್ತಿಹರಿವನೀ
ಕಲಿಯಕಾಲದ ಪರಿಚಯಾತ್ಮಕ ಪುಸಕ್ತಂ ನೂತ್ನಂ ॥ ೧೧ ॥

ಚಿದರೆ ಮತದವರಿವರು ಎಂದಿಗು
ಚದುರಲಾರರು ಧರ್ಮಪಂಥದಿ
ಬೆದರಲಾರರು ಎಂಬುದನು ತಾ ಸಿದ್ಧಗೊಳಿಸಿಹನು
ಬುಧರು ಕಾಶಿಯೊಳೊಂದುಗೂಡಲು
ಪದೆದು ಸಂಘವ ವೀರಶೈವರ
ಮೊದಲು ಮಾಡಿದನವರೊಳುಂ ಚೈತನ್ಯ ತುಂಬಲಿಕೆ ॥ ೧೨ ॥

ಬಾರಸಿಯ ಷೋಡಷ ಪುರಶ್ರೀ
ವೀರಶೈವರ ಸಭೆಗಳಲಿ ಕರೆ
ಮೇರೆಗಲ್ಲಿಗೆ ಪೋಗಿ ಪಂಡರಪುರವು ಮುಂತಾದ
ಊರುಗಳಲಿಯು ಸತ್ವಭಾವವ
ಬೀರುವುಪದೇಶವನು ನೀಡುತ
ವೀರಭದ್ರ ಬುಧಂ ವಿರಾಜಿಸಿದಂ ಸಮಾಜದಲಿ ॥ ೧೩ ॥

ಒಂದುವೊಂಭತ್ಮೂರುಳಆರರ
ಸಂದಕ್ರಿಸ್ತೀಶಕದಿ ತಾನು ಸಿ–
ಕಂದರಾಬಾದದಲಿ ಗುರುಕುಲ ಕಟ್ಟಿ ಪಾಠವನು
ಬಂದ ಛಾತ್ರಕುಲಕ್ಕೆ ಪೇಳುತ–
ಲಿಂದುಧರ ತತ್ತ್ವಪ್ರದೀಪವ–
ನಂದು ಪ್ರಜ್ವಲಗೊಳಿಸಿದಂ ಕರ್ತವ್ಯ ದಕ್ಷತೆಯಿಂ ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೆನಗು ಸುಡಿಂಪು ವಿಭೂತಿ ಪತ್ರಿಕೆ
ಯನುಕರಂ ಸಂಪಾದಿಸುತ ತಾ
ಪುನೆ ಮನೆಗೆ ತಲ್ಪುವವೋಲು ಮಾಡಿ ಯಶಸ್ವಿಯಾಗಿಹನು
ಅನುದಿನಂ ಜ್ಞಾನ ಪ್ರಸಾರವ–
ನನುನಯದಿ ಗೈಯುತ್ತ ದೇಶದಿ
ವಿನಯದಿಂ ವಿದ್ಯೆಯು ಸುಶೋಭಿಸುವಂತೆ ವರ್ತಿಸಿದಂ || ೧೫ ||

ನಿಲಯದಲಿ ಪುಸ್ತಕಗಳಿರದಿರೆ
ಜಲಜವಿಲ್ಲದ ಸರಸಿಯಂತದು
ನೆಲದಿ ಬದುಕಲು ಕಲಿಸುತಿಪೆಯವು ನಮ್ಮ ಸಂಗಾತಿ
ನಿಲಯದಲಿ ಹಣ ಚಿನ್ನ ರನ್ನಂ–
ಗಳು ವಿಚಾರಿಸಲಿಲ್ಲವಾದರು
ಕೆಲವು ಸದ್ಗ್ರಂಥಗಳ ಸಂಪಾದಿಸುವದೆಂದನವಂ || ೧೬ ||

ಬಗೆ ಬಗೆಯ ಭಾಷೆಯಲಿ ಬರೆದಿಹ
ಬಗೆ ಬಗೆಯ ಪುಸ್ತಕಗಳಂ ತಾ
ಬಗೆಗೊಳುವಬಗೆಯಲ್ಲಿ ಸಂಗ್ರಹಿಸುತ್ತಲಿರಿಸಿಹನು
ಸೊಗಸು ನೋಡಲಿಕೋದಲುಂ ಸಹ
ಮಿಗಿಲು ಸರಸತಿ ಯೈಸಿರಿಯು ದಲ್
ಜಗದೊಳೆಂಬುದು ಪುಸ್ತಕಾಲಯ ನೋಡೆ ದೃಢವಕ್ಕುಂ || ೧೭ ||

ಕವಿತೆ ವಿರಚಿಸುವಲ್ಲಿ ಶಾಸ್ತ್ರಿಗೆ
ಲವಲವಿಕೆ ಮೊದಲಿಂದಲಿರ್ದುದು
ಶಿವನ ಕರುಣಾ ಪಾತ್ರನಿಗೆ ಯದುಸಿದ್ಧಿಸುವದಲ್ತೆ
ವಿವಿಧ ಸಮಯಸ್ಫೂರ್ತಿಯಿಂದಂ
ಕವನವದು ಹೊರ ಹೊಮ್ಮುತಿರುವುದು
ಕವಿತೆ ಬದುಕಿನ ಕೈಯಗನ್ನಡಿಯೆಂಬರನುಭವಿಗಳ್ || ೧೮ ||

ಬರಬರುತ ಹಲವಾರು ಭಾಷೆಯೊ–
ಳಿರದೆ ಕವನವಗೈವ ಶಕ್ತಿಯು
ಕರತಲಾಮಲಕಾದುದೈ ಶಾಸ್ತ್ರೀಜಿ ಶ್ರಮಿಸಲಿಕೆ
ತರತರದ ಛಂದಸ್ಸಿನೊಳು ರಚಿ–
ಸಿರುವ ಕವಿತೆಗಳುಂಟು ತತ್ಕ್ಷಣ
ಪೊರೆದ ಕವನಗಳುಂಟು ಪ್ರಕಟನವಾಗಬೇಕಿಹುದು || ೧೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯುವ ವಿವೇಚಿಸುವ ಶೈಲಿಯು
ವಿಷಯ ವೈವಿಧ್ಯವು ನಿರಂತರ
ರಸಿಕರಾಕರ್ಷಿಸುವ ವಾಣಿಯು ಹಾಸ್ಯ ಮಾಧುರ್ಯಂ
ಅಸಮ ಪಾಂಡಿತ್ಯದ ಪ್ರಕಾಶನ
ಮಿಸುಪ ಮೊಗದಾವರೆಯ ಕಾಂತಿಯು
ವಸುಧೆಯೊಳು ಶಾಸ್ತ್ರೀಜಿಯನ್ನಸಮಾನನೆನಿಸಿಹವು ॥ ೨೦ ॥

ಹೈದರಾಬಾದದ ನಭೋವಾಯು
ವಾದ ವಾಣಿಯ ಭಾಷಣವು ಮೇ-
ಣಾದ ಮೈಸೂರಿನ ನಭೋ ವಾಣಿಯಲಿ ಭಾಷಣವು
ಆದರವ ತಂದಿಹುದು ಮತ್ತಂ
ಮೋದಗೊಂಡಿತಿಹಾಸ ವೇತ್ತರು
ಸಾದರದಲಭಿನಂದಿಸಿಸರ್ರೈ ಶಾಸ್ತ್ರಿಕೇಸರಿಯ ॥ ೨೧ ॥

ಈತನದ್ಭುತವಾದ ಪ್ರತಿಭೆಗೆ
ಸೋತು ಮನವನು ಗುರು ವರಿಷ್ಠನು
ಹಾತೊರೆದು ಬರೆದಿರಿಸಿದಂ ತಾ ಮೃತ್ಯುಪತ್ರವನು
ವರ್ತಮಾನವನಿದನು ತಾ ಕೇ-
ಳುತ್ತ ಜನ ಸಂತೃಪ್ತವಾದುದು
ಮತ್ತೆ ಲಿಂಗಿ ಸಮಾಜದೊಳು ಚೇತನವು ಚಿಮ್ಮಿದುದು ॥ ೨೨ ॥

ಬೇರೆ ಬೇರೆಯ ನಾಡಿನಿಂದಲಿ
ದೂರ ದೂರದ ನೆಲೆಗಳಿಂದಲಿ
ಸೇರಹತ್ತಿತು ಜನರಸಂದಣಿ ಕಾಶಿಕಾಪುರದಿ
ವೀರಶೈವರು ಬಹಳವಾಗಿಯೆ
ಸಾರಿ ಬಂದರು ಭಕ್ತಿಭರದಲಿ
ವೀರ ಪೀಠಾಧಿಪ ಶಿವಾನಂದಾರ್ಯನೈತಂದಂ ॥ ೨೩ ॥

ಬಂದ ಜನಕಾವಾಸವಾಯಿತು
ನಿಂದ ಜನಕಾಶ್ರಯವು ದೊರಕಿತು
ಮಿಂದು ಭೋಜನಕೆಂದು ಬಂದವರಿಗಿತ್ತು ಸುಗ್ರಾಸಂ
ಅಂದವಾಯಿತು ಮಠವು ತಳಿರುಗ-
ಳಿಂದ ತೋರಣದಿಂದ ಸಾರಣೆ-
ಯಿಂದ ಸುಂದರಿಯಂತೆ ಸಿಂಗರಗೊಂಡು ನಿಂದಿಹುದು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದುವೊಂಭತ್ ನಾಲ್ಕು ನಾಲ್ಕನೆ
ಸಂದ ಕ್ರಿಸ್ತೀಶಕದಿ ಬುಧದಿನ–
ದಂದು ವಿಜಯದ ದಶಮಿ ಮಧ್ಯಾಹ್ನದ ಮುಹೂರ್ತದೊಳು
ಅಂದ ವಿಧಿಯ ವಿಧಾನದಿ ಶಿವಾ–
ನಂದ ರಾಜೇಂದ್ರನು ಬುಧನಿಗಾ–
ನಂದದಿಂದ ಜ್ಞಾನಪೀಠದ ಪಟ್ಟಕಟ್ಟಿದನು || ೨೫ ||

ಸಲಿಸಲಕ್ಷತವನು ಶಿವಾರ್ಯರು
ಬೆಳಗಿದರುಭಾಮಿನಿಯರಾರತಿ
ಕುಳಿತಜನ ಪೂಮಳೆಯಕರೆಯಿತು ಹರ್ಷಭಾಷ್ಪದಲಿ
ಬಳಿರೆ ಗುರುದೇವೆಂದು ವಂದಿಗ–
ಳುಲಿದು ಉದ್ಘೋಷಣೆಯಗೈದರು
ಒಲಿದ ಭಕ್ತಿಯಲಿರಿಸಿತ್ತೈ ಕಾಣಿಕೆಯ ಭಕ್ತಾಳಿ || ೨೬ ||

ವಿಜಯದಶಮಿಯು ಪರ್ವವಿರ್ಪುದು
ವಿಜಯವನು ಸಾಧಿಸಲು ಬೇಕಿಲೆ
ಗಜಿಬಿಜಿಯ ಸಂಸಾರದಿ ಮನೋವಿಜಯವೇ ಮೇಲು
ವಿಜಯೆ ದೈತ್ಯರ ಕೊಲ್ಲುತೀದಿನ
ವಿಜಯಿಯಾಗಿಹಳಾದ ಕಾರಣ
ನಿಜದ ಜೀವನದಲ್ಲಿ ಗೆಲುವುದಕೆ ಮುಖ್ಯವಾಗಿಹುದು || ೨೭ ||

ಜೀವನದಿ ಸಂಕುಚಿತದೆಲ್ಲೆಯು
ನಾವು ಮೀರಲುಬೇಕು ಅಂದರೆ
ಜೀವಭಾವವ ತೊರೆದು. ದೇವಾನುಭವ ಪೊಂದುವದು
ಜೀವನಾದವಗೆಲ್ಲೆಯಿರ್ಪುದು
ದೇವನಾದವ ಗೆಲ್ಲೆಯಿಲ್ಲವು
ನೀವು ಸೀಮೋಲ್ಲಂಘನವನಾಚರಿಪುದೀತೆರದಿ || ೨೮ ||

ನೂತನದ ಗುರುವರನು ಧರ್ಮವ
ಘಾತಿಸುವ ಶಕ್ತಿಗಳ ಗೆಲ್ಲುತ–
ಲಾತ್ಮ ಬಲವಂ ಪ್ರದರ್ಶಿಸಲಿ ಪೀಠವು ಪುರಾತನವು
ಖ್ಯಾತಿಯಿಂ ಬೆಳಗುತ್ತ ಬಂದಿದೆ
ನೀತಿ ನಿಯಮವನೆತ್ತಿ ಹಿಡಿದಿದೆ
ಜ್ಯೋತಿ ಬೆಳಗಲಿ ಧರ್ಮದೆಂದನು ಕದಳಿಪುರಪ್ರಭುವು || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಸನಾತನತ್ತ್ವದ
ವೀರಶೈವಾಚಾರ್ಯ ಪೀಠದ
ವೀರಶೈವಾಗಮದ ತತ್ತ್ವದ ಮಹತಿಯನು ಕುರಿತು
ಸಾರವಿದ್ವತ್ಪೂರ್ಣವಾಗಿಯ-
ಪಾರದನುಭವದಿಂದೆ ನವಗುರು
ಸಾರಿದನು ಕರ್ತವ್ಯಪರರಾಗಲು ನಿರೂಪಿಸಿದಂ ॥ ೩೦ ॥

ಈರ್ವರುಪದೇಶವನು ಕೇಳುತ
ನಾವು ಧನ್ಯರು ಎಂದು ಭಕ್ತರು
ಸೇವಿಸಿದರಾಬಳಿಕ ಗುರುದೇವ ಪ್ರಸಾದವನು
ತಾವು ಶುಭದಾಶಿಷವ ಪಡೆಯುತ
ಠಾವುಗಳಿಗಂ ಪೋದರಾಗಳ್
ದೇವ ವಿಶ್ವಾರಾಧ್ಯನಿಗೆ ಜಯವಾಗಲೆನ್ನುತಲಿ ॥ ೩೧ ॥

ಆದರದಲೀ ಗುರುಚರಿತ್ರವ
ನೋದುವುಸುರುವ ಕೇಳ್ವಸುಜನರಿ-
ಗಾದ ಯಾನಿಧಿಯಾದ ವಿಶ್ವಾರಾಧ್ಯಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂ ಬಿಡದೆ ॥ ೩೨ ॥

ಮರಬಜಡೆಮಠದೊಡೆಯನಾದರು
ಸಿರಿ ಗುಡೂರಕೆ ಬಂದು ನೆಲೆಸುತೆ
ಹರಮಠವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪುರ-
ದಿರುತ ಯೋಗಾನಂದ ಕುಂದಿಲ-
ನೊರೆದನೀ ಕೃತಿಯನು ಜಗದ್ಗುರು ಸತ್‌ಪರಂಪರೆಯ ॥ ೩೩ ॥

ಇಂತು ಸಪ್ತಮಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ಷಟ್‌ಸ್ಥಲ ಬ್ರಹ್ಮಣೇ ನಮಃ

ಅಷ್ಟಮಾಧ್ಯಾಯ

ಭಾ. ಷ.

ಸೂಚನಾ– ಶರಣಗಣ ತಾನೆಲ್ಲ ಕಡೆಯಿಂ
ಬರುತಜಂಗಮವಾಡಿ ಮಠದಲಿ
ಗುರುಮುಖದಿ ಕೇಳಿಹುದು ಷಟ್‌ಸ್ಥಲಗಳ ರಹಸ್ಯವನು ||

ಪರಮ ಕರುಣಾಕರನೆ ಗಿರಿಶನೆ
ಗುರುವೆನಿಸಿ ಶಿವದೀಕ್ಷೆಯೀಯುತೆ
ಪರಮನುವನುಪದೇಶಿಸುತ ಮೇಣ್ ಲಿಂಗರೂಪದಲಿ
ಇರುತ ಪೂಜಿಸಿಕೊಂಡು ಮತ್ತಂ
ಚರನ ರೂಪದಿ ಚರಿಸಿ ಭಜಕರ
ಪೊರೆವನಿನ್ನೀ ಮೂರು ಮೂರ್ತಿಯ ಭಜಿಪೆನನವರತ || ೧ ||

ಪದ್ಧತಿಯನನುಸರಿಸಿ ಸಂಸ್ಕೃತ
ವಿದ್ಯೆಯಲಿ ಪಾರುಂಗತಾಗಿಹ
ಬುದ್ಧಿವಂತರು ಪಂಡಿತರು ಸನ್ಮಾನಗೊಂಡಿಹರು
ಅದ್ಯತನದಾಚಾರ್ಯವರ್ಯನ
ಪಾದಕಮಲಂಗಳಿಗೆ ವಿಬುಧರು
ಶುದ್ಧ ಮನದಿಂದರ್ಪಿಸಿಹರಭಿನಂದನಾ ಪತ್ರ || ೨ ||

ಸುರುಚಿರಾಸ್ಥಾನದ ನಿಕೇತನ
ದಿರುತ ಕುತುಹಲಿಯಾದ ಭಕ್ತರು
ಗುರುವರನೆ ಷಟ್‌ಸ್ಥಲಗಳರಿವನ್ನುಂಟು ಮಾಡೆನಲು
ಸರಳವಾಗಿ ಮನಕ್ಕೆ ಮುಟ್ಟುವ
ತೆರ ಮುಮುಕ್ಷುಗಳಾಗಿ ಬಂದರಿ–
ಗೊರೆದ ಗುರು ಷಟ್‌ಸ್ಥಲದ ಪರಿಯನ್ನಿಂತು ಸಂತಸದಿ || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂತಳದೊಳಾಸ್ತಿಕ ಮತಗಳೊಳು
ನೀತಿತತ್ತ್ವ ಸುಧರ್ಮ ವಿಷಯೋ–
ಪೇತ ಭಾಗತ್ರಯ ಮದಿರ್ಪುದು ವೀರಶೈವದಲಿ
ನೀತಿಮಯದಾಚಾರ ವೈದಿಕಂ
ಖ್ಯಾತ ತಾತ್ವಿಕ ಷಟ್‌ಸ್ಥಲಂಗಳು
ಪೂತ ಧಾರ್ಮಿಕ ಭಾಗದಷ್ಟಾವರಣಗಳುಮಿಹವು || ೪ ||

ಪರಿಕಿಪೊಡೆ ಲಿಂಗಾಂಗಿಗಷ್ಟಾ–
ವರಣ ವಂಗವು ಪಂಚ ವಿಧದಾ–
ಚರಣವೇ ಪ್ರಾಣವದು ಷಟ್‌ಸ್ಥಲವಾತ್ಮನೆನಿಸಿರ್ಕುಂ
ನಿರುತಮಾತ್ಮನು ದೇಹದಲಿ ನೆಲ–
ಸಿರುತ ಜೀವನ ಕೃತ್ಯವಾಗಿಸು
ತಿರುವುದಕ್ಕಾ ಪ್ರಾಣವೇ ಪ್ರಾಧಾನ್ಯವಾದುದರಿಂ || ೫ ||

ವೀರಶೈವನು ಮೊದಲು ಪಂಚಾ–
ಚಾರ ಪರನಾಗಿರ್ದೊಡವನೊಳು–
ದಾರತರ ನೈತಿಕ ಸುಜೀವನ ಮುದಯಿಸುತೆ ಮುಂದೆ
ಭೂರಿ ಸುಖಶಾಂತಿಗಳು ದೊರೆವವು
ಸಾರ ಷಟ್‌ಸ್ಥಲ ತತ್ತ್ವಪಥದೊಳ–
ನಾರತಂ ಗಮಿಸುತಿರೆ ತಾನಷ್ಟಾವರಣದೊಡನೆ || ೬ ||

ಲಿಂಗದಮಳೋಪಾಸನದೆ ತ–
ಲ್ಲಿಂಗ ಗುಣಗಳ ಪಡೆದುಕೊಳ್ವುದೆ
ಲಿಂಗಧಾರಿಯುಗ್ರವ ಲಿಂಗಾಚಾರವೆನಿಸುವದು
ಲಿಂಗಕಾಗಿಯೆ ದುಡಿದುದಂ ತ–
ಲ್ಲಿಂಗಕರ್ಪಿಸಿ ತತ್‌ಪ್ರಸಾದವ
ತಾಂಗಳಿಪ ಕಜ್ಜವೆ ಸದಾಚಾರಮದೆನಿಸುವದು || ೭ ||

ಶಿವಮಯುವು ಜಗವೆಲ್ಲವೆಂಬನು–
ಭವವನೊದಗಿಸುತಿರ್ಪ ಸತ್ಕೃ–
ತ್ಯವೆ ಶಿವಾಚಾರವುದೆನಿಪುದು ಶಿವಸುಧರ್ಮಕ್ಕೆ
ಭುವಿಯಲ್ಲೈತಂದೆಡರ ಪರಿಹರಿ–
ಸುವ ಧೃತಿಯು ಸದ್ವರ್ತನವೆ ತಾಂ
ಶಿವನೊಲುಮೆಯನು ನಾಡೆ ಸಂಪಾದಿಪ ಗಣಾಚಾರಂ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರಹರ ಭಕ್ತಂಗೆ ಗೈವುಪ–
ಚಾರದಲಿ ಕಿರಿತನವು ಭೃತ್ಯಾ–
ಚಾರವಿದರಿಂ ಲಭಿಸುವವು ಸಮತಾದಿಸುಗುಣಗಳು ॥
ವೀರಶೈವದಲಿಂತಿ ವೈದಾ–
ಚಾರವಲಿ ನೈತಿಕ ಬಲವು ಮೈ–
ದೋರಿಯಷ್ಟಾವರಣ ಕೃತ್ಯವ ಸಫಲಗೊಳಿಸುವದು ॥ ೯ ॥

ಲಿಂಗಮಂ ಕರುಣಿಸಿದ ಗುರುವುಂ
ಲಿಂಗಮುಂ ತಲ್ಲಿಂಗಚೇತನ
ಜಂಗಮಂ ಸಮುಪಾಶ್ಯರೆಮಗೀ ಮೂರು ಮೂರ್ತಿಗಳು
ಲಿಂಗವಂತರುದಿನದಿನದೊಳಂ
ಹಿಂಗದೆಸಗುಪಾಸನೆಗೆ ಕರ–
ಣಂಗಳೆನಿಸುವವಾ ವಿಭೂತಿ ಶಿವಾಕ್ಷಿ ಮಂತ್ರಗಳು ॥ ೧೦ ॥

ನಿರುತಮೆಸಗುತ್ತಿರುವುಪಾಸನೆ–
ಗಿರುವ ಫಲಗಳೆ ಮೂರು ಮೂರ್ತಿಗ–
ಳುರು ತರದ ತೀರ್ಥಪ್ರಸಾದಗಳೆಂದರಿಯ ವೇಳ್ಕುಂ
ಹರನು ನಮ್ಮುದ್ಧಾರಕೋಸುಗ
ಧರಿಸಿ ಮೂರ್ತಿತ್ರಯದ ರೂಪವ
ಕರುಣದಿಂದ ಮುಪಾಶ್ಯನೆನಿಸಿದನೆಂದು ನಂಬುವದು ॥ ೧೧ ॥

ಹರನ ಮೈವೆಳಗೆನಿಪ ಭಸಿತವ
ಧರಿಸಿ ತಳೆದು ಶಿವಾಕ್ಷಿಗಳ ಮೇಣ್
ಪರಶಿವನ ನಾಮುದ ಸುಮಂತ್ರದ ಜಪವ ಕೈಗೊಂಡು
ಪರಮಗುರು ಶಿವಲಿಂಗ ಜಂಗಮ
ವರರ ಪೂಜಾದಿಗಳನೆಸಗುತ
ಹರುಷದಿಂ ಪಡೆಯುವದು ತತ್ತೀರ್ಥ ಪ್ರಸಾದಗಳ ॥ ೧೨ ॥

ಶಾಂತಚಿತ್ತದ ಲಾಲಿಸಿರಿ ಬಹಿ–
ರಂತರಸ್ಥಿತ ಮಾಗು ತಿಬ್ಬಗೆ
ಯಿಂತದಷ್ಟಾವರಣಗಳು ಕಂಗೊಳಿಪವವುಗಳೊಳು
ಸಂತತಂ ಬಹಿರಾವರಣಗಳ–
ನಾಂತು ತಾನಾಚರಿಸಲವುಗಳೆ–
ಯಂತರಷ್ಟಾವರಣ ರೂಪದೆ ಪರಿಣಮಿಸುತಿಹವು ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುವೆ ನಿಜದರಿವಾಗಿ ಲಿಂಗಮ-
ದರಿವಿನನುಭವವಾಗಿ ತಚ್ಚರ-
ವರನೆ ಪಡೆದನುಭವದಲೊಗೆದಾನಂದವಾಗುತ್ತ
ಸ್ಫುರಿಸೆ ನಮ್ಮೊಳಗೆಮ್ಮ ತೇಜವೆ
ವರಭಸಿತ ಮಕ್ಷಿಯೆ ಶಿವಾಕ್ಷಿಯು
ಪರಮ ತನುವಿದು ಮಂತ್ರಮಯವೆನಿಸಿರ್ಪುದಾ ಬಳಿಕ || ೧೪ ||

ತವೆ ನೆಲಸುವವು ನಮ್ಮೊಳಿನ್ನಾ
ಶಿವ ಕೃಪಾ ಮೃತವೆಂಬ ತೀರ್ಥವು
ಶಿವನನುಗ್ರಹರೂಪಮೆನಿಸಿದ ಸತ್‍ಪ್ರಸಾದವದು
ಇವುಗಳೊಳಗಿರ್ಪಾವರಣ ವಿ-
ನ್ನಿವುಗಳನು ಸಮಗೊದಗಿಸಲು ಸಂ-
ಭವಿಸಿದವು ಬಹಿರಾವರಣಗಳು ನೀವರಿಯಿರೀ ಬಗೆಯ || ೧೫ ||

ವೀರಶೈವ ಸಮಾಜ ಧರ್ಮದ
ಸಾರವಾದಷ್ಟಾವರಣ ಸುವಿ-
ಚಾರ ವಿದನರಿದಾಚರಿಸಿ ಷಟ್‍ಸ್ಥಲದ ಮಾರ್ಗದಲಿ
ಸಾರುತಿರೆ ಲಿಂಗಾಂಗ ಯೋಗದ
ಭೂರಿಸುಖವೊದಗುವದು ನಿಮಗೀ
ಸಾರತರದಷ್ಟಾವರಣವೇ ನಿಜವಂಗವಾಗಿರಲಿ || ೧೬ ||

ಈಗಳಾಂ ಷಟ್‍ಸ್ಥಲದ ತಾತ್ವಿಕ
ಭಾಗಗತಸಾರವನು ಪರಮಶಿ-
ವಾಗಮೋಕ್ತಿಯನನುಸರಿಸಿ ಪೇಳುವೆನದಂತೆನಲು
ಆಗಿರೀಶಂ ಸಕಲ ಲೋಕಗ-
ಳಾಗು ಹೋಗುಗಳಾಶ್ರಯಸ್ಥಲ
ವಾಗಿರುವ ಕತದಿಂ ಸ್ಥಲಾಭಿದನಾಗಿ ತೊಳಗುವನು || ೧೭ ||

ಸುವಿಮಳರೆ ಮತ್ತಾಸ್ಥಲಾಖ್ಯದ
ಶಿವನೆ ತಾಂ ಲಿಂಗಾಂಗವೆಂಬುವ
ದ್ವಿವಿಧ ರೂಪವ ಧರಿಸಿದಂ ಸ್ವವಿಮರ್ಶ ಶಕ್ತಿಯೊಳು
ಶಿವನು ಭಕ್ತೋದ್ಧಾರಕೀ ಭೇ-
ದವನು ಧರಿಸಿದನೆಂದೊರೆವರನು-
ಭವಿಗಳಾತನ ಪೂಜ್ಯಪೂಜಕ ಭಾವಲೀಲೆಯದು || ೧೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನು ಲೀಲೆಯುಲಿಂತೆರಡು ರೂ-
ಪವ ಧರಿಸೆ ಶಿವಶಕ್ತಿಯುಂ ತಾ
ದ್ವಿವಿಧವಾದುದು ಶಕ್ತಿಭಕ್ತಿಯು ನಾಮುಗಳ ತಳೆದು
ಸುವಿಮಳದ ಲಿಂಗಾಂಗಗಳು ಮೇಣ್
ತ್ರಿವಿಧತೆಯುಮಂ ಷಡ್ವಿಧತೆ ಯಾಂ-
ತವು ನಿಯಮದಿಂ ಪೂಜ್ಯ ಪೂಜಕಭಾವವಮಂ ಪೊಂದಿ ॥ ೧೯ ॥

ಅಂಗನೆನೆ ಶಿವದೀಕ್ಷೆಯಿಂ ಶು-
ದ್ಧಾಂಗನೆನಿಸಿದ ಜೀವನಾತನು
ಲಿಂಗವನು ಮೂರೊಡಲೊಳಿಂದ್ರಿಯ ಮಾನಸಂಗಳೊಳು
ಸಾಂಗ ವಿಧಿಯಿಂ ಪೂಜಿಸುತೆ ತ-
ಲ್ಲಿಂಗಮಯವಾಗುವುದನೆಳಸಲು
ಲಿಂಗಮುಂ ಮೂರಾಗಿ ಮೇಣಾರಾಗಿ ಬೆಳಗುವದು ॥ ೨೦ ॥

ಅಂಗನಮಳಿನ ದೃಙ್ಮನೋಭಾ-
ವಂಗಳಿಂ ತಾಗ್ರಹಿಸುವದಕಾ
ಲಿಂಗಮಿಷ್ಟ ಪ್ರಾಣ ಭಾವಸುನಾಮದಿಂ ಬೆಳಗೆ
ಅಂಗನುಂ ತ್ಯಾಗಾಂಗನುಂ ಭೋ-
ಗಾಂಗನುಂ ಯೋಗಾಂಗನೆನಿಸುತ
ಮಂಗಳದ ಮೂರೊಡಲೊಳಾ ಲಿಂಗಗಳ ತಳೆದಿಹನು ॥ ೨೧ ॥

ಪನಿವಿಡಿಯಲಾಚಾರ ಲಿಂಗವು
ಗುರುಸುನಾಮದೆ ಶಿವಸುನಾಮದೊ-
ಳಿರುವರಡು ಲಿಂಗಗಳು ಜಂಗಮಲಿಂಗವಾ ಬಳಿಕ
ನೆರೆ ಪ್ರಸಾದ ಮಹಾಸಮಾಖ್ಯೆಯೊ-
ಳಿರುವ ಲಿಂಗಗಳಿಂತುಟಾ ರಾ-
ಗಿರುವವಿನ್ನಾ ಮೊದಲ ಮೂರರೊಳೊಂದಕೆರಡಾಗಿ ॥ ೨೨ ॥

ಕಾಣಲಿಂತಿದ ತಾನು ಭಕ್ತಂ
ಮೇಣು ಮಾಹೇಶಂ ಪ್ರಸಾದಿಯು
ಪ್ರಾಣಲಿಂಗಿಯು ಶರಣನೈಕ್ಯನೆನಿಪ್ಪ ಪೆಸರಿನೊಳು
ಜ್ಞಾನಮಯವೈದಿಂದ್ರಿಯದ ಸು-
ಸ್ಥಾನದಲಿ ಹೃದಯಾಂತದೊಳಂ
ಸಾನುರಾಗದಲಂಗನಾ ಲಿಂಗಗಳಧರಿಸಿರ್ಪಂ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಣಿಸುವದಾರಾಗಿ ಲಿಂಗದ–
ನೂನ ಶಕ್ತಿಯು ತಾಂ ಕ್ರಿಯೆಯು ಮೇಣ್
ಜ್ಞಾನ ಪಿಚ್ಛೆಯು ಮಾದಿ ಪರಚಿತ್ತೆಂಬ ಪೆಸರಿನಲಿ
ಭೂನುತದ ತಚ್ಛಕ್ತಿ ಮತ್ತೆಯು
ತಾನೆ ಷಡ್ವಿಧ ದಮಳಿನಾಂಗ-
ಸ್ಥಾನದೊಳು ಸದ್ಭಕ್ತಿನಾಮುವನಾಂತು ಬೆಳಗುವದು ॥ ೨೪ ॥

ಕ್ರಮದೆ ಶ್ರದ್ಧೆಯು ನಿಷ್ಠೆಯವಧಾ-
ನಮದು ಮತ್ತನುಭವವಮದಾನಂ-
ದಮದು ಸಮರಸ ಮೆನಿಪ ಪೆಸರಿಂದಿರ್ಪ ಭಕ್ತಿಯದು
ವಿಮಳತರದ ಷಡಂಗಗಳನಾ–
ಕ್ರಮಿಸಿ ಲಿಂಗಾಂಗಗಳೊಳೈಕ್ಯವು
ಸಮನಿಸುವುದಕೆ ಕಾರಣವು ತಾನಾಗಿ ಬೆಳಗುವದು ॥ ೨೫ ॥

ಅಂಗ ಲಿಂಗಗಳಂತೆ ಷಡ್ಭೇ–
ದಂಗಳಾಗುತೆ ಭಕ್ತಿ ಶಕ್ತಿ ಗ-
ಳಂಗಲಿಂಗಗಳಲ್ಲಿ ಪರಿಪಿಡಿಯಿಂದಿರುವವಿಂತು
ಅಂಗ ಲಿಂಗಗಳಾಂತಿರುವ ಭೇ–
ದಂಗಳನೆ ಷಟ್‌ಸ್ಥಲಗಳೆಂಬರು
ಲಿಂಗ ತತ್ತ್ವವಿಶಾರದರು ತಿಳಿಯುವದು ನೀವಿದನು ॥ ೨೬ ॥

ವಿಳಸದಂಗವು ಲಿಂಗಮುಂ ನಿ–
ರ್ಮಳದ ಭಕ್ತಿಯು ಶಕ್ತಿ ಮುಖಮುಂ
ತಿಳಿಯೆ ಹಸ್ತವು ಮೇಣ್ ಪದಾರ್ಥವು ಸುಪ್ರಸಾದವದು
ನೆಲಸಿರುವವೆಂಟಿವುಗಳಾ ಷಟ್-
ಸ್ಥಲದೊಳೊಂದರೊಳಮಿದ ಗುರು–
ತಿಲಕನಾದೀಕ್ಷಿತನಿಗೈಸಲೆಬೋಧಿಸುವನೊಲವಿಂ ॥ ೨೭ ॥

ಸಾರತರದೀ ಷಟ್‌ಸ್ಥಲಗಳಾ-
ಚಾರಮಂ ದೃಢಪಡಿಸುವುದಕಿ
ನ್ನಾರು ಲಿಂಗಾಂಗಸ್ಥಲಗಳೊಳಭೇದಮಂ ಪಡೆದು
ನೂರು ಮೇಲೊಂದಾಗಿ ಮಹಿತ ವಿ-
ಚಾರದಿಂ ಕಂಗೊಳಿಸುವವುಗಳ
ಸಾರವರಿಯಲು ತೊಡಕನೀಯದು ತಾಂಸ್ಥಲಾಚರಣಂ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಯೆ ಮೊದಲೊಂದಾಗಿ ಬಳಿಕಿ-
ನ್ನೆರಡು ಮೂರಾರಾಗುತದರೊಳು
ಧರಿಸಿ ಮೇಣ್ ಪದಿನೆಂಟು ಮೂವತ್ತಾರು ಭೇದಗಳ
ಮೆರೆವನಾಸ್ಥಲ ವಾಚ್ಯ ಶಿವನೇ
ಪರಮಭಕ್ತೋದ್ಧಾರ ಕೆಂಬುದ-
ನರಿದುಕೊಳ್ಳುದು ಷಟ್‌ಸ್ಥಲದ ಸಿದ್ಧಾಂತ ಸಾರವನು || ೨೯ ||

ಧರೆಯು ಜಲಮುಂ ವಹ್ನಿ ವಾಯುವು
ಸುರಪಥಂ ಮೇಣಾತ್ಮವೆಂಬಿವು
ಪರಿವಿಡಿಯಲಾ ಭಕ್ತ ಮುಖ್ಯಸ್ಥಲಗಳಂಗಗಳು
ಮೆರೆವ ನಾಶಿಕೆ ಜಿಹ್ವೆನೇತ್ರಮು-
ದರಿವೊಡಿನ್ನಾತ್ವಕ್ಕು ಕರ್ಣವು
ವರ ಹೃದಯವೆಂಬಿವು ಮುಖಂಗಳು ಷಟ್‌ಸ್ಥಲಂಗಳಿಗೆ || ೩೦ ||

ಸಲೆ ಸುಚಿತ್ತವು ಮೇಣ್ ಸುಬುದ್ಧಿಯು
ಬಳಿಕ ನಿರಹುಂಕೃತಿಯು ಸುಮನವು
ತಿಳಿಯೆ ಸುಜ್ಞಾನವು ಸುಭಾವ ವಿವಾರು ಹಸ್ತಗಳು
ವಿಲಸಿತದ ಭಕ್ತಾದಿಯಾದ-
ಸ್ಥಲಗಳಿಗೆ ಪರಿವಿಡಿಯಳೊಂದುತ
ಬೆಳಗುವವು ತಾವರ್ಪಣದ ಕೃತಿಗಳಿಗೆ ನೆರವಾಗಿ || ೩೧ ||

ಹಲವು ಬಗೆಯಿಂ ತೋರುತಿರ್ದೊಡ
ಮಿಳೆಯ ಭೋಗ್ಯ ಸುವಸ್ತುಗಳ ಸಂ-
ಕುಲಮದನು ಷಟ್‌ಸ್ಥಲ ಸುತತ್ತ್ವ ವಿಶಾರದರು ತಾವು
ಸಲೆಸುಗಂಧವು ರಸವು ರೂಪವು
ಬಳಿಕ ಸಂಸ್ಪರ್ಶನವು ಶಬ್ದವು
ತಿಳಿಯೆ ತೃಪ್ತಿಯುಮೆಂದು ಷಡ್ವಿಧವಾಗಿ ಪೇಳುವರು || ೩೨ ||

ಆರು ತನುವೊಳ್ ನಿಂದು ತಳೆದಿ-
ರ್ಪಾರು ವಿಧ ಭಕ್ತಿಯೊಳು ತಾವಿ-
ನ್ನಾರು ಬಗೆಯ ಪದಾರ್ಥವನು ಷಟ್‌ಸ್ಥಲಗಳೊಳ್ ಕ್ರಮದೆ
ಆರು ಶಕ್ತಿಯನೊಂದಿ ಕಂಗೊಳಿ-
ಪಾರು ಲಿಂಗಕ್ಕಾರು ಮುಖದಿಂ-
ದಾರು ಹಸ್ತದೆ ಕೊಟ್ಟು ಕೊಂಬುದು ತತ್ ಪ್ರಸಾದವನು || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಷಟ್‌ಸ್ಥಲ ಮಾರ್ಗದಲಿ ಪೇ-
ಳ್ದಂತೆ ದಿನ ದಿನದಲ್ಲಿಯುಂ ಬಿಡ-
ದಂತೆ ಲಿಂಗ ಸುಭೋಗದುಪಭೋಗವನು ಪಡೆದಿರಲು
ಶಾಂತಿಮಯ ಶಿವಭಾವವೇ ತ-
ನ್ನಂತರಂಗದೆ ಮೂಡಿ ಬಲಿಯುತ
ಕಂತುಹರನೇ ತಾನೆನಿಸುವನು ಲಿಂಗವಂತನು ತಾಂ || ೩೪ ||

ಗುರುವು ದೀಕ್ಷಾ ಕಾಲವಲಿ ತನ
ಗೊರೆದ ತಿಳಿನಡೆಯಲ್ಲಿ ಭಕ್ತಿಯ
ನಿರಿಸಿ ಸತ್ಕಾಯಕದಿ ದುಡಿದುದನೆನ್ನದೆಂಬುದನು
ತೊರೆಯುತಿದ ಗುರುಲಿಂಗಜಂಗಮ-
ವರರಿಗರ್ಪಿಸಿ ತತ್ ಪ್ರಸಾದವ-
ನುರು ಮುದದೆ ಕೊಂಡಿರ್ಪುದೇ ಭಕ್ತಸ್ಥಲದ ಕುರುಹು || ೩೫ ||

ತಿಳಿ ನಡೆಯಲಾಸ್ತಿಕ್ಯ ಬುದ್ಧಿಯು
ಬೆಳಗೆ ಸತ್ಯ ದಯಾದಿ ಗುಣಗಳ
ತಳೆದು ಲಿಂಗಾರ್ಚನೆಯ ನಿತ್ಯ ವ್ರತದ ನಿಷ್ಠೆಯನು
ನೆಲೆಗೊಳಿಸುತುಂ ಪರರ ವಸ್ತುವ-
ನೆಳಸೆನೆಂಬಾ ಛಲದ ವೃತ್ತಿಗೆ
ನೆಲವನೆಯು ತಾನೆನಿಸಲದೆ ಮಾಹೇಶ ಲಕ್ಷಣವು || ೩೬ ||

ವಿಷಯ ಭೋಗವೆ ಹೇಯವೆಂದರಿ-
ದಸವು ಲಿಂಗಕ್ಕಿಂದ್ರಿಯಾಸ್ಯ ದೊ-
ಳೊಸೆದು ತಾಂ ಗಂಧಾದಿ ವಿಷಯಗಳನರ್ಪಿಸುತೆ ಬಳಿಕ
ಲಸಿತ ತಲ್ಲಿಂಗ ಪ್ರಸಾದಮ-
ನೆಸೆವ ತನ್ನವಧಾನ ಭಕ್ತಿಗೆ
ವಶನೆನಿಸಿ ಭೋಗಿಸುವ ಪರಿಯು ಪ್ರಸಾದಿ ಲಕ್ಷಣವು || ೩೭ ||

ಪ್ರಾಣ ಕರಣಾದಿಗಳೊಳನಿಶಂ
ನಾನು ನಿನ್ನದಿದೆಂಬ ಮೋಹವ
ತಾನುಳಿದು ಲಿಂಗಮಯಮಖಿಳವಿದೆನಿಸಿದನುಭವದಿ
ಪ್ರಾಣರೂಪದ ಲಿಂಗದಮಳ
ಧ್ಯಾನ ಪೂಜೆಯಲಿಟ್ಟ ನಿಶ್ಚಲ
ಮಾನಸದೊಳೊಪ್ಪುವುದೆ ಕುರುಹಾ ಪ್ರಾಣಲಿಂಗಿಯೊಳು || ೩೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ತನ್ನ ತನು ಕರುಣಾದಿಗಳೊಳು-
ತ್ಪನ್ನ ವಾಗಿರೆಲಿಂಗತೇಜವು-
ದಿನ್ನಖಿಳ ವಿಷಯಂ ಪ್ರಸಾದದ ರೂಪವಾಂತಿರಲು
ತನ್ನ ನಿಜಲಿಂಗ ಪ್ರಸಾದದೆ
ಜನ್ಯವಾದಾನಂದ ಭಕ್ತಿಯು
ಪುಣ್ಯ ಪದವಿಯಲಿರ್ಪುದೇ ಶರಣಸ್ಥಲದ ಕುರುಹೈ ॥ ೩೯ ॥

ನಾನು ನೀನೆಂತೆಂಬ ಭೇದ
ಜ್ಞಾನ ವಡಗಲಭೇದದಲಿ ಮೇಣ್
ತಾನೆ ಪರತರ ಲಿಂಗವೆಂಬ ಶಿವಾನುಭಾವದೊಳು
ತಾನಡಗಿ ಸಮರಸದ ಭಕ್ತಿಯು-
ನೂನ ದಾನಂದದಲಿ ಬೆರೆದ ವಿ-
ಧಾನವೇ ಕಡೆಯೆನಿಸಿದೈಕ್ಯಸ್ಥಲದಲಕ್ಷಣವು ॥ ೪೦ ॥

ಇಂತು ಷಟ್‌ಸ್ಥಲದಾಚರಣೆಗಳ-
ನಾಂತಿರುವ ಶ್ರೀ ವೀರಶೈವನು
ಸಂತತಂಗೈದ ಕ್ರಿಯೆಯು ಲಿಂಗಾರ್ಪಿತವದಾಗೆ
ಶಾಂತಿ ರೂಪದಲಾಕ್ರಿಯೆಯು ವಿ-
ಶ್ರಾಂತಿಯೊಂದು ವುದಾತ್ಮನೊಳಗಿ-
ನ್ನೆಂತುಮಂಟದು ತಾ ಶುಭಾಶುಭ ಫಲ ಮದಾಕೃತಿಗೆ ॥ ೪೧ ॥

ಇದು ಕ್ರಿಯಾ ವಿಶ್ರಾಂತಿ ಯೆನಿಸುವು-
ದಿದುವೆ ಸಮ್ಯಗ್‌ಜ್ಞಾನವೆನಿಸುವು-
ದಿದು ಶಿವನೆ ತಾನೆಂಬ ತಿಳಿನಡೆಯಾಗಿ ಬೆಳಗುವವು
ಇದನು ಪೊರ್ದಿದ ವೀರಶೈವನೊ-
ಳುದಿಸಿದ ಕ್ರಿಯೆಲಿಂಗ ಪೂಜೆಯು
ಪೊದಪಿನಿಂ ಭೋಗಿಸುವದೆಲ್ಲವು ಲಿಂಗಭೋಗಮದು ॥ ೪೨ ॥

ಭಕ್ತಿಯೇ ಷಟ್‌ಸ್ಥಲದ ಮೂಲವು
ಭಕ್ತಿಯೇ ತತ್‌ಫಲವು ನಮ್ಮೊಳು
ಭಕ್ತಿಯೊಂದಿರೆ ಕರದಬಿಲ್ವಂ ಷಟ್‌ಸ್ಥಲಾಚರಣಂ
ಭಕ್ತಿ ಬಿಡದಿರಿ ನಿಮ್ಮಯಾತ್ಮದ
ಶಕ್ತಿಯೇ ತದ್ಭಕ್ತಿಯಲ್ಲವೆ !
ಮುಕ್ತಿ ಕನ್ಯೆಯು ಪಡೆಯುಳೇನಾ ಭಕ್ತಿಜನನಿಯುತಾ ॥ ೪೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇಳಲಿಂ ತಾ ಸ್ವಾಮಿ ಗುರು ತಾ-
ವಾಲಿಸುತ ಲಿಂಗಾಂಗಿಜನಗಳು
ಶೂಲಿಧರ್ಮದ ಷಟ್‌ಸ್ಥಲಂಗಳ ಬಗೆಯ ತಾವರಿದು
ಫಾಲನಯನನ ನೆನೆದು ಮನದೊಳು
ತೇಲಿದರು ಸಂತಸದ ಕಡಲಲಿ
ಮೇಲು ದನಿಯಿಂ ಪಾಡಿದರು ಮಂಗಲವನಾವಾಗಳ್ ॥ ೪೪ ॥

ಆದರದಲೀ ಗುರು ಚರಿತ್ರವ
ನೋದುವುಸುರುವ ಕೇಳ್ವ ಸುಜನರಿ-
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂಬಿಡದೆ ॥ ೪೫ ॥

ಮುರಬ ಜಡೆಮಠದೊಡೆಯನಾದರು
ಸಿರಿಗುಡೂರಕೆ ಬಂದು ನೆಲಸುತೆ
ಹರಮುತವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂಭ್ರೂಲತೆಯ ನವಪುರ-
ದಿರುತ ಯೋಗಾನಂದ ತುಂದಿಲ-
ನೊರೆದನೀಕೃತಿಯನು ಜಗದ್ಗುರು ಸತ್ ಪರಂಪರೆಯ ॥ ೪೬ ॥

ಇಂತು ಅಷ್ಟಮಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನವಮಾಧ್ಯಾಯ

ಭಾ. ಷ.

ಸೂಚನಾ—ಕಾಶಿಪೀಠವನೇರಿ ಪೀಠಪ್ರ—
ಕಾಶಗೊಳಿಸಿದ ಶಾಂತಭಾವನ
ದೇಶಿಕೋತ್ತಮನಾದ ವಿಶ್ವೇಶ್ವರನಚರಿತೆಯಿದಃ ||

ಮಂಗಲವ ನಮಗೀವುದಭವ ತ—
ರಂಗಿಣೀಧರ ವೃಷಭರಾಜ ತು—
ರಂಗ ಕರುಣಾಪಾಂಗ ಗಿರಿಜಾಸಂಗ ನಟತುಂಗ
ಮಂಗಲಾಂಗ ನಿರಂಗ ಶಂಕರ
ಲಿಂಗರೂಪ ಮಹೇಶ ಹರಸಾ—
ರಂಗಕರ ವಿಶ್ವೇಶಲಿಂಗ ಮಹಾಗಣಾಧಿಪತೆ || ೧ ||

ಭರತಖಂಡದ ದಕ್ಷಿಣದ ದಿಶೆ—
ಗಿರುವ ಕನ್ನಡನಾಡು ಹಳೆಯದುಃ
ಕರಮೆಸೆದಃ ತೋರುವದು ಜನಜೀವನದ ನೆಲೆಯಾಗಿ
ತರುಲತೆಗಳಿಂ ಬಹುಖಗಮೃಗಗಳಿಂ
ಕರಿಗಳಿಂ ಖನಿಜಾದಿಯಿಂದಿಡಿ—
ಕಿರಿದ ಪರ್ವತ ಪಂಕ್ತಿಯಿಂ ಪುರದಿಂ ವಿರಾಜಿಸುಗುಂ || ೨ ||

ಪರಶುರಾಮನ ನಾಡು ಕನ್ನಡ
ಶರಧಿ ಹಾರಿದ ಹನುಮನಸ್ಥಲ
ಬರಲಿಕಾತಿಥ್ಯವನು ರಾಮಗೆ ಗೈದ ಶಬರಿನೆಲಂ
ಅರಿಯದಂತಡಗಿರ್ದು ಯಾರುಂ
ವರುಷ ಕಳೆದಾ ಪಾಂಡವರ ನೆಲೆ—
ಯುರುತರದ ಕರ್ನಾಟಕದ ಒಡಲೊಳಗೆಯಿರುತಿಹವು || ೩ ||

ತುಂಗೆಭದ್ರೆಯರಿಲ್ಲಿ ಪರಿವರು
ಗಂಗೆ ಸರಿ ಕಾವೇರಿಯಿರ್ಪಳು
ಲಿಂಗದಾಲಯುಗಳು ವಿಶೇಷವು ತಟದೊಳಲ್ಲಲ್ಲಿ
ಸಂಗಮಿಸಿ ಭೀಮಾದಿನದಿಗಳು
ಸಂಗಮ ಸ್ಥಲಗಳನು ನಿರ್ಮಿಸಿ
ಕಂಗಳಿಗೆ ಹಬ್ಬವನು ತಂದಿವೆ ನಾಡಿನಗಲದೊಳು || ೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕನ್ನಡದ ದೇಶವನು ಹಿರಿಯರು
ಕನ್ನಡಿಯ ಹಾಗೆಂದು ಪೇಳ್ವರು
ಕನ್ನಡಿಯು ಸುಜ್ಞಾನದಂದದಲಿಪ್ಪುದೆಂಬುವರು
ಉನ್ನತಾನೆಗಳಿಲ್ಲಿ ದೊರೆವವು
ಚಿನ್ನವೀಮಣ್ಣಿನಲಿ ಸಿಗುತಿಹು-
ದಿನ್ನು ಗಂಧದ ಮರಗಳಿಲ್ಲಿಯು ವಿಪುಲವಾಗಿಹವು ॥ ೫ ॥

ಎಲ್ಲ ಬೆಳಸುಗಳಿಲ್ಲಿ ಬೆಳೆಯುವ-
ವೆಲ್ಲ ಮತದಾಚಾರ್ಯ ಪೀಠಗ-
ಳಿಲ್ಲಿ ನೆಲಸಿಹವೆಲ್ಲ ತರದಾಹಾರವದುಲಭ್ಯಂ
ಎಲ್ಲರಿಲ್ಲಿಯೆ ಬಂದುನಿಲ್ಲುತ-
ಲೆಲ್ಲರೊಂದಿಗೆ ಹೊಂದಿಕೊಂಡಿಹ-
ರಿಲ್ಲಿ ಸರ್ವರುಸಹಕರಿಸುತುಂ ಬದುಕಿ ಬಾಳುವರು ॥ ೬ ॥

ಬಾಳುವುದಕಾಧಾರವೆನಿಸಿದ
ಕೂಲಿಯನು ತಾಂ ಸತ್ಯಶುದ್ಧ ವಿ-
ಶಾಲ ಭಾವನೆಯಿಂದೆಸಗಲದು ಧರ್ಮಕೃತಿಯಾಗಿ
ಪಾಲಿಸುವದಾತ್ಮರಸನು ದಿಟವೆಂ-
ದೀಲಸಿತ ಕಾಯಕವಿಡಿದು ಸಲೆ
ಬಾಳುತಿರುವರು ಲಿಂಗವಂತರು ಕನ್ನಡವನಾಡೊಳ್ ॥ ೭ ॥

ಭಾರತಾಂಬೆಯ ತನುಜೆ ಯೀಕೆಯು
ವೀರಭೂಮಿಯು ವೀರಜನನಿಯು
ಚಾರುತರ ಶಿಲ್ಪಕ್ಕೆ ತಾಯ್ ಮನೆಯಾಗಿ ರಂಜಿಪಳು
ವೀರಸೇನಾನಿಗಳು ರಾಯರು-
ದಾರಗುಣಶೀಲರು ಕವೀಶರು
ಭೂರಿ ಶರಣರು ದಾಸರಿವಳುದರದಲಿ ಪುಟ್ಟಿಪರು ॥ ೮ ॥

ಪಂಪರನ್ನಾದಿಗಳ ಕಾವ್ಯಗ-
ಳಿಂಪಿನುರು ಸಾಹಿತ್ಯ ಪುಷ್ಪವು
ಪೆಂಪನೊಂದಿದ ಶರಣರನುಭವ ವಚನ ಕಸ್ತೂರಿ
ಸೊಂಪಿನಾ ಕನಕಾದಿ ದಾಸರ
ಗುಂಪಿನೊಳ್ ಸಾಹಿತ್ಯಗಂಧವ-
ದಿಂಪಿನಿಂ ಕನ್ನಡದಕಂಪನು ಸೂಸುತಿಹವಲ್ತೆ ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾರ ವರ್ತನದಲ್ಲಿ ಭೃತ್ಯಾ–
ಚಾರವೇ ಸಮತಾದಿ ಸುಗುಣಾ–
ಧಾರವೆಂಬುವನರಿಯುತಾಚಾರ್ಯರುಸದಾ ಶರಣರ್
ವೀರಶೈವರಿಗಿರ್ಪಸದಲಂ–
ಕಾರವೇ ದಾಸೋಹವೆಂಬ ವಿ–
ಚಾರಮಂ ತಾವ್ ಬೆಳಗಿಸುವರೀ ಕನ್ನಡದ ನೆಲದೊಳ್ ॥ ೧೦ ॥

ಇರುವದೈ ಕರುನಾಡಿನೊಳು ತಾ
ನಿರುವದೈ ಧಾರ್ವಾಡ ಜಿಲ್ಲೆಯು
ಒರಿಯಕೇರೂರ್ ತಾಲುಕದರೊಳಗುಂಟು ಮಾಸೂರು
ಒರಿಯಮತ ಪರಮೇಶ್ವರಯ್ಯನು
ತರಳೆ ರುದ್ರಮ್ಮನು ಮಹಾಗುರು
ವರನ ಜನನೀಜನಕರಾಗಿಹರೈ ಶಿವೇಚ್ಛೆಯೊಳು ॥ ೧೧ ॥

ಸಿದ್ಧಲಿಂಗ ತಪಸ್ವಿಯೊಲು ಪೇಣ್
ಸಿದ್ಧಲಿಂಗ ಜಗದ್ಗುರುವಿನೊಲು
ಸಿದ್ಧ ಪುರುಷನಾಗಬೇಕೆಂಬಾಸೆಯಿಂದವರು
ಸಿದ್ಧಲಿಂಗೆಂಬುವ ಸುನಾಮವ
ಶುದ್ಧಮನದಿಂದಿರಿಸಿದರ್ ದಲ್
ಮುದ್ದುಮೊಗದಿಂದವನು ಸಕಲರ ಮನವಸೆಳೆಯುವನು ॥ ೧೨ ॥

ಉಳಿದ ಹುಡುಗರ ಹಾಗೆ ಯಾಡದ–
ಲುಳಿದ ಮಕ್ಕಳ ಹಾಗೆ ಪಾಡದ–
ಲುಳಿದ ಚಿಣ್ಣರ ಹಾಗೆ ನೋಡದೆ ಬಾಲ್ಯವಯಸಿನಲಿ
ಒಳಿತು ಸಂಸ್ಕಾರಗಳಿಗೆಳಸುತ–
ಲೊಳಿತು ಸಂಸರ್ಗದಲಿ ಸೇರುತ
ಬೆಳೆಯುತಿರ್ದನು ದಿನದಿನೇ ಗಂಧದ ಮಹೀಜದೊಲು ॥ ೧೩ ॥

ಒಲವಿವನ ಗಮನಿಸಿದ ತಂದೆಯು
ಪಳಗಿಸಲು ಬೇಕೆನುತಲಿವನಿಂ
ಸಲುವ ಕೆಲಸಂಗಳನೆ ಮಾಡಿಸತೊಡಗಿಸಿದಂನಾಡೆ
ಚಲುವ ದಳಗಳನೆತ್ತಿ ತರುವದು
ಚಲುವ ಹೂಗಳ ತಿರಿದು ತರುವದು
ಗಲಿಬಿಲಿಯಮಾಡದಲೆಯರ್ಚನೆಗಣಿಯಗೊಳಿಸುವದು ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಿಸಬೇಕಿವಗೀಗ ಸಕ್ಕದ
ನೆಳೆಯ ನಿರ್ಪುದರಿಂದ ಕನ್ನಡ
ಕಲಿಸಲೆಳಸುತ ರಟ್ಟಿಹಳ್ಳಿಯಮಠದೊಳಿರಿಸಿದನು
ಕಲಿಯುತಿರ್ದರು ಸೇವೆಗೈಯುವ–
ನೆಳೆಯನಿರ್ದರು ಓದುತಿರ್ದನು
ಸೆಳೆದು ಗುರುಚಿತ್ತವನು ವೈದಿಕ ವಿಧಿಯ ಕಲಿತಿಹನು ॥ ೧೫ ॥

ಗುರುವು ಮೂರ್ತಿಯು ಎಂಬಶಾಸ್ತ್ರಿಯು
ಹರಪ್ಪುರಿಯೊಳಿರ್ದೋದಿದಾತನು
ಕರತಲಾಮಲಕವಗೆ ಸಂಸ್ಕೃತ ವಿದ್ಯೆಯೆಂಬುವದು
ಪರಿಚಯಿಸಿ ಕಡೆನಂದಿಪಳ್ಳಿಯೊ–
ಳಿರಿಸಿದಂ ಪರಮೇಶ್ವರಯ್ಯನು
ತರಳನುಂ ಚನ್ನಾಗಿ ಯೋದುತಲೆರಡು ವರ್ಷಿರ್ದಂ ॥ ೧೬ ॥

ಬಳಿಕ ಕ್ಯಾಸ್‌ನೂರ್‌ಮಠದ ಪಟ್ಟಕೆ
ಸಿಲುಕಿ ಜಯಗುರುವೆಂಬ ಪೆಸರನು
ತಳೆದು ಶಿವನಾಚಾರ್ಯನಾದಂ ಸಿದ್ಧಲಿಂಗನವಂ
ಕಲಹದಲಿ ಸಿಲ್ಕಿರಲು ಮಠವದು
ಕಲಿಯಬೇಕೆಂಬಾಸೆ ತಾ ಬಲಿ–
ಯಲಿಕೆ ಸೊಲ್ಲಾಪುರಕೆ ಬಂದಂ ಭಕ್ತರಾಶ್ರಯದಿಂ ॥ ೧೭ ॥

ವಾರದವರಾಪಾಠಶಾಲೆಯ
ಸೇರಿ ಕೆಲವರ್ಷಗಳವರೆವಿಗು
ಧೀರಬುಧಜಗದೀಶ ಶಾಸ್ತ್ರಿಗಳಲ್ಲಿಯಭ್ಯಸಿಸಿ
ಜೋರು ಮಾಡೆ ಹಿತೈಷಿವರ್ಗವು
ಊರಲಾರದೆ ಕಾಶಿಪುರಕಂ
ನೇರವಾಗಿಯೆಬಂದು ಜಂಗಮವಾಡಿಮಠದಿರ್ದಂ ॥ ೧೮ ॥

ಅಲ್ಲಿ ಪಂಡಿತರಲ್ಲಿ ಕಲಿಯು–
ತ್ತೆಲ್ಲ ವಿದ್ಯಾರ್ಥಿಗಳ ಜೊತೆಜೊತೆ–
ಯಲ್ಲಿ ಸೌಹಾರ್ದದಲಿ ವರ್ತಿಸಿ ಪೀಠಸೇವೆಯನು
ಬಲ್ಲವನು ತಾನಾಗಿ ಹದುಳದ–
ಲೊಲ್ಲೆನೆನ್ನದೆ ಮಾಡುತಿರ್ದನು
ಬಲ್ಲ ಗುರುವರ ವೀರಭದ್ರಂ ನೆಚ್ಚಿದೀತನನು ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಸತನವು ತಾನೆದುರುಗೊಂಡಿತು
ಕಸವಿಸಿಯು ತಾನುಂಟುಮಾಡಿತು
ಬಿಸವ ಕುಡಿಯುವಂತೆನಿಸಿದರು ಕಂಗೆಡದೆ ಗುರುದೇವಂ
ರಿಸಿವರರ ಕೈಯೊಳಗೆ ಮಠವಿರ–
ಲಸಮ ಸಾಸದಿ ಬಿಡಿಸಿಕೊಂಡನು
ತುಸು ಸಮಯದೊಳು ಭಕ್ತಸಂಕುಲ ನೆರವು ನೀಡಲ್ಕೆ ॥ ೨೦ ॥

ಜ್ಞಾನಪೀಠದಲಿಲ್ಲವಲ ಸು–
ಜ್ಞಾನ ಮಂದಿರವದುವವಶ್ಯವು
ಜ್ಞಾನಪೀಠದಲಿಲ್ಲದಿರ್ದೊಡೆ ಕುಂದದೆನ್ನುತಲಿ
ಜಾಣರೆಲ್ಲರು ಮೆಚ್ಚುವಂದದಿ
ಜ್ಞಾನಮೂರ್ತಿ ಸ್ಫೂರ್ತಿಯಿಂದಂ
ಮಾಣದಲೆ ತಾ ಜ್ಞಾನಮಂದಿರ ನಿರ್ಮಿಸಿದನಂದು ॥ ೨೧ ॥

ವಿವಿಧ ಭಾಷೆಯ ಪುಸ್ತಕಂಗಳು
ವಿವಿಧ ಭಾಷೆಯ ಲಿಪಿಗಳಲ್ಲದೆ
ವಿವಿಧ ವಿಷಯಗಳನ್ನು ಒಡಲೊಳಗಿರಿಸಿಕೊಂಡಿರುವ
ವಿವಿಧ ವಾದುದ್ಗ್ರಂಥಗಳು ತಾವ್
ವಿವಿಧ ವಾದಭಿರುಚಿಯ ಜನರಿಗೆ
ವಿವಿಧ ಬಗೆಯ ಜ್ಞಾನವನು ಮಂದಿರದಿ ಕೊಡುತಿಹವು ॥ ೨೨ ॥

ಬಿಡುವದಿಲ್ಲದೆ ದುಡಿದ ಕಾರಣ
ತೊಡರಿತಾಗಳೆ ಜಾಡ್ಯ ಗುರುವಿಗೆ
ಬಿಡದೆ ದೇಹಾಲಸ್ಯ ದಿನದಿನ ಬೆಳೆದು ಬಂದಿಹುದು
ಕೊಡುತಲಿರ್ದರು ಔಷಧವದಲ್
ಗಡನೆ ಗುಣ ಕಾಣಿಸದೆ ಶಕ್ತಿಯು
ಕಡಿಮೆಯಾಗುತ ಬರಬರುತ್ತಂ ತೊಡರ ತಂದಿಹುದು ॥ ೨೩ ॥

ರೋಗ ಬಿಡದಿರೆ ಗುರುವರೇಣ್ಯನ–
ನಾಗ ತನ್ನಯ ಕೊನೆಯಗಾಲವು
ಸಾಗಿ ಬಂದಿಹುದೆಂದು ತಿಳಿದನು ಸಕಲ ಛಾತ್ರರೊಳು
ಯೋಗ್ಯ ಜಯಗುರು ಪೀಠಕೆನ್ನುತ
ಲಾಗಳೆಯೆ ಪ್ರಮುಖರಿಗೆ ಸೂಚಿಸ–
ಲಾಗಲಿಹುದೆಂದವರು ಸಮ್ಮತಿಸಿದರನಂತರವು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬರೆದು ಜಯುಗುರು ಹೆಸರಿಗಂ ತಾ-
ನಿರಿಸಿದಂ ಗಡ ಮೃತ್ಯು ಪತ್ರವ-
ನುರುಳಿ ಕೆಲದಿನವೊಂದು ದಿವಸಂ ಬೆಳಗಿನಾ ಪೊಳ್ತು ||
ಬರೆಯುತಿರೆ ಕವಿಸೋಮನಾಥನ
ಚರಿತೆಗಂ ಮುನ್ನುಡಿಯ ನಾಗಳ್
ಹರನ ಲೋಕದ ಯಾತ್ರೆಗಾಂ ಸನ್ನದ್ಧನಿಹೆನೆಂದು || ೨೫ ||

ಒಂದು ಕಾಗದದಲ್ಲಿ ಬರೆಯುತ-
ಲಂದವಾಗಿರಿಸುತ್ತ ಭೋಂಕನೆ
ಬಂದೆ ವಿಶ್ವೇಶ್ವರನೆ ಪರಮೇಶ್ವರನೆ ನಾನೆಂದು
ಒಂದುಗೂಡಿದನಭವನೊಳುಗುರು
ಒಂದು ಪೊಂಭತ್ತನಾಲ್ಕು ಎಂಟರ
ಸಂದ ಕ್ರಿಸ್ತನ ಶಕದಿ ಶಿವಮತ ಕಾಯ್ತು ಬಹುನಷ್ಟಂ || ೨೬ ||

ವೀರ ಶಿವಸಿದ್ಧಾಂತ ಪಾಲಕ
ವೀರ ಶಿವಸಂಸ್ಕೃತಿ ಪ್ರವರ್ಧಕ
ವೀರ ಶಿವಸಾಹಿತ್ಯ ಪೋಷಕನೆಮಗೆ ಇನ್ನಿಲ್ಲ
ವೀರಶೈವರ ಬಲವು ಪೋದುದು
ವೀರಶೈವರ ಛಲವದಳಿದುದು
ವೀರಶೈವರ ನಾಥರಾದೆವೆನುತ್ತ ಶೋಕಿಸಿದರ್ || ೨೭ ||

ನೆರೆಯೆ ಭಕ್ತಾವಳಿಯು ಜಯುಗುರು
ಪರಮಗುರುವಂ ತ್ಯೇಷ್ಟಿವಿಧಿಯನು
ಜರುಗಿಸಿದನೈ ಸಕ್ರಮಂ ವಾರಾಣಸಿಯ ಮಠದೋಳ್
ಅರಿದು ಭಕ್ತ ಸಮೂಹದಭಿಮತ
ಬರಲು ಸುಮುಹೂರ್ತವದು ಸರ್ವರು
ಧರೆಯ ಗುರು ಪಟ್ಟಾಧಿಕಾರಕೆ ಕಾಶಿಗೈತಂದರ್ || ೨೮ ||

ಒಂದು ಪೊಂಭತ್ ನಾಲ್ಕು ಯೆಂಟರ
ಸಂದಕ್ರಿಸ್ತೀಶಕದಿ ಜಯುಗುರು
ಸುಂದರಾಚಾರ್ಯನಿಗೆ ಕಾಶಿಯ ಪೀಠ ಪಟ್ಟವನು
ಅಂದು ಗಂಗಾಧರ ಜಗದ್ಗುರು
ಬಂದು ಸಿದ್ಧೇಶ್ವರ ಜಗದ್ಗುರು
ನಿಂದು ಕಟ್ಟಿದರಕ್ಕರಿಯಲಿ ಸಂಭ್ರಮದ ಮಧ್ಯದಲಿ || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಸರು ವಿಶ್ವೇಶ್ವರ ಜಗದ್ಗುರು
ವೆಸೆದ ನೆಂಭತ್ತೈದನೇಯವ
ಹೊಸಹೊಸತು ಯೋಜನೆಗಳಂ ಕೈಗೆತ್ತಿಕೊಂಡಿಹನು
ಕಸವಿಸಿ ಸ್ಥಿತಿಯಿದ್ದರೆಯು ತಾ–
ನಸಮತೆಯ ತೊಡೆಯಲ್ಕೆ ನಿಂದನು
ತುಸುವು ಬಿಡುವಿಲ್ಲದಲೆ ಸಂಚರಿಸುತ್ತ ಶ್ರಮಿಸಿಹನು ॥ ೩೦ ॥

ಸರಳ ವ್ಯಕ್ತಿತ್ವಕ್ಕೆ ಮತ್ತಂ
ಸರಸ ಶಾಂತಸುಭಾವಕಂ ಕೇಳ್
ಸರುವಜನ ಮೆಚ್ಚುತ್ತಲಿದ್ದಿತು ಹೋದ ಪೋದೆಡೆಯೊಳ್
ಕರುಣೆಯಿದ್ದಿತು ಭಕ್ತರಲ್ಲಿಯು
ಬರಿದೆ ಭಾರವದಾಗದೊಲು ಸಂ–
ಚರಿಸಿದಂ ಮಹರಾಷ್ಟ್ರದೆಲ್ಲೆಡೆ ಕಾರ್ಯವೆಸಗುತಲಿ ॥ ೩೧ ॥

ನಿರಮಿಸುತ ಕಟ್ಟಡವ ಬಾಡಿಗೆ
ಬರುವಪೊಲು ಮಾಡಿದನು ಪೀಠಕೆ
ಸ್ಥಿರವದಾದಾಯ ತಂದನು ಬುದ್ಧಿವಂತಿಕೆಯಿಂ
ಸರಿಪಡಿಸುತಾರ್ಥಿಕ ಪರಿಸ್ಥಿತಿ
ಗುರುಕುಲದಿಯಾತ್ರಾ ನಿವಾಸದಿ
ಸರುವ ಬಗೆಯ ಸುಧಾರಣೆಯ ಮಾಡಿಹನು ತದ್ಗುರುವು ॥ ೩೨ ॥

ವಿಶ್ವವಿದ್ಯಾಲಯದಿ ಕಾಶಿಯ
ಭಾಸುರ ಶಿವಾದ್ವೈತ ತತ್ತ್ವ ಪ್ರ–
ಕಾಶಿಸುವವೋಲ್ ಸ್ಥಾಪಿಸುತ ವೇದಾಂತ ಭಾಗವನು
ಏಸು ಕಾಲದ ಲಾಗದಿರ್ಪಾ
ಮಾಸದಾ ಕಾರ್ಯವನು ಮಾಡಿ ವಿ–
ಶೇಷವಾಗಿ ಪ್ರಸಂಶೆನೆಗೆ ಪಕ್ಕಾದನೀ ಗುರುವು ॥ ೩೩ ॥

ಉಳಿದನಾಲ್ ಪೀಠಗಳ ಕುರಿತುಂ
ಸಲೆ ವಿಚಾರಿಸುತಿರ್ದನಲ್ಲದೆ
ಕಳವಳಿಸಿ ಕೇದಾರ ಪೀಠ ಸನಾಥವಾಗಿಸಿದಂ
ಹಲವು ಸದ್ಗ್ರಂಥಗಳ ಪ್ರಕಟಿಸಿ
ಪಲವುಸಲ ಕರುನಾಡಿನಲ್ಲಿಯು
ಬಲು ವಿಜೃಂಭಣೆಯಿಂದ ಚರಿಸಿದನಾರ್ತರಕ್ಷಕನು ॥ ೩೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತರಭಿಮಾನಿಯು ಜಗದ್ಗುರು
ಭಕ್ತ ಜನಕಭಯುವನು ನೀಡುತ
ಮುಕ್ತಗೊಳಿಸುತ್ತಿರ್ದನ್ಯೆ ಬಿಕ್ಕಟ್ಟನಿಂಬಿಡಿಸಿ
ಭಕ್ತರಿಗೆ ವಿತ್ತದ ಸಹಾಯವ
ಮುಕ್ತಮನದಲಿ ಮಾಡುತಿರ್ದನು
ಲೆಕ್ಕದಲಿ ತಪ್ಪದಲೆ ಲೆಕ್ಕಕೆ ಲೆಕ್ಕವೆನ್ನುವನು || ೩೫ ||

ಮಕ್ಕಳೆಂದರೆ ಸನ್ನಿಧಿಗೆ ಬಹ-
ಳಕ್ಕರೆಯು ತಾನಿತ್ತು ಪಣ್ಗಳ
ಸಕ್ಕರೆಯ ತಿನುಸುಗಳನವರಿಗೆ ಕರೆದು ಹಂಚುವದು
ಮಕ್ಕಳೊಂದಿಗೆ ಮಕ್ಕಳಾಗಿಯೆ
ನಕ್ಕು ನಲಿಯುತ್ತಿತ್ತು ಮೊಗದಲಿ
ಮಕ್ಕಳಾ ಮುಖದಲ್ಲಿ ತೋರುವ ಮುಗ್ಧಕಳೆಯಿಹುದು || ೩೬ ||

ಬಲ್ಲಿದವನಾಚಾರದೊಳಗುಂ
ಬಲ್ಲಿದವನು ವಿಚಾರದೊಳಗುಂ
ನಿಲ್ಲಿಸನು ನಿತ್ಯದಲಿಗೈಯುವ ಲಿಂಗಪೂಜೆಯನು
ಕ್ಷುಲ್ಲಕರ ಬರಗೊಡನು ಸನಿಹಕೆ
ಬಲ್ಲವರ ಹಿಗ್ಗಿನಲಿ ಕಾಂಬನು
ಸೊಲ್ಲುಸೊಲ್ಲಿಗೆ ರೇಣುಕನ ಗೀತೆಯನುದಾಹರಿಪಂ || ೩೭ ||

ಆದರದಲೀ ಗುರುಚರಿತ್ರವ
ನೋದುವುಸುರುವ ಕೇಳ್ವಸುಜನರಿ-
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ಯೆ
ಮೇದಿನಿಯಲಿರುವನ್ನೆಗಂ ಕಾಪಾಡುವಂಬಿಡದೆ || ೩೮ ||

ಮರಬ ಜಡೆಮಠದೊಡೆಯನಾದರು
ಸಿರಿಗುಡೂರಕೆ ಬಂದು ನೆಲಸುತೆ
ಹರಮತವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪ್ರರ-
ದಿರುತ ಯೋಗಾನಂದ ತುಂದಿಲ-
ನೊರೆದ ನೀಕೃತಿಯನು ಜಗದ್ಗುರು ಸತ್ ಪರಂಪರೆಯ || ೩೯ ||

ಇಂತು ನವಮಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋ ಭಗವತೇ ವಿಶ್ವೇಶ್ವರಾಯ

ದಶಮಾಧ್ಯಾಯ

ಭಾ. ಷ.

ಸೂಚನಾ–ನಿಂದು ಸಿಂಹಾಸನದಿ ಕಾಶಿಯೊ–
ಳಂದು ಚಿದ್ಗುರು ಚಂದ್ರಶೇಖರ
ತಂದನಾನಂದವನು ಸದ್ವಿದ್ಯಾವಿಶಾರದನು

ಪಿರಿಯರರವತ್ಮೂರು ಶಿವಭ–
ಕ್ತರ ಪುರಾತನರ ಸಮಭಕ್ತಿಗೆ
ಹರುಷಮಂ ತಾಳ್ದವರಭೀಪ್ಸಿತ ಐತ್ತ ವಿಶ್ವೇಶ ||
ಪರಶಿವನೆ ನೀ ಭಕ್ತಿ ಕಂಪಿತ
ನಿರುವೆಯಲ್ಲವೆ ಭಕ್ತವತ್ಸಲ
ಕರುಣೆಸೈ ! ತವಪಾದ ಕಮಲದ ಭಕ್ತಿಯನ್ನೀಶ ||೧||

ಕನ್ನಡದ ಜಿಲ್ಲೆಯು ವಿಜಾಪುರ–
ವುನ್ನತ ಸ್ಥಾನದಲಿ ನಿಂದಿಹು–
ದಿನ್ನು ವಿಶ್ವಖ್ಯಾತಿಯನು ಗುಮ್ಮಟದಿ ಪಡೆದಿಹುದು
ಮಾನ್ಯ ಚಾಲುಕ್ಯರ ಬದಾಮಿಯು
ಗಣ್ಯ ತಾಲೂಕದರೊಳಿರ್ಪುದು
ಸಣ್ಣದಾದರು ಗುಣಪಿರಿದು ತೋಗುಣಸಿ ಯೆಂಬೂರು ||೨||

ಇರುವುದೈ ತೋಗುಣಸಿಯಲ್ಲಿಯೆ
ಸಿರಿ ಪುರಾಣದ ಮಠವು ರಂಭಾ–
ಪುರಿಯ ಶಾಖೀಯವದು ಸಿದ್ಧಯ್ಯೆಂಬ ಮಠದಾರ್ಯಂ
ಸರಲೆ ಸಾವಿತ್ರ್ಯಮ್ಮನೆಂಬುವ
ವರಸತಿಯನೊಡಗೂಡಿ ಸಂತಸ
ವೆರಸಿ ಬೆಲ್ಲದ ಹಾಗೆ ಬೇಕಾಗಿರ್ದ ಭಕ್ತರಿಗೆ ||೩||

ಅವರ ಪುಣ್ಯೋದರದಿ ಜನಿಸಿರು–
ವವನು ಚಂದ್ರಧರಾಭಿಧಾನನಿ-
ಸವಿಯದೊಂದ್ ವೊಂಭತ್ತು ನಾಲ್ಕೇಳರಲಿ ಗುರುದಯದಿ
ಅವನ ಪ್ರಾಥಮಿಕಾಭ್ಯಾಸವು
ಜವದಿ ಬ್ಯಾಡಗಿಯೊಳಗೆ ಯಾಗಿಹು-
ದವನ ಸೋದರ ಮಾವನಿರ್ದನು ಸಿದ್ಧಲಿಂಗಯ್ಯ ||೪||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತರಲಿಕೌಷಧ ಪೋಗಲಮರೇ-
ಶ್ವರ ಗುರುಗಳಿರ್ದರು ಗುಳೇದಗುಡ್ಡ
ಗಿರಿಯೊಳಗೆ ಸಿದ್ಧಯ್ಯಗೆಂದರು ಹಣವು ಬೇಡೆನಗೆ
ತರಳನೋರ್ವನ ಕೊಡುವಿಯಾದರೆ
ಹಿರಿದು ಸಂತಸವಪ್ಪುದೆನ್ನಲು
ಗುರುವೆ ಆಗಲಿಯೆಂದು ಕಳಿಸಿದನವರ ಬಳಿ ಮಗನ ॥ ೫ ॥

ಕರದ ರೇಖೆಯನೋಡಿ ವರ್ಷೋಂ-
ದಿರಿಸಿಕೊಂಡನು ಬಳಿಕ ಸೊಲ್ಲಾ-
ಪುರದ ಗುರುಕುಲದಲ್ಲಿ ಸಂಸ್ಕೃತ ಪೋದಲಿಕ್ಕೆಂದು
ಇರಿಸಿ ಪೋದನು ಹುಟಗಿ ಮಠದಲಿ
ವರುಷವಾರರವರೆಗೆಯಲ್ಲಿಯೆ
ಹರುಷದಿಂದೋದಿದನು ಸಕ್ಕದ ಚಂದ್ರಶೇಖರನು ॥ ೬ ॥

ಕಾವ್ಯದಾದ್ಯದಿ ಯಶವು ಬಂದುದು
ಕಾವ್ಯ ಮಧ್ಯಮು ಪಾಸು ಆದುದು
ಕಾವ್ಯ ತೀರ್ಥ ಪರೀಕ್ಷೆಯಲಿ ತೇರ್ಗಡೆಯುಪೊಂದಿಹನು
ದೇವ ಕಾಶಿಯ ಗುರುವು ಪುಣೆಯೊಳ-
ಗೀ ವಟುವ ನೋಡುತ್ತಲೆಂದನು
ನೀವು ಕಾಶಿಗೆ ಬರ್ಪುದಧ್ಯಯನಕ್ಕೆ ಪದುಳಕ್ಕು ॥ ೭ ॥

ಗುರುವಿನಪ್ಪಣೆಯಾದರಾಗಲಿ
ಬರುವೆನೆಂದಂದು ಸೊಲ್ಲಾ-
ಪುರಕೆ ಬರಲವನಲ್ಲಿ ಗುರು ಲಿಂಗೈಕ್ಯ ತಂತಿಯದು
ಬರಲು ಬೇಗ ಗುಳೇದಗುಡ್ಡಕೆ
ತೆರಳಿ ಬನ್ನೂರ್ ಶ್ರೀಗಳಲ್ಲಿರೆ
ಗುರು ಸಮಾಧಿಯ ಕಾರ್ಯವನು ಪೂರೈಸಿದಂ ಬಿಡದೆ ॥ ೮ ॥

ಸರುವಭಕ್ತರು ಕೂಡಿ ಪಟ್ಟವ
ಮರಿಯ ಗೌಡರ ಹಿರಿಯತನದ-
ಲ್ಲಿರಲಿಕೊಂದ್ಸೊಂಭತ್ತು ಯೆಪ್ಪತ್ತರದು ಕ್ರಿಸ್ತಾಬ್ದಂ
ತರಿಸಿ ರಂಭಾಪುರಿಯ ಗಂಗಾ-
ಧರ ಜಗದ್ಗುರುಗಳ ನಿರೂಪವ
ಗುರುವ ಹುಬ್ಬಳಿ ಹನ್ನೆರಡು ಮಠದ ಶ್ರೀ ಕರಾಂಬುಜದಿಂ ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇರುವ ಶುಭ ಮುಹೂರ್ತದೊಳು ವಿಧಿಯನು-
ಸರಿಸಿಯುಮರೇಶ್ವರರ ಮತಕಂ
ಗುರುವಿನಾ ಪಟ್ಟವನು ಕಟ್ಟಿಹರಿಂದು ಶೇಖರಗೆ
ಗುರುವಿನಾರಾಧನೆಯು ಮುಗಿದುದು
ಗುರುವರನ ಕರೆ ಕಾಶಿಯಿಂಬರೆ
ಹರಪುರಿಗೆ ಗುರುಚಂದ್ರಶೇಖರನೋದಲೈತಂದಂ ॥ ೧೦ ॥

ಸೇರಿ ಸಂಪೂರ್ಣ ಪ್ರಮೋದನ
ಸಾರವಿದ್ಯಾಲಯದಲೋದುತ
ಮೂರುವರುಷಂ ವೇದಾಂತಾಚಾರ್ಯದ ಪರೀಕ್ಷೆಯೊಳು
ಮೀರಿದಂಕವಪಡೆದು ಪ್ರಥಮದಿ
ತೇರುಗಡೆಯಾಗುತ್ತ ಚಿನ್ನದ
ಮೂರು ಪದಕಗಳನ್ನು ಸಂಪಾದಿಸಿದನಾಚಾರ್ಯಂ ॥ ೧೧ ॥

ಕೇರಳದ ಗುರುವಾಯುರೂರೆಡೆ
ಭಾರತದ ಸಂಸ್ಕೃತದ ಭಾಷಣ
ನೇರದಾಸ್ಪರ್ಧೆಯೊಳಗುತ್ತರ ದೇಶ ಪ್ರತಿನಿಧಿಸಿ
ಭಾರತಕ್ಕೆನೆ ಮೊದಲನೆ ಪುರ-
ಸ್ಕಾರವನು ವೇದಾಂತ ವಿಷಯದಿ
ಸೂರೆಗೊಂಡನು ವಿಶ್ವವಿದ್ಯಾಲಯಕೆ ಯಶತಂದಂ ॥ ೧೨ ॥

ಅರಿಯುತೀ ಸಂಗತಿಯ ವಿಶ್ವೇ-
ಶ್ವರ ಮಹಾಚಾರ್ಯನು ಮನಸ್ಸಿನ
ಹರುಷಮಂ ತೋರ್ಪಡಿಸಿದಂ ನಾಡಿಂಗೆ ಪೋಷೆನೆನೆ
ಅರರೆ ಬಿಡದಧ್ಯಯನಮಂ ಮುಂ-
ದರಿಸಿ ಹೆಚ್ಚಿನ ಶೋಧನೆಯನುಂ
ಹುರುಪಿನಿಂ ಗೈಯುವದು ಪೀಠ ಸಹಾಯ ವೀವುದೆನಲ್ ॥ ೧೩ ॥

ಸಾರಸಿದ್ಧಾಂತದ ಶಿಖಾಮಣಿ
ಸಾರತರ ಸಿದ್ಧಾಂತಗಳ ಜೊತೆ
ಧೀರತನದಿಂ ತೌಲನಿಕ ಅಭ್ಯಾಸಮಂ ಮಾಡಿ
ಸಾರಪೂರ್ಣ ಪ್ರಬಂಧ ಶೋಧಿಸಿ
ಪೂರಯಿಸುತೇಳ್ ವತ್ಸರದಿ ತಾ
ಸಾರ ವಿದ್ಯಾವಾರಿಧಿಯ ಪದವನ್ನು ಪಡೆದಿರ್ದಂ ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿಲ್ಲಿಯಾ ರಾಷ್ಟ್ರೀಯ ಸಂಸ್ಕೃತ
ಬಲ್ಲವರ ಸಂಸ್ಥಾನ ಕಡೆಯಿಂ
ದಿಲ್ಲಿಯಲ್ಲಿಹ ವಿಶ್ವ ವಿದ್ಯಾಲಯದ ಅನುದಾನ
ಬಲ್ಲ ಆಯೋಗದ ಸಕಾಲಿಕ-
ದೆಲ್ಲ ಶಿಷ್ಯ ಸುವೃತ್ತಿ ದೊರಕಿರ-
ಲೊಳ್ಳೆಯಾರೀತಿಯಲಿ ಶೋಧನ ಕಾರ್ಯ ಮುಗಿದಿಹುದು ॥ ೧೫ ॥

ಗುರುವರರು ಹರ್ಷಿಸಿದರಾಗಳ್
ಮರಳುವೆನು ದೇಶಕ್ಕೆ ಗುರುವೆನೆ
ಬರಿದೆ ದೇಶದಿ ವಿದ್ಯೆಯದು ಮಲಿನತೆಯ ಪೊಂದುವದು
ಇರುತಲಿಲ್ಲಿಯೆ ಪಿರಿಯ ಶೋಧನೆ-
ಯಿರದೆ ಗೈವುದಃ ಎಂದು ಬೆಸಸಲು
ಸರಿಯಿದೆಂದೊಪ್ಪಿದಂ ಗುರುಚಂದ್ರಶೇಖರನು ॥ ೧೬ ॥

ಗುರುವಿನಾಣತೆಯಂತೆ ಮತ್ತೆಯಃ
ಪಿರಿಯ ಸಂಶೋಧನೆಗೆ ತೊಡಗುತ
ಬರೆದು ತತ್ತ್ವತ್ರಯ ವಿಮರ್ಶವನೊಪ್ಪಿಸಲ್ ನೋಡಿ
ಹರುಷದಲಿ ವಿದ್ಯಾಲಯದ ಬುಧ-
ರರಿಯುತಂತಿಮವಾದ ಡಿ. ಲಿಟ್.
ವರಪದವಿಯಿತ್ತಿಹರು ಗೌರವವಿದು ಸಮಾಜಕ್ಕಂ ॥ ೧೭ ॥

ಒಂದು ಒಂಭತ್ತೆಂಟು ಒಂಭತ್
ಸಂದ ಕ್ರಿಸ್ತನ ಶಕದಿ ಸನ್ನಿಧಿ
ಬಂದು ಹೂಲಿಯ ಸಾಂಬ ಗುರುಮಠದಲ್ಲಿ ನಿಂದಿಹುದು
ಚಂದ್ರಶೇಖರ ಗುರುವು ಶ್ರಾವಣ
ಬಂದಿರಲು ಬಾಗಲದ ಕೋಟೆಯೊ-
ಳಂದು ರೇಣುಕ ಗೀತೆಯ ಪ್ರವಚನವ ನಡೆಸಿರ್ದಂ ॥ ೧೮ ॥

ಮುಂದೆ ಸನ್ನಿಧಿ ಪುಣೆಗೆ ಬರಲಿಕೆ
ಕುಂದಿಹುದು ಆರೋಗ್ಯವಲ್ಲಿಯೆ
ಸಂದುದೈ ಶುಶ್ರೂಷೆಯಾಗಳ್ ಗುಳೆದಗುಡ್ಡಕ್ಕೆ
ಒಂದು ಪತ್ರವ ಬರೆದು ಕಳಿಸಿತು
ಬಂದು ಪುಣಗಂ ನಮ್ಮ ಕಾಣುತ
ಮುಂದೆ ಕಾಶಿಗೆ ಪೋಗುವದು ಎಂದದರ ಸಾರಾಂಶಂ ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೊನ್ನಲಾಪುರದಲ್ಲಿ ಕೃಷಿ ಉ-
ತ್ಪನ್ನ ಮಾರ್ಕೇಟಿನಲಿ ಆಗ ಭ-
ವಾನಿ ದುರ್ಗಾ ಮೂರ್ತಿಯಂ ಸ್ಥಾಪಿಸುವ ಕಷದಿಂದೆ
ಮುನ್ನ ದುರ್ಗಾಸಪ್ತತಿಯ ಮೇಲ್
ಸಾನುರಾಗದಿ ವಿಷಯ ಪೇಳಲು
ಬನ್ನಿ ಎಂದಲ್ಲಿಯಜನಂ ಕರೆದೊಯ್ದುದಾಪುರಿಗೆ ॥ ೨೦ ॥

ಒಂದು ಒಂಭತ್ತೆಂಟು ಒಂಭತ್
ಸಂದಕ್ರಿಸ್ತನ ಶಕದ ಲಾಶ್ವಿಜ
ಬಂದಿರಲು ಮೂರನೆಯದಿವಸಂ ಕಾಶಿ ಸನ್ನಿಧಿಯು
ಇಂದುಧರನಲಿ ಒಂದುಗೂಡಿ-
ತ್ತೆಂದು ವಾರ್ತೆಯು ತಿಳಿಯಲಾಗಳೆ
ಚಂದ್ರಶೇಖರ ಗುರುವು ಪೋದಂ ಪುಣ್ಯ ಪತ್ತನಕೆ ॥ ೨೧ ॥

ಗುರುವರನ ಪಾರ್ಥಿವ ಶರೀರವು
ಹರಪುರಿಗೆ ತಲ್ಪಿತ್ತು ಆಗಳೆ
ವರವಿಮಾನದ ಮೂಲಕಂ ಭಕ್ತರ್ಕಳಿಂ ಕೂಡಿ
ತೆರಳಿದಂ ಗುರುಚಂದ್ರಶೇಖರ
ಹರಪುರಿಗೆ ದುಃಖಾಕುಲಂ ತಾ
ಗುರು ಸಮಾಧಿಯ ಕಾರ್ಯವಲ್ಲಿಯು ಪೂರ್ತಿಗೊಂಡಿತ್ತು ॥ ೨೨ ॥

ಬಂದು ತಾ ನೆಲಮಂಗಲಿಂದಂ
ನಿಂದು ಅಂತ್ಯಕ್ರಿಯೆಯ ಜರುಗಿಸು-
ತಂದು ರಂಭಾಪುರಿ ಜಗದ್ಗುರು ರುದ್ರಮುನಿದೇವಂ
ಅಂದವಾಗಿಯೆ ಪುಣ್ಯತಿಥಿ ಸಂ-
ಬಂಧಿಸಿದ ಕರ್ಮವನು ಮುಗಿಸುತ
ಬಂದ ಹಾಗೆಯೆ ಮತ್ತು ಸ್ವಸ್ಥಲವನ್ನು ಸೇರಿದನು ॥ ೨೩ ॥

ಗುರುವ್ಯವಸ್ಥಾಪತ್ರ ಮೇರೆಗೆ
ಸಿರಿಮಹಾಗುರು ಮೂವರಲ್ಲಿಗೆ
ಭರದಿ ಬಂದರು ಗುರು ಹಿರಿಯರ್ಸೈತಂದರೆಲ್ಲೆಡೆಯಿಂ
ಎರಡು ದಿನ ಪರ್ಯಂತ ಚರ್ಚಿಸಿ
ಸರುವರೊಕ್ಕೊರಲಿಂದ ಶಶಿಶೇ-
ಖರ ಗುರುವೆ ಪೀಠಕ್ಕೆ ತಕ್ಕಧಿಕಾರಿಯೆಂದಿಹರು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರು ಚತುಷ್ಟಯ ಸನ್ನಿಧಾನದಿ
ಸಿರಿ ಶಿವಾಚಾರ್ಯರು ಮಹಂತರು
ನೆರೆಯ ಪ್ರಮುಖ ಜನಂಗಳಾ ಗುರುಚಂದ್ರಶೇಖರಗೆ
ಪರಮ ವೈಭವದಿಂದೆ ವಿಧಿಯನು-
ಸರಿಸಿ ಗುರುಪೀಠಾಧಿಕಾರವು
ಜರುಗಿದುದು ಸದ್ಭಕ್ತ ಜನಸಂದೋಹ ಸಮ್ಮುಖದೊಳ್ || ೨೫ ||

ವಿಶ್ವವಿದ್ಯಾಲಯದ ಜನಗಳು
ವಿಶ್ವದೇಶಿಕನಾದ ವಿಭುಗೆ ಮ-
ಹಾ ಸಭೆಯೊಳಗೆ ಯಭಿನಂದನಾ ಪತ್ರವನು ಸಡಗರದಿ
ದೋಷ ವಿರಹಿತವಾದ ಸಂಸ್ಕೃತ
ಭಾಷೆಯಲಿ ಬರೆದಿರೆ ಬುಧರ್ ವಿ-
ಶ್ವಾಸದಿಂ ಶಾಸ್ತ್ರಾರ್ಥ ನಡೆಯಿಸಿ ಸಲ್ಲಿಸಿಹರವರು || ೨೬ ||

ಮೊದಲಿನುತ್ಸವ ಗುಳೆದಗುಡ್ಡದ-
ಲದರ ಮೇಲ್ ತೋಗುಣಸಿ ಮೂರ್ನೇ-
ಯದು ಮಹಾಸಂಭ್ರಮದಿ ಬಾಗಲಕೋಟೆಯಲ್ಲಾಯ್ತು.
ಆದರ ನಂತರ ಮಹಾರಾಷ್ಟ್ರದಿ
ವಿದಿತ ಕರ್ನಾಟಕದ ಭಾಗದಿ
ಪದೆದು ಭಕ್ತಾವಳಿಯು ಮಾಡಿರುವದು ಮಹೋತ್ಸವವ || ೨೭ ||

ಪ್ರಥಮ ಶ್ರಾವಣಮಾಸ ಪೂಜೆಯು
ಪ್ರಥಿತ ಸೊಲ್ಲಾಪುರದಿ ನಡೆದುದು
ಪತಿತ ಪಾವನ ಸಿದ್ಧರಾಮನ ದೇವಭವನದಲಿ
ಸತತ ಸಿದ್ಧಾಂತ ಶಿಖಮಣಿಯ ಕು-
ರಿತು ಜಗದ್ಗುರು ಚಂದ್ರಶೇಖರ
ಪ್ರತಿದಿವಸ ಪ್ರವಚನವ ಮಾಡುತ್ತಿರ್ದನುಲ್ಲಸದಿ || ೨೮ ||

ಯೋಗಿನಾಥನ ಭಕ್ತ ಮಂಡಳಿ
ಯಾಗ ಸಿದ್ಧಾಂತದ ಶಿಖ ಮಣಿಯು-
ದಾಗಿರಲು ಮಹರಾಷ್ಟ್ರ ಭಾಷಾಂತರವು ತದ್ಗ್ರಂಥ
ಮೇಗಿರಿಸಿ ಕರಿತಂದು ನಿಲ್ಲಿಸಿ
ಸಾಗ ಮಾಡಿಹುದದ್ದು ಪಾಲಕಿ-
ಯಾಗ ರಂಭಾಪುರಿಯ ಕಾಶಿಯ ಗುರುಯುಗಂ ಮೆರೆಯೆ || ೨೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿತ್ಯದನ್ನದ ದಾನ ಪೀಠದಿ
ವ್ಯತ್ಯಯವು ಬರದಂತೆ ಯೋಜಿಸಿ
ಸ್ತುತ್ಯ ಕಾರ್ಯವನೆಸಗಿಹನು ವಿಶ್ವೇಶಸಂಕಿತದಿ
ಮತ್ತೆ ಯಾತ್ರಾರ್ಥಿಗಳ ಸಲುವಾ-
ಗುತ್ತಮದ ಕೋಣೆಗಳ ನಿರ್ಮಿಸಿ
ಛಾತ್ರರಿಗೆ ಸೌಕರ್ಯನುಂ ಪೆರ್ಚಿಸಿದನೀ ಪೂಜ್ಯಂ || ೩೦ ||

ಆಗಮ ಗ್ರಂಥಗಳ ಪ್ರಕಟಿಸು-
ತೀಗ ತ್ರೈಮಾಸಿಕ ವಿಭೂತಿಯು-
ನಾಗಿಸುತ ಮಹರಾಷ್ಟ್ರ ಭಾಷೆಯೊಳುಂ ಪ್ರಕಾಶನವ
ಬೇಗ ಕರ್ನಾಟಕದ ಭಾಷೆಯೊ-
ಳಾಗಬೇಕೆಂಬಿಚ್ಛೆ ಸನ್ನಿಧಿ-
ಗೀಗಲುಂ ತಾನಿಹುದು ಪ್ರಕಟಿತವಕ್ಕು ತುಸುದಿನದಿ || ೩೧ ||

ಕೆಲವು ವಿದ್ಯಾಲಯವ ತೆರೆವುದು
ಕೆಲವು ಲಘುವುದ್ಯೋಗ ತೆರೆವುದು
ಕೆಲವು ಬಡಛಾತ್ರರಿಗೆ ಕೊಡುವುದು ಶಿಷ್ಯವೇತನವ
ವಿಲಸಿತದ ಗೋಪುರವ ನಿರ್ಮಿಪ
ಹಲವು ಯೋಜನೆಗಳನು ಕಾರ್ಯ-
ಕ್ಕಿಳಿಸಲಿಕೆ ಸನ್ನಿಧಿಯು ತಾನುತ್ಸುಕವಗೊಂಡಿಹುದು || ೩೨ ||

ಸಾರರೇಣುಕ ಗೀತೆಯೊಳಗಿನ
ನೂರು ಒಂದು ಸ್ಥಲದ ಬಗೆಯ ವಿ-
ಚಾರವನು ಪ್ರವಚನದ ಮೂಲಕ ಪುಸ್ತಕದ ಮುಖದಿ
ವೀರಶೈವರಿಗಿರದೆ ಬೋಧಿಸಿ
ವೀರಶೈವೋತ್ಕೃಷ್ಟ ತತ್ತ್ವ ಪ್ರ-
ಚಾರ ಮಾಡುವ ಕಜ್ಜದಲ್ಲಗ್ರಣಿಯು ಸನ್ನಿಧಿಯು || ೩೩ ||

ಇದುವೆ ತತ್ತ್ವದ ಮುಡಿಯಮಣಿ ತಾ
ನಿದುವೆ ರೇಣುಕ ಪೂತ ಗೀತೆಯು
ಮಧುರ ಜೀವಿಯು ಶಿವನನಾಗಿಪ ಮೂಲ ಮಂತ್ರಾರ್ಥ
ಇದುವೆ ಭೇದಾಭೇದ ಯೋಗವು
ಮುದಲೋಹುವ ಭಕ್ತಗೊಲಿವುದು
ಪಡೆದು ರೇಣುಕ ಗುರುವು ಕುಂಭಜಗೊರೆದ ಸಿದ್ಧಾಂತ || ೩೪ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾರವೇದಾಗಮದ ರೂಪವು
ವೀರ ಶಿವ ಮತ ತತ್ತ್ವ ಪದ್ಧತಿ
ತೋರ ರತ್ನಗಳಿಲ್ಲಿ ಷಟ್‌ಸ್ಥಲ ತರಣಿ ಲಿಂಗೈಕ್ಯ
ಭಾರಿ ಗೋಪ್ಯದ ಮಂತ್ರಚಿಂತಿತ
ವೀರಶೈವರ ಧರ್ಮಗ್ರಂಥವು
ಧೀರರಿಂ ಸಂಸೇವ್ಯಮಾನವಿದೆಂದು ಸಾರುವನು || ೩೫ ||

ಪರಳಿ ವೈದ್ಯೇಶ್ವರನ ಪಾವನ
ಪರಿಸರದಿ ಮೇನ್‌ಕುದುಳೆಯೆಂಬುವ
ಗುರುವು ಲಿಂಗಪ್ಪನ ಮಹಾಜನಗಳ ಸದಾಶೆಯೊಲು
ಹರಸಮರ್ಚನ ವಧಿಕಮಾಸದಿ
ಸರುವ ಧರ್ಮಸಮನ್ವಯದ ಗುರು-
ತರದ ಕಾರ್ಯಕ್ರಮವು ಕಳೆದಿಶ್ವಿಯಲಿ ನಡೆದಿಹುದು || ೩೬ ||

ಸಕ್ಕದದ ನುಡಿಗರಿಮೆಯನು ಗುರು
ಕಿಕ್ಕಿರಿದ ಪಂಡಿತರ ಮಧ್ಯದ-
ಲಕ್ಕರದಿ ಮನಮಿಡಿಯೆ ಬಿತ್ತರಿಸಲ್ಕೆ ತಿರುಪತಿಯೊಳ್
ಸಕ್ಕದದ ವಿದ್ವಾಂಸರೆಲ್ಲರು
ಚೊಕ್ಕ ಮನದಲಿ ಪೂಜ್ಯ ಗುರುಪಾ-
ದಕ್ಕೆ ಸನ್ಮಾನವನು ಸಲ್ಲಿಸಿ ಪತ್ರವರ್ಪಿಸಿದರ್ || ೩೭ ||

ಪೂಜ್ಯ ವಿಶ್ವಾರಾಧ್ಯ ಮೂರ್ತಿಗೆ
ಸಾಜ ಕೋಟಿಯ ಬಿಲ್ವ ದಳಗಳ
ಪೂಜೆಯಂ ಮಾಡಲ್ಕೆ ತುಂಬ ಯಶಸ್ವಿಯಾಗಿಹುದು
ಪೂಜ್ಯನೈವತ್ತನೆಯ ವರ್ಷದ
ಯೋಜಿಸಿದ ವರ್ಧಂತಿ ಸಮಯದ-
ಲೋಜೆಯಿಂ ಸ್ವರ್ಣೋತ್ಸವಂ ಶ್ರಾವಣದಿ ಜರುಗಿಹುದು || ೩೮ ||

ಆಗ ವಿದ್ವದ್ಗೋಷ್ಠಿ ನಡೆದಿಹು-
ದಾಗಮನ ಗುರುಪಂಚಕದ ಮೇ-
ಣಾಗಮಿಸಿದರು ವೀರಶೈವರ್ ದೇಶದೆಲ್ಲೆಡೆಯಿಂ
ಆಗ ಮತಮಾನ್ಯಗಳ ಕುರಿತುಂ
ಸಾಗಿಸಿಹರು ವಿಚಾರ ವಿನಿಮಯ
ಭಾಗಿಯಾದವರೆಲ್ಲರುಂ ಹರ್ಷದಲಿ ಮರಳಿಹರು || ೩೯ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರದಲೀ ಗುರುಚರಿತ್ರವ-
ನೋದುವುಸುರುವ ಕೇಳ್ವ ಸುಜನರಿ-
ಗಾ ದಯಾನಿಧಿಯಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ನೈ
ಮೇದಿನಿಯುಲಿರುವನ್ನೆಗಂ ಕಾಪಾಡುವಂ ಬಿಡದೆ ॥ ೪೦ ॥

ಮುರಬ ಜಡೆಮಠದೊಡೆಯನಾದರು
ಸಿರಿಗುಡೂರಕೆ ಬಂದು ನೆಲಸುತೆ
ಹರಮತವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪುರ
ದಿರುತ ಯೋಗಾನಂದ ತುಂದಿಲ
ನೊರೆದ ನೀ ಕೃತಿಯನು ಜಗದ್ಗುರು ಸತ್ ಪರಂಪರೆಯ ॥ ೪೧ ॥

ಇಂತು ದಶಮಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ಶ್ರೀಕಂಠಾಯನಮಃ

ಏಕಾದಶಾಧ್ಯಾಯ

ಭಾ. ಷ.

ಸೂಚನಾ— ಪರುಷದಿಂದಂಗಸ್ಥಲಗಳಂ
ಪರಿಕಿಸಲು ನಲವತ್ತು ನಾಲ್ಕಿರೆ
ನೆರೆದ ಭಕ್ತರಿಗೊರೆಯುತಿಪ—ಗುರುಚಂದ್ರಶೇಖರನು ॥

ಶೈಲಜಾರಮಣನೆ ಮಹೇಶನೆ
ಲೀಲೆಯಿಂ ತ್ರಿಪುರಗಳ ಗೆಲ್ದನೆ
ಶೂಲಪಾಣಿ ಗಣೇಶ ಷಣ್ಮುಖ ಪಿತನೆ ಪಾವನನೆ
ಕಾಲ ಕಾಲನೆ ಕನಕಗಿರಿ ಶಿಖ—
ರಾಲಯನೆ ಲೋಕೈಕ ವಂದ್ಯನೆ
ಪಾಲಿಪುದು ವಿಶ್ವೇಶಲಿಂಗನೆ ನತಸುರಾಸುರನೆ ॥ ೧ ॥

ಪರಳಿ ಮುಂಬಯಿ ಪೂನ ಸೋಲಾ—
ಪುರವು ಲಾತೂರ್ ಬಾರ್ಸಿ ಕೊಲ್ಲಾ—
ಪುರವು ಚಿಪಳೂನೌಸ ಭೂಸಾವಳವು ಬೆಂಗ್ಳೂರು
ಪುರವು ಗಡಹಿಂಗ್ಲಜವು ನಾಂದೇಡ್
ಮಿರುಪ ಸಾಂಗಲಿ ನಾಗಪುರವದು
ಗುರುವರನ ಸದ್ಬೋಧೆಯಿಂದಂ ಪಾವನಾಗಿಹವು ॥ ೨ ॥

ಪತ್ತು ಐದ್ವರುಷಗಳ ವರೆಗುಂ
ಸತ್ತಮನ ಸಿದ್ಧಾಂತ ಶಿಖಮಣಿ
ಯುತ್ತಮದ ಬೋಧೆಯನು ಜನಗಳ್ ಸೊನ್ನಲಾಪುರದಿ
ಚಿತ್ತಗೊಟ್ಟಾಲಿಸಿದರಲ್ಲದೆ
ಮತ್ತೆ ಪೀಠಾಧೀಶರಾಗಲು
ಸಾತಿಶಯ ವೈಭವದಿ ಕರೆತಂದೊಲ್ದು ಕೇಳಿಹರು ॥ ೩ ॥

ಶ್ರಾವಣಾಷಾಢಗಳ ಮಾಸದ—
ಲಾವಗಂ ಪರ್ವಗಳ ಕಾಲದಿ
ಭಾವಿಸುತ ಧಾರ್ವಾಡ ಕೊಟ್ಟೂರ್ ಗದಗದಲ್ಲದೆಯುಂ
ಆವ ಪ್ರಾಂತದಿ ಚರಿಸುತಿರ್ದಾರು
ಆವ ಪತ್ತನ ದಿರ್ದರುಂ ಸಹ
ದೇವ ರೇಣುಕ ಗೀತೆಯನು ಸಂದರ್ಭವನುಸರಿಸಿ ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ಶಿವಾಗಮಗಳ ಸುಸಾರವು
ಇದು ಶಿವಾದ್ವೈತದ ಪ್ರಮಾಣವು
ಇದುವೆ-ವಿದ್ವದ್ವರರು ಮನ್ನಿಸಿದಂಥ ಗ್ರಂಥಮಣಿ
ಇದು ಮಹಾಗುರು ರೇಣುಕೇಶನ
ಹೃದಯ ಸರಸೀರುಹದ ಗಂಧವು
ಇದುವೆ ನೂರೊಂದು ಸ್ಥಲಾತ್ಮಕವಾದ ಶಿವಶಾಸ್ತ್ರಂ || ೫ ||

ಎಂದುಸರುವರು ಅರಿಯುವಂದದ–
ಲಂದವಾದುಪಮಾನ ಮೂಲಕ
ಸಂದೇಗವು ಏನಿರ್ದರುಂ ಅದನಿಲ್ಲವಾಗಿಸುತ
ಇಂದುಧರ ನನುಭವವ ಬೀರುತ
ಮುಂದಿ ಮೈಮರೆವಂತೆ ಸರಸದಿ
ಚಂದ್ರಶೇಖರ ಸದ್ಗುರುವು ಬೋಧಿಸುವ ತಾನಿಂತು || ೬ ||

ಭಕ್ತ— ಪಿಂಡಸ್ಥಲ

ಹಿಂದೆ ಬಲುಜನುಮಗಳ ಪುಣ್ಯಗ–
ಳಿಂದ ಕಲುಷವು ನಾಶವಾಗಲಿ–
ಕಂಡು ಜೀವನು ಶುದ್ಧವಾಸನೆಯಿಂದ ಕೂಡಿದೊಡೆ
ಕಂದರಿರ ಅದು ಪಿಂಡದಸ್ಥಲ–
ವೆಂದು ಕರೆವರು ಬಳಿಕ ದೇಹಿಯು
ಮುಂದೆ ತಾ ದೇಹಾತ್ಮಗಳ ಸುವಿವೇಕಿಯಾಗಲಿಕೆ || ೭ ||

ಪಿಂಡಜ್ಞಾನಸ್ಥಲ–ಸಂಸಾರಹೇಯಸ್ಥಲ

ಅದುವೆ ಪಿಂಡಜ್ಞಾನವಸ್ಥಲ
ಪದುಳದಿಂದರಿಯುವದು ಕೇಳಿರಿ
ಮೊದಲು ಸಂಸಾರದಲಿ ಹೇಯದ ಬುದ್ಧಿ ಬಂದಿರಲು
ಅದುವೆ ಸಂಸೃತಿ ಹೇಯದಸ್ಥಲ
ಹೃದಯ ಶುದ್ಧಿಯ ಹೊಂದಿ ದೇಹಿಯು
ಮದನ ಮದ ಮರ್ದನನ ಸದ್ಗುರು ದೇವನಂ ಪಡೆವಂ || ೮ ||

ಗುರುಕಾರುಣ್ಯಸ್ಥಲ

ಭವ ವಿಮೋಚನೆಗಾಗಿ ಶಿಷ್ಯನು
ಶಿವನ ದೀಕ್ಷೆಯ ಪೊಂದಿ ಗುರುವಿನ
ತವೆ ಕರುಣ ಸಂಪಾದಿಸಲ್ಕದು ಗುರುಕೃಪಾಸ್ಥಲವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಿರತಂ ಗುರುಭಕ್ತಿಯಿಂದಂ
ಭುವನದಲಿ ಬಿಲ್ಲಮ ನೃಪಾದಿಗ–
ಳವರು ಶಿವಸಾಯುಜ್ಯಮಂ ಪಡೆದಿರುವದಾದರ್ಶಂ ॥ ೯ ॥

ಅಂಗದಲಿ ಗುರುಕೊಟ್ಟ ಲಿಂಗವ
ಪಿಂಗದಲೆ ತಾ ಧರಿಸಿ ಪೂಜಿಸೆ
ಲಿಂಗಧಾರಣವೆಂಬುವಸ್ಥಲ ಭಕ್ತಗೊಪ್ಪುವದು
ಲಿಂಗವನು ವಿಷ್ಣ್ವಾದಿಗಳು ಮೇಣ್
ಲಿಂಗವಂ ಲಕ್ಷ್ಮ್ಯಾದಿ ಶಕ್ತಿಯು–
ರಿಂಗಿತವನವರರಿದು ಧಾರಣ ಮಾಡಿಕೊಂಡಿಹರು ॥ ೧೦ ॥

ಭಸ್ಮಧಾರಣಸ್ಥಲ

ಕುಸುಮ ಶರಹರನಿಂದ ಪುಟ್ಟಿಪ
ಹಸುಗಳೈದರ ಭಸಿತಗಳನುರೆ
ಮಿಸುಪ ದೇಹಕೆ ಧರಿಸುತಿರ್ಪುದು ಭಸ್ಮದಸ್ಥಲವು
ಮುಸಣದೊಳಗಸುವಳಿದ ವಿಪ್ರಗೆ
ಮುಸಣ ಬೂದಿಯು ಸೋಂಕಲಾಕ್ಷಣ
ನೊಸಲಗಣ್ಣನ ಸನ್ನಿಧಿಯ ಸೇರಿದ ಚರಿತ್ರವಿದೆ ॥ ೧೧ ॥

ರುದ್ರಾಕ್ಷಧಾರಣಸ್ಥಲ

ರುದ್ರ ನಯನಗಳಿಂದ ಜನಿಸಿದ
ಛಿದ್ರರಹಿತ ಶಿವಾಕ್ಷಗಳನುಂ
ಭದ್ರವಾಗಿಯೆ ಧರಿಸುವಿಕೆ ರುದ್ರಾಕ್ಷದಸ್ಥಲವು
ಕ್ಷುದ್ರ ಬೇಡನು ಶುನಕಗಳಿಗಾ
ರುದ್ರನಕ್ಷಿಯ ಧರಿಸಿ ಮುಡಿಯಲು
ರುದ್ರಲೋಕದೊಳವನು ಸುಖಿಸಿದನೆಂಬುದಿತಿಹಾಸ ॥ ೧೨ ॥

ಮಂತ್ರಮಾಹಾತ್ಮ್ಯಸ್ಥಲ

ಗುರುಮುಖದೆ ಶಿವಮಂತ್ರವನ್ನುಪಡೆ–
ದರಿತು ಸಂತತ ಜಪಿಸುತಿರುವದು
ಪರಮ ಪಂಚಾಕ್ಷರಿಯ ಮಂತ್ರದ ಜಪದ ಸುಸ್ಥಲವು
ನರಕದಲಿ ಜೀವಿಗಳ ಕಂಡಾ
ವರಮುನಿಯು ಸಾನಂದನಲ್ಲಿಯೆ
ಹರನ ಮನುವುಚ್ಚರಿಸಿ ನಾರಕಿಗಳನು ಪೊರೆದಿಹನು ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತಮಾರ್ಗಕ್ರಿಯಾಸ್ಥಲ

ಸತ್ಯ ಶಿವಸಂಬಂಧಿ ಕಥೆಗಳ
ನಿತ್ಯ ಕೇಳುತ ತಾನು ಕೀರ್ತಿಸಿ
ನಿತ್ಯ ನೆನೆಯುತ ಪಾದಸೇವಿಸಿ ಶಿವನನರ್ಚಿಸುತ
ನಿತ್ಯ ವಂದಿಸಿ ಶಿವನ ಚರಣದಿ
ಸತ್ಯ ದಾಸ್ಯದ ಭಾವವಿರ್ಪುದು
ನಿತ್ಯ ವಾತ್ಮನಿವೇದನಂ ಅದು ಭಕ್ತಮಾರ್ಗಕ್ರಿಯೆ ॥ ೧೪ ॥

ಉಭಯಸ್ಥಲ ತ್ರಿವಿಧ ಸಂಪತ್ತಿಸ್ಥಲ

ಗುರುವಿನಲಿ ಶಿವಲಿಂಗದಲಿ ತಾ
ನಿರುತ ಭಕ್ತಿಯನಿರಿಸಿ ಪೂಜಿಸು–
ತರಿದು ಭೇದವ ಮಾಡದಿರ್ಪುದ ದುಭಯದ ಸ್ಥಲವು
ಗುರುವು ಲಿಂಗವು ಚರರೊಳಗೆ ದಲ್
ಮರೆದು ಭೇದವ ಮಾಡದಿಪ್ಪುದು
ಧರೆಯಲೀ ಮಿಗಿಲಾದ ಮೂಬಗೆ ಸಂಪದಸ್ಥಲವು ॥ ೧೫ ॥

ಪ್ರಸಾದ ಸ್ವೀಕೃತಿಸ್ಥಲ

ತನುವನರ್ಪಿಸಬೇಕು ಗುರುವಿಗೆ
ಮನವನರ್ಪಿಸಬೇಕು ಲಿಂಗಕೆ
ಧನವನರ್ಪಿಸಬೇಕು ಚರನಿಗೆ ಭಕ್ತಲಕ್ಷಣವು
ಘನ ಪದೋದಕವ ಪ್ರಸಾದವ–
ನನುನಯದಲವರಿಂದ ಪಡೆವುದು
ಘನಸುಶೇಷ ಸ್ವೀಕೃತಿಸ್ಥಲವೆಂದು ಪೇಳುವರು ॥ ೧೬ ॥

ತ್ರಿವಿಧ ದಾನಸ್ಥಲ

ದಾನವನು ಗುರುಚರರಿಗನುದಿನ
ನೀನು ಮಾಡಲುಬೇಕು ಶಿಷ್ಯನೆ
ದಾನದ ವಿಚಾರವನು ತಿಳಿಸುವೆವರಿಯುಬೇಕಿಂತು
ದಾನವದು ಸೋಪಾಧಿಯೆಂತಲು
ದಾನವದು ನಿರುಪಾಧಿಯೆಂತಲು
ದಾನಸಹಜವದೆಂದು ಮೂರು ವಿಭಾಗವಾಗಿಹುದು ॥ ೧೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನದಾ ಫಲವನ್ನು ಬಯಸಲು
ದಾನವದು ಸೋಪಾಧಿಯೆನಿಸಿತು
ದಾನಫಲವನು ಬಯಸದಿರೆ ನಿರುಪಾಧಿಯೆನಿಸುವದು.
ದಾನವನು ಕೊಡುವವನು ಶಿವನೇ
ದಾನವಂ ಕೊಂಬುವನು ಶಿವನೇ
ದಾನಿಯಾದವನಿಂತು ಭಾವಿಸೆ ಸಹಜ ದಾನವದು ॥ ೧೮ ॥

ಅಂತು ಭಕ್ತಸ್ಥಲಕೆ ಪೇಳಿದ-
ವಾಂತರ ಸ್ಥಲಗಳನು ಪದಿನೈ-
ದಿಂತು ಪೇಳಿತು ಮುಂದಿನಾ ಮಾಹೇಶನಸ್ಥಲಕೆ
ಹಂತ ಮಾದೊಂಭತ್ತರರಿವನು
ಶಾಂತ ಮನದಿಂದಾಲಿಸೆಂದನು
ಕಂತು ಸಂಹಾರಿಯು ಪದಾಂಬುಜ ನೆನೆದು ಗುರುರಾಯ ॥ ೧೯ ॥

ಮಾಹೇಶ್ವರ ಪ್ರಶಂಸಾಸ್ಥಲ

ಪರಸತಿಗೆ ಪರಧನಕೆ ಸೇರದ
ಹರನ ನಿಂದನೆ ಕೇಳದಿರುತಿಹ
ಪರತರಾಚಾರತ್ವದಿಂ ಶಿವಸುಖವ ಭೋಗಿಸುವ
ಹರಿವಿರಿಂಚಿಯ ಪದವಬಯಸದ
ಪರಹಿತವನುರೆ ಮಾಳ್ಪ ಮಾಹೇ-
ಶ್ವರ ಪ್ರಶಂಸಾಸ್ಥಲವಿದೆಂಬರು ಕೇಳಿ ಭಕ್ತರಿರಾ ॥ ೨೦ ॥

ಲಿಂಗನಿಷ್ಠಾಸ್ಥಲ

ತನುವಚೋ ಮಾನಸಗಳೆಲ್ಲವ
ವಿನುತ ಲಿಂಗಕೆ ಮೀಸಲಿರಿಸುತೆ
ತನಗೆನಿತು ಸಂಕಟಗಳೊದಗಲು ಲಿಂಗದರ್ಚನೆಯ
ಅನುದಿನದಿ ಬಿಡದಿರುವ ನಿಷ್ಠೆಯು
ತನಯ ಶಿಷ್ಯರೆ ಲಿಂಗನಿಷ್ಠಾ
ಯೆನಿಸುವ ಸ್ಥಲವೆಂದು ಶಿವನಾಗಮಗಳೊರೆಯುವವು ॥ ೨೧ ॥

ಪೂರ್ವಾಶ್ರಯ ಮತ್ತು ಸರ್ವಾದ್ವೈತ ನಿರಸನಸ್ಥಲ

ಲಿಂಗನಿಷ್ಠೆಗೆ ಭಂಗ ತರುತಿಹ
ಲಿಂಗರಹಿತಾಶ್ರಮ ಜನಂಗಳ
ಸಂಗವನು ತೊರೆಯುವದು ಪೂರ್ವಾಶ್ರಯದ ನಿರಸನವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗ ಮಾತ್ರವು ಪೂಜ್ಯವೆನ್ನುವ
ಲಿಂಗ ಪೂಜಕ ತಾನದೆಂಬುವ
ಮಂಗಲದ ಭಾವನೆಯು ಸರ್ವಾದ್ವೈತ ನಿರಸನವು ॥ ೨೨ ॥

ಆಹ್ವಾನ ನಿರಸನಸ್ಥಲ

ಇಷ್ಟಲಿಂಗಾನಂದ ಲೋಲನು
ಕಷ್ಟ.ಹರನಾಹ್ವಾನ ಬಿಡುವುದು
ಶಿಷ್ಟ ವಾದಾಹ್ವಾನ ನಿರಸನದಸ್ಥಲಂ ನೋಡಾ
ಅಷ್ಟತನುಗಳು ಕಾರ್ಯರೂಪವು
ನಷ್ಟವಿಲ್ಲವು ಶಿವನಿಗೆಂದಿಗು
ಶ್ರೇಷ್ಠ ಭೇದಾಭೇದ ವಿರಹಿತನಾಗಿ ಶಿವನಿಹನು ॥ ೨೩ ॥

ಅಷ್ಟಮೂರ್ತಿ ನಿರಸನಸ್ಥಲ

ಧರೆಯು ವಾರಿಯು ತೇಜಮರುದಂ-
ಬರವು ವಹ್ನಿಯು ರವಿಶಶಿಗಳಿವು
ಹರನ ತನುವಿರೆ ಸುಸ್ವರೂಪಗಳೆನಿಸವಾ ಶಿವಗೆ
ಹರನ ಲೀಲಾ ಮಾತ್ರವಾಗಿವೆ.
ಹರನ ಕಾರ್ಯದ ರೂಪವೆನಿಸಿವೆ
ಹರನ ಲಕ್ಷಣವಲ್ಲವೆಂಬುದು ನಿರಸನಸ್ಥಲವು ॥ ೨೪ ॥

ಸರ್ವಗತ್ವ ನಿರಸನಸ್ಥಲ

ಎತ್ತ ನೋಡಿದಡತ್ತ ಶಿವನಿರೆ
ಸುತ್ತ ಮುತ್ತಲು ಹುಡುಕಬಾರದು
ಮತ್ತೆ ತನ್ನಯ ಲಿಂಗದೊಳಗಾಧಾರನಾಗಿರ್ದು
ಚಿತ್ತಜಾರಿಯು ಪೂಜೆಗೊಳ್ಳುತ-
ಲಿತ್ತ ಗುರುಜಂಗಮರೊಳಿರುವೆಂ-
ಬುತ್ತ ಚರಿಸಲ್ ಸರ್ವಗತ್ವದ ನಿರಸನಸ್ಥಲವೈ ॥ ೨೫ ॥

ಶಿವಜಗನ್ಮಯಸ್ಥಲ

ಶರಧಿಯೊಳಗುದಯಿಸಿದ ತೆರೆಗಳು
ಶರಧಿಯಿಂ ಬೇರಾಗಲಾರವು
ಪರಶಿವನಲುದಯಿಸಿದ ಜಗವಿದು ತತ್ಸ್ವರೂಪವಲಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿತು ಜಗವಿದು ಸತ್ಯವೆಂಬುದ
ಮರೆಯದಿರ್ಪುದು ಶಿವಜಗನ್ಮಯ
ಪರತರಸ್ಥಲವೆಂದು ಕರೆಯುವರಯ್ಯ ಬಲ್ಲವರು ॥ ೨೬ ॥

ಭಕ್ತದೇಹಿಕಸ್ಥಲ

ಸಕಲ ಲೋಕಕೆ ಸಕಲ ಜೀವಕೆ
ಸಕಲ ಸಕಲಕೆ ಶಿವನೆ ಕಾರಣ
ಸಕಲ ಭಕ್ತರ ಹೃದಯದಿರುವನು ಶಿವ ವಿಶೇಷತಃ
ಭಕುತರುರು ಹೃದ್ದೇಶದಿರೆ ಶಿವ
ಭಕುತ ದೇಹಿಕವೆಂಬುವ ಸ್ಥಲ
ಕುತುಹಲವಲಿಪ ವೀರಮಾಹೇಶ್ವರಗೆ ಸಲ್ಲುವದು ॥ ೨೭ ॥

ಪ್ರಸಾದಿಸ್ಥಲ

ಜಗವು ಶಿವಮಯವೆಂದು ನಂಬುತೆ
ಪಗಲು ಇರುಳುಂ ಈ ಪ್ರಪಂಚವ
ಸೊಗಸಿನಾ ಶಿವರೂಪದಿಂ ಭಾವಿಸುವ ಮಾಹೇಶಂ
ಬಗೆಯಲಾತನು ಶೇಷಿಯೆನಿಸುವ
ನಘರಹಿತನವನು ಪ್ರಸಾದಿಯು
ನಗಜೆಯುರಸನ ಶೇಷಮಂ ಸೇವಿಸುವನಾದುದರಿಂ ॥ ೨೮ ॥

ಮನಸಿಜಾರಿಯ ಶೇಷದಿಂದಲಿ
ಮನವು ನಿರ್ಮಲವಾಗಿ ಸುಕೃತವು
ಕೊನರುವದು ಸಂಸಾರ ಕಲ್ಮಷ ತಾನೆ ತೊಲಗುವದು
ಅನಘ ಶೇಷವ ಕೊಂಡು ಶೇಷಿಯು
ಚಿನುಮಯನು ತಾನಾಗಿ ಬಿಡುವನು
ವಿನಯವಂತರೆ ಇದು ಪ್ರಸಾದಿಸ್ಥಲವು ಯೆನಿಸುವದು ॥ ೨೯ ॥

ಸಂತ ಶೇಷಿಗವಾಂತರಸ್ಥಲ-
ವೆಂತೆನಲು ವಿಳೆಂದು ಪೇಳ್ವರು
ಚಿಂತೆಯನು ಮಿಗೆ ಕಳೆದು ಶಾಂತನ ಮಾಡುತಿಪ್ಪೈಸೆ
ಕಂತುನಾಶಕ ಶೇಷಮೆಂಬಹು
ಶಾಂತನಾಗುತ ಪಡೆವತೆರದೆ ಮ-
ಹಂತರೆನಿಸುವ ಗುರುಚರರ್ಕಳ ಶೇಷ ಕೊಂಬುವದು ॥ ೩೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರು ಮತ್ತು ಲಿಂಗ ಮಾಹಾತ್ಮ್ಯಸ್ಥಲ

ಹರಗೆ ಗುರುವಿಗೆ ಭೇದವೆಣಿಸದೆ
ಗುರುವೆ ತಾ ಶಿವನೆಂದು ಬಗೆವುದು
ಗುರುವರನ ಮಾಹಾತ್ಮ್ಯೆಯಸ್ಥಲವೆಂದು ತಿಳಿಯುವದು
ಹರನು ಲಿಂಗಾಕೃತಿಯ ತಳೆದಿರೆ
ಗುರುಮುಖದಿ ಲಿಂಗವನು ತಿಳಿವುದು
ಪರಮಲಿಂಗ ಮಹತ್ತ್ವವ ಸ್ಥಲವೆಂದು ಭಾವಿಪುದು ॥ ೩೧ ॥

ಜಂಗಮ ಮಹಾತ್ಮ್ಯೆಯಸ್ಥಲ

ಜಂಗಮಗೆ ಶಿವಯೋಗಿಯೆಂಬರು
ಲಿಂಗದಾನನ ಜಂಗಮಾರ್ಯನು
ಲಿಂಗ ಗುರು ಜಂಗಮರ ಭೇದವ ಮಾಡದಲೆ ಸತತ
ಜಂಗಮನು ಶಿವನೆಂದು ಭಾವಿಸಿ
ತುಂಗ ಭಕ್ತಿಯನಿರಿಸಿ ನಡೆವುದು
ಜಂಗಮನ ಮಹಾತ್ಮ್ಯೆಯಸ್ಥಲವಿದುವೆಯೆನ್ನುವದು ॥ ೩೨ ॥

ಭಕ್ತ ಮಾಹಾತ್ಮ್ಯಸ್ಥಲ

ಗುರುವು ಲಿಂಗವು ಚರನು ಧರೆಯೊಳು
ಹರನ ಭಕ್ತನ ಕತದಿ ಮೆರೆವರು
ಪರಿಕಿಸಲು ತದ್ಭಕ್ತನಿಂದಲೆ ಶಿವಪ್ರಕಾಶಿಸುವಂ
ಹರನ ಸಿರಿಮನೆಯೊಳಗೆ ಭಕ್ತನು
ಗುರುಚರರ ಮತಗಳಲಿ ಭಕ್ತನು
ಮೆರೆವನದರಿಂ ಭಕ್ತ ಮಾಹಾತ್ಮ್ಯಸ್ಥಲಂ ಪ್ರೋಕ್ತಂ ॥ ೩೩ ॥

ಶರಣ ಮಾಹಾತ್ಮ್ಯಸ್ಥಲ

ಶಿವನು ತಾ ಗುರುಲಿಂಗ ಜಂಗಮ
ರಿವರ ರೂಪವ ತಳೆದು ಮಹಿಯೊಳ-
ಗವಿರತಂ ಸರ್ವರನು ಸಲಹುವನೆಂದು ಆ ಶಿವಗೆ
ಸವಿನಯದೆ ಶರಣೆಂದು ತನ್ನಯ-
ನವನು ಸಲ್ಲಿಸಿ ಪೂತನಾದೊಡೆ
ತವೆ ಶರಣ ಮಾಹಾತ್ಮ್ಯದ ಸ್ಥಲವೆಂದು ತಿಳಿಯುವದು ॥ ೩೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಾದ ಮಾಹಾತ್ಮ್ಯಸ್ಥಲ

ಆವ ಕುಲದವನಿರಲಿ ಜಗದಲಿ
ಭಾವಜಾರಿಯ ಸುಪ್ರಸಾದವ
ಸೇವಿಸಲು ನಿಜಭಕ್ತಿ ಮುಕ್ತಿಗಳೆಲ್ಲ ದೊರಕುವವು
ಆವಗಂ ಕಿಂಕರತೆಯಿಂದಲಿ
ದೇವನಾ ಶೇಷವನು ಪಡೆವುದು
ಭಾವಿಸಲಿಕಿದುವೆ ಪ್ರಸಾದ ಮಹಾತ್ಮ್ಯೆಯಸ್ಥಲವು || ೩೫ ||

ಹಲವು ದೈವವ ನಂಬದಲೆ ಕೊರ-
ಳೊಳಗೆ ಕಟ್ಟಿದ ಲಿಂಗ ಶೇಷವ
ತಿಳಿದು ಸೇವಿಪುದು ಪ್ರಸಾದಿಯ ಮುಖ್ಯ ಲಕ್ಷಣವು
ಬಳಿಕ ಶೇಷಿಯು ಪ್ರಾಣಲಿಂಗ
ಸ್ಥಲವ ನೇರುವನವಗೆ ಪಂಚ
ಸ್ಥಲಗಳಂ ಪೇಳುವರು ಶಿವ ತತ್ತ್ವವನು ಬಲ್ಲವರು || ೩೬ ||

ವರ ಭಕುತ ಮಾಹೇಶ ಶೇಷಿಗ-
ಳರಿತು ಸತ್ಕ್ರಿಯೆ ಮಾಡುತಿರ್ಪರು
ಪರಣಲಿಂಗಿಯು ಶರಣನೈಕ್ಯ ಜ್ಞಾನಯೋಗವನು
ಅರಿಯುತಾಚರಿಸುವರು ತಪ್ಪದೆ
ಪರಿಕಿಸಲು ವರ ವೀರಶೈವರು
ಮಿರುಪ ಕ್ರಿಯೆಯ ಜ್ಞಾನವೆರಡನು ಮನ್ನಿಸುತ್ತಿಹರು || ೩೭ ||

ಪ್ರಾಣಲಿಂಗಿಸ್ಥಲ

ಅರಿಯೆ ಪ್ರಾಣಾಪಾನ ವಾಯುಗ-
ಳೆರಡರಾ ಸಂಘಟನದಿಂದಂ
ಮೆರೆವನಾಭಿಯ ಕಂದಮಧ್ಯದಲಾವ ಜ್ಯೋತಿಯದು
ನಿರತ ಬೆಳಗುವದದಕೆ ಮುನಿಗಳು
ಪರಣ ಲಿಂಗವದೆಂದು ಪೇಳ್ವರು
ಪರಣಲಿಂಗಸ್ಥಲವು ತಾನಂತರ್ಮುಖಾತ್ಮಕವು || ೩೮ ||

ಪ್ರಾಣಲಿಂಗಾರ್ಚನಾಸ್ಥಲ

ಕ್ಷೋಣಿಯೊಳು ತಾ ಪ್ರಾಣಲಿಂಗಿಯು
ಮಾನಸಿಕ ಶಿವಪೂಜೆ ಮಾಳ್ಪನು
ನ್ಯೂನವಿಲ್ಲದ ಸುಗುಣ ವಸ್ತುಗಳಿಂದಲರ್ಚಿಸುವಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನದಿಂದಲಿ ಹೃದಯ ಕಂಜದೊ–
ಳೇನು ಪೇಳ್ವುದು ಪರಣಲಿಂಗವ
ತಾನು ಸೋಽಹಂಭಾವದಿಂ ಪರಿಪೂಜಿಪಸ್ಥಲವು ॥ ೩೯ ॥

ಶಿವಯೋಗ ಸಮಾಧಿಸ್ಥಲ

ಆರು ಚಕ್ರಗಳೇರಿ ಸೂಕ್ಷ್ಮ
ದ್ವಾರದಲಿ ನೆರೆಸೇರಿ ಶೇಜಿಯು
ಚಾರು ಸಾಸಿರ ದಳದ ಪದುಮದ ಶಿವನ ತಾಣದಲಿ
ಭೂರಿ ಲಿಂಗಾನಂದ ಸೌಖ್ಯವ
ವೀರಭಾವದಿ ಪಡೆದನಾದೊಡೆ
ಮಾರಹರ ಯೋಗದ ಸಮಾಧಿಸ್ಥಲವಿದೆನ್ನುವರು ॥ ೪೦ ॥

ಲಿಂಗನಿಜಸ್ಥಲ

ಲಿಂಗವದು ಪರಬ್ರಹ್ಮರೂಪವು
ಲಿಂಗವದು ಸಚ್ಚಿತ್ಸುಖಾತ್ಮಕ
ಲಿಂಗದಲಿ ಜಗವುದಯಿಸುತ ಬಾಳುತ್ತ ಲಯಿಸುವದು
ಲಿಂಗವದು ಶಿವಶಕ್ತಿ ಸಂಪುಟ
ಲಿಂಗದನುಸಂಧಾನದಿರ್ಪುದು
ಮಂಗಲಪ್ರದಪಾದ ಲಿಂಗದ ಸ್ವೈಜದ ಸ್ಥಲವು ॥ ೪೧ ॥

ಅಂಗಲಿಂಗಸ್ಥಲ

ಅಂಗನೆಂದರೆ ಜೀವನಾತನು
ಲಿಂಗವೆಂದರೆ ಶಿವನು ಕಾಣಾ
ಲಿಂಗವಂಗಗಳೆರಡು ಬೀಜಾಂಕುರ ನ್ಯಾಯದೊಲು
ಲಿಂಗವದು ಪರಮುಕ್ತಿರೂಪವು
ಲಿಂಗದಿ ಪ್ರಾಣವನು ಬೆರಸಲಿ–
ಕಂಗಲಿಂಗಸ್ಥಲವದಾದುದು ಪರಣಲಿಂಗಿಯಲಿ ॥ ೪೨ ॥

ಮಿಗಿಲುನೇಹದಿ ಪರಣಲಿಂಗಿಯು
ನಗಜೆಯಾಣ್ಮನ ಅರಿವಿನಿಂದಲಿ
ಸೊಗಯಿಸುವ ಶರಣನಸ್ಥಲವನ್ನು ಪೊಂದುವನು
ಬಗೆಯಲಾತಗೆ ಧರ್ಮಭೇದದಿ
ಸೊಗಸಿನಿಂದಲಿ ನಾಲ್ಕು ಭೇದವ
ಜಗವರಿಯೆ ಪೇಳಿಹರು ನಮ್ಮಯ ಧರ್ಮದಾಚಾರ್ಯರ್ ॥ ೪೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣಸ್ಥಲ

ಶರಣನೆಂದೊಡೆ ಜಗವ ಕಾಯುವ
ಹರಗೆ ಬೇಕಾದವನು ಶರಣಗೆ
ಕರದ ಲಿಂಗವು ಪತಿಯು ತಾನೆಯೆ ಸತಿಯು ಎನಿಸುವನು
ಗರತಿ ನಾರಿಯು ಪರಪುರುಷನನು
ಮರೆದು ನೋಡದ ತರದಿ ಶರಣಂ
ಕರದ ಲಿಂಗದ ಹೊರತು ಪರದೈವವನು ಲೆಕ್ಕಿಸನು ॥ ೪೪ ॥

ತಾಮಸ ನಿರಸನಸ್ಥಲ

ಜ್ಞಾನದೊಳಗಾ ತಮದ ಗುಣಗಳು
ಮಾನವನ ಮನಕಂಟಿಕೊಂಡರೆ
ಜ್ಞಾನಿಯೆನಿಸನು ಶರಣನೆನಿಸನು ಯೋಗ್ಯನೆನಿಸನಲಾ
ಹೀನ ಗುಣಗಳ ತೊರೆದು ನಿರ್ಮಲ
ಜ್ಞಾನಯೋಗದಿ ಸತ್ತ್ವಗುಣಗಳ
ನೂನವಿಲ್ಲದೆ ಪಡೆಯೆ ತಾಮಸ ನಿರಸನಸ್ಥಲವು ॥ ೪೫ ॥

ನಿರ್ದೇಶಸ್ಥಲ

ಶ್ರೀ ಗುರುವಿನುಪದೇಶದಿಂದಂ
ಬೇಗ ಸಂಸೃತಿ ತಮೋಭಾವವು
ಪೋಗಿ ಶಿವನಜ್ಞಾನವದು ಕೈಸಾರಲಾ ಶರಣಂ
ಯೋಗಿಯಾಗಿಪ ಗುರುವಿನಿಂಭವ-
ರೋಗವದು ಸರಿಯಲ್ಕೆಯರಿವನು
ರಾಗದಿಂದನುಭವಿಸುವಂ ನಿರ್ದೇಶದ ಸ್ಥಲದೊಳ್ ॥ ೪೬ ॥

ಶೀಲ ಸಂಪಾದನಸ್ಥಲ

ಶಿವನ ಭಕ್ತಿಯು ಶಿವನ ವ್ರತವುಂ
ಶಿವನ ಪೂಜೆಯು ಶಿವಧ್ಯಾನವು
ಶಿವಜ್ಞಾನವು ಶಿವನ ಯೋಗವು ಶಿವನ ಕರ್ಮಗಳು
ಶಿವನ ಕುರಿತಾ ಜಪತಪಂಗಳು
ಶಿವನನುಭವದ ಗೋಷ್ಠಿಗಳ ಕೇಳ್ವುದು
ಭುವನದಲಿ ಶಿವಶರಣಗಿವುಗಳು ಶೀಲವೆನಿಸುವವು ॥ ೪೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತ ಶಿವನೊಳಗೈಕ್ಯವಾಗಲು
ಮುಕ್ತನೆಂಬಭಿಧಾನ ಪಡೆವನು
ಮುಕ್ತನಾದವಗಾವ ಜಂಜಡವಿಲ್ಲವೈ ತಿಳಿಯೆ
ಶಕ್ತಿಯದು ಕೆಳಮೊಗಲಿಳಿವುದು
ಭಕ್ತಿಯದು ಮೇಲ್ಮೊಗದಲೇರ್ವುದು
ಶಕ್ತಿಭಕ್ತಿಗಳೊಂದುಗೂಡಲು ಮುಕ್ತಿಯೆನಿಸುವದು ॥ ೪೮ ॥

ಐಕ್ಯಸ್ಥಲ

ನಿರುಪಮಾನಂದೈಕ್ಯನೆನಿಪನಿ–
ಗೊರೆದವಾಂತರ ನಾಲ್ಕು ತಾಣಗ–
ಳರುಪುವೆವು ನಿಮಗೀಗ ಲಾಲಿಪುದಯ್ಯ ಭಕ್ತರಿರ
ಧರೆಯು ಶಿವಮಯವೆಂದು ಭಾವಿಸಿ
ನಿರುತ ತನ್ನಯ ಚಿತ್ತದಲಿಸಲೆ
ಧರಿಸಿಕೊಂಡಿಹನವನು ಮುಕ್ತನು ಯೋಗಿಯೆನಿಸುವನು ॥ ೪೯ ॥

ಆಣವಾದಿಕ ಮಲಗಳಿಲ್ಲದ
ಜಾಣರಲಿ ಬಲುಜಾಣನಿವನೈ
ಸ್ಥಾಣುವೇ ತಾನಾಗಿ ಮರೆವನು ದೇಹವಿರ್ದ್ದರೆಯು
ಪ್ರಾಣದೊಳು ಭಾವಿಸುತ ಪೂಜೆಯ
ಮಾಣದನುದಿನ ಮಾಡುತಿರುವನು
ಕ್ಷೋಣಿಯನು ಶಿವನೆಂದು ನೋಳ್ಪವನೈಕ್ಯನೆನಿಸುವನು ॥ ೫೦ ॥

ಆಚಾರ ಸಂಪತ್ತಿಸ್ಥಲ

ನಡೆಯುವಾಗಲು ನುಡಿಯುವಾಗಲು
ಪಿಡಿಯುವಾಗಲು ಕುಡಿಯುವಾಗಲು
ಕೊಡುವ ಕೊಳ್ಳುವ ಕಾಲದಲಿ ಮೇಣ್ ಮಲಗಿಕೊಂಡಿರಲು
ಮೃಡನ ಪೂಜಾಧ್ಯಾನವಲ್ಲಿಯೆ
ದೃಢದಲೈಕ್ಯತೆ ಪೊಂದಿಯಿಪ್ಪುದು
ಪೊಡವಿಯಲಿ ಆಚಾರ ಸಿರಿಯಸ್ಥಲವಿದೆನ್ನುವರು ॥ ೫೧ ॥

ಏಕಭಾಜನ–ಸಹಭಾಜನಸ್ಥಲ

ಬೇಕು ಬೇಡೆಂಬಾಸೆಗಳ ಭವ–
ಶೋಕವನು ನೆರೆನೀಗಿ ದೈಕ್ಯನು
ಲೋಕವಿದು ಶಿವರೂಪವೆಂಬುವ ಭಾವ ತಳೆಯಲ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕಭಾಜನದ ಸ್ಥಲಾತ್ಮನು
ಲೋಕದೊಡೆಯನು ಗುರುವು ಶಿಷ್ಯನು
ಲೋಕದೊಳಗೊಂದೆಂಬುದದು ಸಹಭಾಜನಸ್ಥಲವು ॥ ೫೨ ॥

ಆದರದಲೀ ಗುರುಚರಿತ್ರವ-
ನೋದುವುಸುರುವ ಕೇಳ್ವಸುಜನರಿ-
ಗಾದಯಾಮಯನಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿ ಭಾಗ್ಯವ ಕರುಣಿಸುವನ್ನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂಬಿಡದೆ ॥ ೫೨ ॥

ಮುರಬ ಜಡೆಮಠದೊಡೆಯನಾದರು
ಸಿರಿಗುಡೂರದಿ ಬಂದು ನೆಲಸುತೆ
ಹರಮತವ ಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪ್ಪುರ-
ದಿರುತ ಯೋಗಾನಂದ ತುಂದಿಲ-
ನೊರೆದನೀ ಕೃತಿಯನು ಜಗದ್ಗುರು ಸತ್-ಪರಂಪರೆಯ ॥ ೫೪ ॥

ಇಂತು-ಏಕಾದಶಾಧ್ಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ಮಹಾಲಿಂಗಾಯನಮಃ

ದ್ವಾದಶಾಧ್ಯಾಯ

ಭಾ. ಷ.

ಸೂಚನಾ-ಕುಂಗ ಗುರುಪ್ಪೈವತ್ತುಯೇಳರ
ಲಿಂಗದ ಸ್ಥಲಗಳ ವಿಚಾರದ
ಸಂಗತಿಯ ಭಕ್ತರ ಕದಂಬಕೆ ನಲಿದು ಬೋಧಿಸಿದಂ ||

ಪೂಜಿಸಲಿ ! ಜಡದೇಹಿ ಯಲ್ಲವು
ಬಾಜಿಸಲಿ ! ನಾದಕ್ಕೆ ಮಿಕ್ಕಿಹೆ
ಸಾಜ ಬಣ್ಣಿಸಲಿಕ್ಕೆ ಶಬುದಕೆ ಸಿಲುಕದಂತಿರುವೆ
ಮೂಜಗವ ತುಂಬಿದ್ರುಽ ಮೀರಿಹೆ !
ಸೋಜಿಗದ ಮೂರುತಿಯೆ ನತಸುರ
ಭೂಜ ನಿನ್ನನದಾವ ಬಗೆಯಲಿ ಬಣ್ಣಿಪ್ಪುದು ವಿಭುವೆ || ೧ ||

ಭಕ್ತ-ದೀಕ್ಷಾಗುರುಸ್ಥಲ

ಅಂಗದ ಸ್ಥಲಗಳನು ಪೇಳ್ದೆವು
ಲಿಂಗದ ಸ್ಥಲಗಳನು ಲಾಲಿಸಿ !
ಲಿಂಗಭಕ್ತನ ಲಿಂಗದಸ್ಥಲಗಳನು ಆರುಪ್ಪುವೆವು
ಅಂಗಚಾರಿಯ ದೀಕ್ಷೆಯಃ ಗುಗು
ಪುಂಗವನು ತಾಗೈದು ಮಲಗಳ
ಹಿಂಗಿಸಲು ದೀಕ್ಷಾಗುರುಸ್ಥಲವೆಂದು ತಿಳಿಯುವದು || ೨ ||

ಶಿಕ್ಷಾಗುರು-ಜ್ಞಾನಗುರುಸ್ಥಲ

ಶಿವನ ದೀಕ್ಷೆಯ ಗೈದ ಸದ್ಗುರು
ಭವ ವಿಮೋಚನೆಗಾಗಿ ಶಿಷ್ಯಗೆ
ಶಿವನ ತತ್ತ್ವವ ಬೋಧಿಸಲು ಶಿಕ್ಷಾಗುರುಸ್ಥಲವು
ರವಿಯು ತಿಮಿರವ ಕಳೆವ ತೆರದಲಿ
ಭುವನದೊಳಗಜ್ಞಾನತಮವನು
ಜವದಿ ಕಳೆಯೆ ಜ್ಞಾನ ಗುರುವೆಂದವನ ಪೇಳಿಹರು || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ರಿಯೂಲಿಂಗಸ್ಥಲ

ಪರಮ ಪರತರ ಪರಬ್ರಹ್ಮವು
ಧರೆಯೊಳದು ಸರ್ವರಿಗೆ ಸುಖವನು
ಕರುಣಿಸಲು ಸತ್ಕ್ರಿಯೆಯು ಲಿಂಗಾಕೃತಿಯ ತಾಳಿಹುದು
ಸುರನರರು ಮುನಿಜನಗಳಿಂದಲಿ
ನಿರುತ ಪೂಜೆಯ ಕೊಂಡು ಸಿದ್ಧಿಯ
ವರವ ಕೊಡುವದರಿಂದ ಸತ್ಕ್ರಿಯೆ ಲಿಂಗವೆನಿಸುವದು ॥ ೪ ॥

ಭಾವಲಿಂಗಸ್ಥಲ

ಭಾವವದು ಶಿವನಿರ್ಪಭವನವು
ಭಾವವಿರದಿರೆ ದೇವನಿಲ್ಲವು
ಭಾವಜಾರಿಯು ನಿತ್ಯತೃಪ್ತನಖಂಡನಾಗಿಹನು
ಭಾವದಲಿ ಶಿವನನ್ನು ಭಾವಿಸಿ
ಭಾವ ಕುಸುಮಗಳಿಂದ ಯಜಿಪುದು
ಭಾವಲಿಂಗದ ಸುಸ್ಥಲಂ ನೀವುಗಳು ಮರೆಯದಿರಿ ॥ ೫ ॥

ಕಲ್ಲು ಕಟ್ಟಿಗೆ ಮಣ್ಣು ಲಿಂಗಗ-
ಳಲ್ಲಿ ಪೂಜೆಯದಲ್ಪನೆನಿಪಗೆ
ಸಲ್ಲುವದು ಬಹಿರಂಗ ಲಿಂಗದ ಪೂಜೆಯೆನಿಸುವದು
ಬಲ್ಲ ಶಿವಯೋಗಿಗಳು ಎಂದಿಗು
ಕಲ್ಲ ಲಿಂಗವ ಪೂಜಿಸದೆ ತ-
ನ್ನಲ್ಲಿ ಭಾವದ ಲಿಂಗವನೆ ಸಂಪೂಜಿಸುತ್ತಿಹರು ॥ ೬ ॥

ಜ್ಞಾನಲಿಂಗಸ್ಥಲ

ಕರದ ಲಿಂಗ ಸ್ಥೂಲವೆಂಬರು
ಮಿರುಪ ಕ್ರಿಯೆಯಾ ಪೂಜೆ ನಿತ್ಯದಿ
ದೊರೆಯುತಿರ್ಪುದು ಸೂಕ್ಷ್ಮವೆಂದರೆ ಪ್ರಾಣಲಿಂಗವದು
ದೊರೆವುದದರೊಳು ಭಾವನಿರ್ಮಲ
ವರಿಯೆ ತಾ ಸುಜ್ಞಾನ ಲಿಂಗದಿ
ಹರನ ಅರಿವು ಪ್ರಾಪ್ತವಾಗುವದೆಂದು ನಂಬುವದು ॥ ೭ ॥

ಸ್ವಸ್ಥಲ

ಚರನ ಸ್ವಸ್ಥಲವಿಂತು ತಿಳಿವುದು
ಹರನ ಲಿಂಗವ ಧರಿಸಿ ವಿಷಯವ
ತೊರೆದು ಮೋಹವನಳಿದು ಪರಮಾನಂದದಿಂದವನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರನ ಜ್ಞಾನದಿ ಮೈಯ ಮರೆಯುತ
ಮರೆಯದಲೆ ಭಿಕ್ಷಾನ್ನ ಸೇವಿಸಿ
ನರರ ಸಂಗವ ತೊರೆದು ತಾನೇಕಾಂತದಲ್ಲಿಹನು ॥ ೮ ॥

ಚರ–ಪರಸ್ಥಲ

ಕಾಮಕೋಪಾದಿಗಳನಳಿಯುತ
ಭೂಮಿಯಲಿ ಸಂಚಾರಗೈವ
ಸ್ವಾಮಿಯಾಗಿಪ ಜಂಗಮನ ಚರನೆಂದು ಕರೆಯುವರು
ಸೋಮಚೂಡನ ಭಕ್ತರನು ಸು–
ಪ್ರೇಮದಿಂ ಪರಿಕಿಸುತಲನುದಿನ
ಕಾಮಿತಾರ್ಥವನೀವನವ ಪರಜಂಗಮಂ ಕಾಣಾ ॥ ೯ ॥

ಮಾಹೇಶ–ಕ್ರಿಯಾಗಮಸ್ಥಲ

ಬಳಿಕ ಮಾಹೇಶನಿಗೆ ಲಿಂಗ–
ಸ್ಥಲಗಳವು ನವವಿಧಗಳಿರುವವು
ತಿಳಿಸುವೆವು ಅವುಗಳನು ನೀವುಗಳರಿಯುತಾಚರಿಸಿ
ತಿಳಿಯಲಾ ಶಿವಯೋಗಿವರ್ಯನು
ಬೆಳಗುವಾಗಮದ ಪ್ರಮಾಣವ
ತಿಳಿಯುತುಂ ಶಿವಪೂಜೆ ಮಾಳ್ಪ ಕ್ರಿಯಾಗಮಸ್ಥಲದಿ ॥ ೧೦ ॥

ಭಾವಾಗಮಸ್ಥಲ

ಭಾವ ಪೂರ್ಣತೆಯಿಂದ ಯೋಗಿಯು
ದೇವನವನಾನೆಂಬ ಭಾವದೊ–
ಳಾವಗಂ ಪೂಜಿಸಲು ಶಿವ ತಾನಾಗಿ ಸುಖಿಸುವನು
ಭಾವವಿಲ್ಲದೆ ಪೂರ್ಣನಾಗನು
ಭಾವಜಾರಿಯ ಕಾಣಲಾರನು
ದೇವಭಾವನೆಯಹುದೆ ಭಾವಾಗಮದ ಸುಸ್ಥಲವೈ ॥ ೧೧ ॥

ಜ್ಞಾನಾಗಮಸ್ಥಲ

ಜ್ಞಾನವಿಲ್ಲದ ಕರ್ಮವಾದರೊ
ಮಾನವನ ಸಂಸೃತಿಗೆ ಮೂಲಂ
ಜ್ಞಾನಕರ್ಮಗಳೆರಡು ಮುಕ್ತಿಗವಶ್ಯವಾಗಿಹವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀನು ಸುಜ್ಞಾನದಲಿ ಕರ್ಮವ
ನೂನವಿಲ್ಲದೆ ಗೈದೆಯಾದೊಡೆ
ಜ್ಞಾನಿಯಾಗುವೆ ಕರ್ಮ ಬೀಜವು ಸುಟ್ಟು ಪೋಗುವದು ॥ ೧೨ ॥

ದೀಪವಿಲ್ಲದೆ ಗೃಹದ ತಿಮಿರಂ
ಲೋಪವಾಗದ ತೆರದಿ ಮನುಜಗೆ
ಗೋಪತಿಯ ವಾಹನನ ಶಿವನ ಜ್ಞಾನವಿಲ್ಲದಿರೆ
ಪಾಪ ಕತ್ತಲೆಯಲ್ಲಿ ಜೀವನು
ತಾಪದಿಂ ಕುದಿಕುದಿದು ಭವದಾ-
ಲಾಪದಲಿ ತೊಳಲುವನು ತಪ್ಪದೆ ಜನ್ಮಜನ್ಮದಲಿ ॥ ೧೩ ॥

ಸಕಾಯಸ್ಥಲ

ಮರದ ಕಟ್ಟಿಗೆಯಿಂದನಲವು
ದೊರೆವ ಹಾಗೆಯೆ ಯೋಗಿಗಾದರು
ಶರಿರದಿಂದಲೆ ಸಕಲ ಕ್ರಿಯೆಗಳು ಸಾಧ್ಯವಾಗುವವು
ಪರಮನಾದರು ಮೂರ್ತಿರೂಪದೆ
ನಿರುತ ಪೂಜೆಯಗೊಂಬ ತೆರದಲಿ
ಶರಿರ ಧರಿಸಿಯೆ ಯೋಗಿಯಾದರು ಚರಿಸುತಿಹನೈಸೆ ॥ ೧೪ ॥

ಅಕಾಯಸ್ಥಲ

ಶರಿರದಿಂದಲೆ ಜಪತಪಂಗಳು
ಶರಿರದಿಂದಂ ಜ್ಞಾನವೆಲ್ಲವು
ಶರಿರದಿಂದಲೆ ಭೋಗ ಮೋಕ್ಷಾದಿಗಳು ಲಭಿಸುವವು
ಶರಿರದಭಿಮಾನವನು ನೀಗಿದ
ಪರಮಯೋಗಿಗೆ ದೇಹವಿರ್ದೊಡೆ
ಧರೆಯೊಳೀತನ ಕಾಯವೆ ಅಕಾಯವದು ಎನಿಸುವದು ॥ ೧೫ ॥

ಪರಕಾಯಸ್ಥಲ

ಕಾಯ ಮೋಹವನಳಿದ ಯೋಗಿಗೆ
ಮಾಯೆಯೆಂಬುವದಿಲ್ಲವೈ ಪರ
ಕಾಯದವನೆಂದವಗೆ ಸುಸ್ಥಲವಾಯ್ತು ತಿಳಿಯಲ್ಕೆ
ಕಾಯದವಗುಣವಳಿದು ಪರಶಿವ
ಕಾಯವೇ ತಾನಾದ ಬಳಿಕಂ
ಕಾಯವಿದ್ದರು ಹುರಿದ ಬೀಜದ ತೆರದಲಿರುತಿಹನು ॥ ೧೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮಾಚಾರಸ್ಥಲ

ಕೊಲೆಯು ಸುಲಿಗೆಯು ಪುಸಿಯದಿಲ್ಲದೆ
ನೆಲದೊಳಾ ವರ ಬ್ರಹ್ಮಚರ್ಯವು
ಸಲೆ ದಯಾ ಕ್ಷಮೆ ಸತ್ಯ ಪೂಜಾ ಧ್ಯಾನ ಜಪ ತಪವ
ನಲಿಯುತಾಚರಿಸುತ ಶಿವಾಗಮ-
ಗಳಲಿ ಹೇಳಿದ ಹಾಗೆ ವರ್ತಿಸಿ
ತಿಳಿವ ಸಂಗ್ರಹಿಸುವದು ಧರ್ಮಾಚಾರದ ಸ್ಥಲವು ॥ ೧೭ ॥

ಭಾವಾಚಾರಸ್ಥಲ

ಭಾವದಿಂ ಮಾನಸದ ಶುದ್ಧಿಯು
ಭಾವದಿಂದಂ ಕರ್ಮಸಿದ್ಧಿಯು
ಭಾವದಿಂದಲೆ ಸಕಲ ಮನದೀಪ್ಸಿತವು ಎಂದೆನುತ
ಓವಿ ತನ್ನಯ ಹೃದಯ ಪದ್ಮದೊ-
ಳಾವಗಂ ಲಿಂಗವನು ನೆನೆಯುತ
ಭಾವದಿಂ ಶಿವಪೂಜೆಗೈಯಲು ಭಾವದಾಚಾರಂ ॥ ೧೮ ॥

ಜ್ಞಾನಾಚಾರಸ್ಥಲ

ಮೌನಿ ಭಾವಾಚಾರಿಯಾದರು
ಜ್ಞಾನವದನುಂ ಮರೆಯದಿಪ್ಪುದು
ಜ್ಞಾನವಿರ್ದೊಡೆ ಜ್ಞಾನದಾಚಾರವದು ಸಹಜವಲಾ
ಜ್ಞಾನವಿರದಿರೆ ಕರ್ಮವೆಂಬುದು
ಮಾನವಗೆ ಫಲಕಾರಿಯಲ್ಲವು
ಜ್ಞಾನವೇ ತಾ ಭಾವಕಿಂ ಘನವೆಂದು ಪೇಳುವರು ॥ ೧೯ ॥

ಪ್ರಸಾದಿಲಿಂಗಸ್ಥಲ-ಕಾಯಾನುಗ್ರಹಸ್ಥಲ

ತಿಳಿಸುವೆವು ಶಿವನ ಪ್ರಸಾದಿಗೆ
ಸಲುವ ನವವಿಧ ಲಿಂಗದಸ್ಥಲ
ಗಳನು ನೀವುಗಳೀಗ ಚಿತ್ತೈಕಾಗ್ರದಿಂ ಕೇಳಿ !
ಹಲವು ಭಕ್ತರ ಸಲಹಲೋಸುಗ
ಮಲರಹಿತ ಶಿವಯೋಗಿ ಬರುತಿಹ
ನೆಲದೆ ಕಾಯಾನುಗ್ರಹಸ್ಥಲದಲ್ಲಿ ನಿಂದಿಹನು ॥ ೨೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದ್ರಿಯಾನುಗ್ರಹಸ್ಥಲ

ಹರನ ರೂಪಾಗಿರ್ದ ಯೋಗಿಯ
ಶರಿರ ದರ್ಶನದಿಂದ ನರರಿಗೆ
ದೊರಕುವದು ಸಕಲೇಂದ್ರಿಯಂಗಳನುಗ್ರಹವು ನೋಡಾ
ಹೊರಗೆ ವಿಷಯಾದಿಗಳ ನೋಡದೆ
ನಿರುತ ತನ್ನೊಳಹೊರಗೆ ಶಿವನಂ
ನಿರುಕಿಸಲು ಕಳೆವುದದು ಸರ್ವೇಂದ್ರಿಯದ ಮಲವ ॥ ೨೧ ॥

ಪ್ರಾಣಾನುಗ್ರಹಸ್ಥಲ

ಶರಿರದಲಿ ಹರಣವದು ಮುಖ್ಯವು
ಹರನು ಹರಣಾಧಾರನಿರ್ಪನು
ಹರಣ ವಾಯುನಿರೋಧದಿಂ ಶಿವಲಿಂಗದರ್ಶನವು
ಹರಣದಿಂದ್ರಿಯ ಮನೋಗುಣಂಗಳ
ಸರಿಸಿ ಶಿವನೊಳು ಬೆರೆತ ಯೋಗಿಯು
ಕೊರಡು ಕೊನರದ ತೆರದೊಳಾತನು ಶೂನ್ಯನಾಗಿಹನು ॥ ೨೨ ॥

ಕಾಯ ಮತ್ತು ಕರಣಾರ್ಪಣಸ್ಥಲ

ತನುವಿನಭಿಮಾನವನು ತೊಲಗಿಸಿ
ಮನಸಿಜಾರಿಗೆ ತನುವನರ್ಪಿಸೆ
ವಿನುತ ಕಾಯಾರ್ಪಣದ ಸುಸ್ಥಲವೆನಿಸಿಕೊಳ್ಳುವದು
ಮನವು ಬುದ್ಧಿಯು ಚಿತ್ತ ಮೊದಲಾ-
ದನಿತು ಕರಣಾದಿಗಳ ಸುಖವನು
ಸನುಮತಿಸಿ ಶಿವಗರ್ಪಿಸಲು ಕರಣಾರ್ಪಣಸ್ಥಲವು ॥ ೨೩ ॥

ಭಾವಾರ್ಪಣಸ್ಥಲ

ಭೋಗಿ ಪಾತನು ಶಿವನು ಮೇದಿನಿ
ಭೋಗ ವಸ್ತುಗಳೆಲ್ಲ ಶಿವನವು
ಭೋಗಿಸಲು ತಾ ಪ್ರೇರಕಂ ಶಿವನೆಂದು ಭಾವಿಸುತ
ಆಗು ಹೋಗುಗಳೆಲ್ಲ ಶಿವನವು
ಹೀಗೆ ಭಾವಿಸಿ ಸಕಲ ಭಾವವ
ಯೋಗಿಯುರೆ ಶಿವಗರ್ಪಿಸಲು ಭಾವಾರ್ಪಣಸ್ಥಲವು ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿಷ್ಯಸ್ಥಲ

ಪರತರಾಚಾರತ್ವ ನಿಷ್ಠನು
ಪರಸತಿಗೆ ಪರಧನಕೆ ದೂರನು
ಗುರುವಿನಲಿ ಶಿವನಲ್ಲಿ ಯನ್ಯವ ನೆಣೆಸದಿರ್ಪವನು
ತೊರೆದು ವಿಷಯಗಳನ್ನು ತಪ್ಪದೆ
ಗುರುವರನ ಮುಖಕಮಲದಿಂದಲಿ
ಪರಮವಿದ್ಯೆಯ ಕಲಿಯುವಾತನು ಶಿಷ್ಯನೆನಿಸುವನು ॥ ೨೫ ॥

ಶುಶ್ರೂಷಸ್ಥಲ

ಅರುಣ ತೇಜಸದಿಂದ ಪಂಕಜ
ವರಳುವಂದದೆ ಗುರುದಿವಾಕರ
ಕರುಣ ಕಿರಣಗಳಿಂದ ಶಿಷ್ಯನ ಹೃದಯವರಳುವದು
ಗುರು ದಿವಾಕರನುದಯವಾಗಲು
ಭರದಿ ದುರಿತದ ತಿಮಿರ ಹರಿವುದು
ಹರನುಳುಮೆಯ ಪರೋಕ್ಷವಾಗುವದಂತು ನಿಶ್ಚಿತವು ॥ ೨೬ ॥

ಅದುವೆ ಕಾರಣ ಶಿಷ್ಯನೆನಿಪನು
ವಿದಿತ ಗುರುವಿಗೆ ತನುವನೊಪ್ಪಿಸಿ
ಪದುಳದಿಂ ಸೇವೆಯನು ಮಾಳ್ಪದು ಶುಶ್ರೂಷಸ್ಥಲವು
ಚದುರರೈ ನೀವಿಂತು ನಡೆಯುತ
ಮದನ ವೈರಿಯ ಕರುಣ ಪಡೆವುದು
ಮುದದಿ ಗುರು ಸುಶ್ರೂಷೆಗೈವುದು ದೇಹಸಾರ್ಥಕವು ॥ ೨೭ ॥

ಸೇವ್ಯಸ್ಥಲ

ಆವ ಶಿಷ್ಯನು ಭೂಮಿಯಲಿ ಗುರು
ಸೇವೆಯನು ಸದುಭಕುತಿಯಿಂದಲಿ
ಪಾವನಾತ್ಮಕನಾಗಿ ಮಾಡುತೆ ಪಾರಮಾರ್ಥವನು
ಓವಿ ಗಳಿಸಲಿಕವನು ಸದ್ಗುರು
ದೇವನಂದದೆ ಪೂಜ್ಯನೆನಿಪನು
ಭಾವಿಸಲಿಕಿದು ಸೇವ್ಯದಸ್ಥಲವೆಂದು ಪೆಸರಾಯ್ತು ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತ್ಮಸ್ಥಲ

ಶರಣಲಿಂಗಿಗೆ ನವವಿಧದಲಿರು–
ತಿರುವ ಲಿಂಗದಸುಸ್ಥಲಗಳ–
ನ್ನರಿಯುವದು ಮೊದಲಾತ್ಮದಸ್ಥಲವನ್ನು ಪೇಳುವೆವು
ಗುರುವಿನುಪದೇಶವನು ಜೀವನು
ನೆರೆ ಪಡೆಯಲವಗುಣಗಳಳಿವವು
ಮರಳಿ ಜೀವನಿಗಾತ್ಮನೆಂಬಭಿಧಾನ ಲಭಿಸುವದು ॥ ೨೯ ॥

ಅಂತರಾತ್ಮಸ್ಥಲ

ಗೂಡಿನೊಳಗಣ ಪಕ್ಷಿಯಂದದೆ
ಮೋಡದೊಳಗಿನ ಚಂದ್ರನಂದದೆ
ಕೂಡಿಕೊಂಡಿಹನಂತರಾತ್ಮನು ದೇಹದೊಳು ಕಾಣಾ
ನೋಡಲಾತಗೆ ದೇಹ ಗುಣಗಳು
ನಾಡೆ ತೊಲಗಲು ಶಿವಗುಣಗಳಂ
ಸೂಡಿದವನಾಗಿರ್ದಕತದಿಂದಂತರಾತ್ಮನಿವಂ ॥ ೩೦ ॥

ಪರಮಾತ್ಮಸ್ಥಲ

ಶರಧಿಯಲಿ ನೊರೆತೆರೆಗಳುದಯಿಸಿ
ಮರಳಿಯಾ ಶರಧಿಯಲಿ ಲಯಿಸುವ
ತೆರದೊಳೀಧರೆ ವಾರಿವಹ್ನಿಗಳೆಲ್ಲ ಮೊಪಲಿಂಗೆ
ಪರಿಕಿಸಲಿಕಪರುದರದುದಯಿಸಿ
ಮರಳಿ ಲಯಿಸುವ ತಾಣವದನುಂ
ಕರೆಯುವರು ಪರಮಾತ್ಮನಸ್ಥಲವೆಂದು ಆಚಾರ್ಯರ್ ॥ ೩೧ ॥

ನಿರ್ದೇಹಾಗಮಸ್ಥಲ

ಭವದ ತಾಪವನೀಗಿ ಹಮ್ಮನು
ಜವದೆ ತೊಲಗಿಸಿ ಕಾಯದಭಿಮಾ–
ನವನು ಪಿಡಿಯದೆ ಭೇದಬುದ್ಧಿಯನಳಿದು ತನ್ನೊಳಗೆ
ಶಿವನು ತಾನಹೆನೆಂದು ಭಾವಿಸಿ
ಭುವನದಲಿ ಶಿವಯೋಗಿ ಯಿರುತಿರೆ
ಸುವರರೇ ಅದು ಪರಮ ನಿರ್ದೇಹಾಗಮಸ್ಥಲವು ॥ ೩೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರ್ಭಾವಾಗವು ಮತ್ತು ನಷ್ಟಾಗಮುಸ್ಥಲ

ತಾನು ಶಿವನಹನೆಂಬ ಭಾವಂ
ಜ್ಞಾನಿಯೊಳಗದು ಮೂಡದಲೆ ಸಲೆ
ತಾನೆ ತಾನಾಗಿರಲು ನಿರ್ಭಾವಾಗಮುಸ್ಥಲವು
ನಾನು ನೀನೆಂಬುಭಯ ಭಾವನೆ
ನೂನವಿಲ್ಲದೆ ನಷ್ಟವಾಗಲು
ಸೂನುಗಳೆ ಕೇಳಿದುವೆ ನಷ್ಟಾಗಮುವ ಸುಸ್ಥಲವು ॥ ೩೩ ॥

ಆದಿ ಪ್ರಸಾದಿಸ್ಥಲ

ಜಗದ ಸೃಷ್ಟಿಗೆ ಸಕಲ ಭೂತಕೆ
ನಗಜೆಯರಸನು ಮೂಲನೆನಿಪನು
ಬಗೆಯೊಳಾತನ ತೆರದಲೆಸೆಯುವ ಯೋಗಿಪುಂಗವನು
ಮಿಗಿಲೆನಿಪ ಶಿವಶೇಷದಿಂದಲಿ
ಜಗದ ದುಃಖವ ಕಳೆವ ಕತದಿಂ
ಜಗದಿ ಕೇಳಿದಕಾದಿ ಶೇಷಿಯ ತಾಣವೆಂಬುವರು ॥ ೩೪ ॥

ಅಂತ್ಯಪ್ರಸಾದಿ

ಶಿವನ ದರ್ಶನ ಪಡೆಯಲದುವೇ
ಭುವನದೊಳಗುಂ ಕೊನೆಯ ಶೇಷವು
ಸುವಿಮಲನು ಶಿವಯೋಗಿ ಪಡೆವನು ತತ್‌ಪ್ರಸಾದವನು
ಅವನಿಗಿಲ್ಲವು ಮಾಟನೋಟಗ-
ಳವನಿಗಿಲ್ಲವು ಕರ್ಮಬಂಧವು
ಭವ ವಿನಾಶಕನವನು ಜೀವನ್ಮುಕ್ತನೆನಿಸುವನು ॥ ೩೫ ॥

ಸೇವ್ಯಪ್ರಸಾದಿ

ಹರನ ರೂಪಾಗಿರ್ದ ಸದ್ಗುರು
ವರನು ಧರೆಯಲಿ ಸೇವ್ಯನೆನಿಪನು
ಪರಿಕಿಸಲು ಪೂಜಾದಿಕ್ರಿಯೆಗಳೆ ಇಲ್ಲವಿವಗೆನಲು
ನರಸಮೂಹವ ಸಲಹಲೋಸುಗ
ಹೊರಗೆ ಪೂಜೆಯ ಮಾಡುತಿರ್ಪನು
ಪರತರಾನಂದೈಕ್ಯನೀತನ ಸೇವೆ ಮಿಗಿಲಹುದು ॥ ೩೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುವರಗೆ ಸಿರಿ ಚಂದ್ರಶೇಖರ–
ಗೆರಗಿ ಭಕ್ತರು ಇಂತು ನೇಹದಿ
ಕರಮುಗಿದು ಕೇಳಿದರು ಶರಣನಲಿಂಗದಸ್ಥಲವ
ಇರದೆ ಕೇಳೀದ್ವಾದಶಂಗಳು
ಶರಣನಾ ಲಿಂಗಸ್ಥಲಗಳವು
ಪರಿಕಿಸಲು ಮೊದಲಿಂಗೆ ದೀಕ್ಷಾ ಪಾದದುದಕವದು ॥ ೩೭ ॥

ದೀಕ್ಷಾ ಪಾದೋದಕಸ್ಥಲ

ಗುರುವೆ ಪಾದದ ಶಬ್ದಕರ್ಥವು
ಪರಮ ಶಿಷ್ಯನು ಉದಕವೆನಿಪನು
ವರಸುದೀಕ್ಷೆಯೆ ಉಭಯರೈಕ್ಯತೆಯುನ್ನು ಸಾರುವದು
ಚರಣ ಶಬ್ದವು ಮಹಾನಂದವು
ಚರಣದುದಕಂ ಜ್ಞಾನವೆನಿಪುದು
ಸರಸ ಪಾದೋದಕದ ಮರ್ಮವ ತಿಳಿಯುವುದು ಮುಖ್ಯಂ ॥ ೩೮ ॥

ಶಿಕ್ಷಾ ಪಾದೋದಕಸ್ಥಲ

ಗುರುವು ಶಿಷ್ಯರ ಭೇದವಿಲ್ಲದ
ಪರತರಾನಂದೈಕ್ಯ ವೆನಿಪುದು
ಮಿರುಪ ದೀಕ್ಷಾಪಾದದುದಕದ ಸುಸ್ಥಲಂ ತಾನು
ಗುರುವು ಶಿಷ್ಯರ ಸಾಮರಸ್ಯವು
ಭರದೊಳಾಗಲು ಮಹಾನಂದವು
ದೊರೆಯೆ ಶಿಕ್ಷಾ ಪಾದಸಲಿಲವೆಂದು ಪೇಳುವರು ॥ ೩೯ ॥

ಜ್ಞಾನೋದಕ-ಕ್ರಿಯಾನಿಷ್ಪತ್ತಿಸ್ಥಲ

ಜ್ಞಾನ ಗುರುವಿನಕೂಡ ಶಿಷ್ಯನು
ಜ್ಞಾನವನು ಪಡಕೊಂಡು ಗುರುವಿನೊ–
ಳೇನು ಪೇಳಲಿ ಸಾಮರಸ್ಯಜ್ಞಾನ ಸಲಿಲವದು
ಜ್ಞಾನಿ ಕರ್ಮಗಳನ್ನು ಮಾಡಲು
ಹೀನ ಕರ್ಮದ ಬಾಧೆಯಿಲ್ಲವು
ಮಾಣದರಿಯುವದು ಕ್ರಿಯಾ ನಿಷ್ಪತ್ತಿಯಸ್ಥಲವು ॥ ೪೦ ॥

ಭಾವನಿಷ್ಪತ್ತಿಸ್ಥಲ

ಭಾವವುಂ ಮೇಣ್ ಜ್ಞಾನವೆರಡಿವು
ಭಾವಿಸಲು ಮೋಕ್ಷಕ್ಕೆ ಮೂಲವು
ಕೋವಿದರು ತದ್‌ಜ್ಞಾನ ಭಾವವನೆರಡನುಳ್ಳವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓವಿ ಶಿವಯೋಗೀಶನವುಗಳ
ಭಾವದಲಿ ಭಾವಿಸುತೆ ನಲಿವನು
ಭಾವಚಾರಿಯರೂಪ ತಾನಾಗಿರ್ದ ಕಾರಣದಿ ॥ ೪೧ ॥

ಜ್ಞಾನ ನಿಷ್ಪತ್ತಿಸ್ಥಲ

ಅರಿಯಬೇಕಾದುದನು ತನ್ನೊಳ–
ಗರಿತು ಪರಮಾನಂದ ಶರಧಿಯೊ–
ಳಿರುತ ತಾನರಿತುದನು ನೆನೆಯದಲೆ ಸಹಜಿರ್ಪ
ಮೆರೆವ ಯೋಗಿಜ್ಞಾನನಿಷ್ಪ–
ತ್ತಿರುವ ಸುಸ್ಥಲದಲ್ಲಿಯಿರ್ಪನು
ಹರನರಿವೆ ಹರನನುಭವಾನಂದಕ್ಕೆ ಮೂಲವಲಾ ॥ ೪೨ ॥

ಪಿಂಡಾಕಾಶ–ಬಿಂದ್ವಾಕಾಶಸ್ಥಲ

ಶರಿರ ಮಧ್ಯದ ಗಗನದೊಳಗಿರು–
ತಿರುವ ಸುಖರೂಪಾತ್ಮನಾದರು
ನಿರುತ ಪೂರ್ಣಂ ತಾನು ಪಿಂಡಾಕಾಶದಸ್ಥಲವು
ಪರಶಿವನು ತಾನೋರ್ವನಿದ್ದರು
ಪರಿಮಿತನು ತಾನಾಗಿ ಸಕಲರೊ–
ಳಿರಲು ಬಿಂದ್ವಾಕಾಶದಸ್ಥಲವಾದುದೈ ತಿಳಿಯೆ ॥ ೪೩ ॥

ಮಹಾಕಾಶಸ್ಥಲ

ಶರಧಿಯೊಳು ಪುಟ್ಟಿರ್ದ ತೆರೆಗಳು
ಶರಧಿಯಿಂ ಬೇರಾಗಲಾರವು
ಪರಮನೊಳು ಪುಟ್ಟಿರ್ದ ಜಗವಿದು ಭಿನ್ನವಾಗಿರದು
ಪರಶಿವನು ಮೇಣ್ ಮಹಾಯೋಗಿಯು
ಧರೆಯೊಳಿರ್ವರು ಭಿನ್ನರಲ್ಲವು
ಗುರುವರರ್ ಪೇಳಿಹರು ಮಹಾಕಾಶದಸ್ಥಲವ ॥ ೪೪ ॥

ಕ್ರಿಯಾ ಪ್ರಕಾಶಸ್ಥಲ–ಭಾವಪ್ರಕಾಶಸ್ಥಲ

ಚಿನುಮಯನು ತಾನೆಂದು ಭಾವಿಸು–
ತನುದಿನವು ಸಂಧಾನ ಮಾಳ್ಪುದು
ಘನವು ಆದ ಕ್ರಿಯೆ ಪ್ರಕಾಶಸ್ಥಲವಿಹುದು ನೋಡೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುದಿನಂ ಶಿವಯೋಗಿ ಭಾವವು
ಮನಸಿಜಾರಿಯ ಭಾವವಾಗಿರೆ
ಮುನಿಗಳೊರೆವರು ಭಾವತೇಜದ ಸುಸ್ಥಲವಿದೆಂದು || ೪೫ ||

ಜ್ಞಾನಪ್ರಕಾಶಸ್ಥಲ

ಎತ್ತ ನೋಡಿದಡತ್ತ ಜಗಮಂ
ಚಿತ್ತಜಾರಿಯ ರೂಪದಲಿ ಕಾ-
ಣುತ್ತಲಿರುವನು ಯೋಗಿಗದುವೇ ಜ್ಞಾನತೇಜವದು
ಮತ್ತೆ ವಿಷಯಾದಿಗಳ ನೆನೆಯುತೆ
ಕುತ್ತದಲಿ ಬಳಲುವನೆ ಭವದಲಿ
ಚಿತ್ತಭಾವಗಳಲ್ಲಿ ಸುಜ್ಞಾನದ ಪ್ರಕಾಶವಿರಲ್ || ೪೬ ||

ಐಕ್ಯ-ಲಿಂಗಸ್ಥಲ ಸ್ವೀಕೃತಪ್ರಸಾದಿಸ್ಥಲ

ವಿವರದಲಿ ಐಕ್ಯನಲಿ ತೋರುವ
ನವವಿಧದಲಿಹ ಲಿಂಗದಸ್ಥಲ-
ನವುಗಳನು ತಿಳಿಯುವದು ತುಂಬವವಶ್ಯವಾಗಿಹುದು
ಶಿವನರೂಪಾಗಿರ್ದ ಯೋಗಿಯು
ಭುವಿಯ ಭೋಗವನಭವರೂಪದೊ-
ಳವುಗಳಂ ಭೋಗಿಸೆ ಸ್ವೀಕೃತ ಶೇಷದಸ್ಥಲವು || ೪೭ ||

ಶಿಷ್ಟೌದನಸ್ಥಲ

ನಿರುತ ಸರ್ವರೊಳಿರ್ಪ ಮಾಯೆಯು
ವರಮಹಾಲಿಂಗದಲಿ ಬೆರೆಯಲು
ಕರೆವರೈಬಲ್ಲವರು ಶಿಷ್ಟೌದನಸ್ಥಲವೆಂದು
ಶರಧಿಯೊಳಗಾನದಿಗಳಡಗುವ
ತೆರದೊಳಾಮಾಯೆಯದು ಯೋಗಿಯೊ-
ಳಿರದೆ ತದ್‌ಜ್ಞಾನದಲಿ ಬೆರೆಯುವದೆಂದು ಅರಿಯುವದು || ೪೮ ||

ಚರಾಚರ ಲಯಸ್ಥಲ

ಚರ ಅಚರ ಲಯವೆಂಬುವಸ್ಥಲ
ವಿರುವದದು ಶಿವಯೋಗಿಗೆಂತೆನೆ
ಪರಮ ಪರತರ ಲಿಂಗಮಧ್ಯದಿ ಸಮರಸವ ಪಡೆಯೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚರ ಅಚರದ ಪ್ರಪಂಚವೆಲ್ಲವು
ಸರಳವಾಗಿ ತದಾತ್ಮನಲ್ಲಿಯೆ
ಸರಸತೆಯು ಪೊಂದಿರಲು ಲಯಿಸುವದೆಂದು ತಿಳಿಯುವದು ॥ ೪೯ ॥

ಭಾಂಡಸ್ಥಲ

ಸೃಷ್ಟಿ ಸುಸ್ಥಿತಿ ಲಯಗಳಿಗೆ ಮೇ-
ಣಿಷ್ಟ ತನು ಬೆಳಗಲಿಕೆ ಪ್ರಥಮಂ
ಶಿಷ್ಟವೆನಿಪ ವಿಮರ್ಶ ಶಕ್ತಿಯು ಮೂಲವಾಗಿಹುದೂ
ನಷ್ಟವಿಲ್ಲದ ಭಾಂಡದೊಳಗು-
ತ್ಕೃಷ್ಟ ತತ್ತ್ವಗಳಿರಲು ನಿಜಸಂ-
ತುಷ್ಟಿಯಂ ಪೊಂದುವನು ಯೋಗಿಯು ಭಾಂಡದಸ್ಥಲದೊಳ್ ॥ ೫೦ ॥

ಭಾಜನಸ್ಥಲ

ರವಿಗು ರಶ್ಮಿಗು ನೋಡೆ ಮೇಣ್ ತದ್-
ರವಿಗು ಭಿನ್ನತೆ ಬಾರದೆಂದಿಗು
ಶಿವನು ಶಿವೆ ತಾಂ ಭಿನ್ನರಿರದೆ ವಿಮರ್ಶ ಶಕ್ತಿಯನು
ಅವಿರತಂ ಧರಿಸಿರ್ದು ತಮ್ಮೊಳು
ಭುವನ ಮೊದಲಾದಖಿಲ ತತ್ತ್ವ-
ಕ್ಕವರು ಕೇಳಿರಿ ಭಾಜನವು ತಾವಾಗಿ ಶೋಭಿಪರು ॥ ೫೧ ॥

ಅಂಗಾಲೇಪಸ್ಥಲ

ಪರಮ ಪರತರ ಪರಬ್ರಹ್ಮದ
ಪರಮ ತತ್ತ್ವವ ಪಡೆದ ಯೋಗಿಯು
ಶರಿರಕಂಟಿದ ಕರ್ಮದಿಂದೂರಾಗಿ ಯಿರುತಿಹನು
ಇರುವದಿಲ್ಲವು ಪಾಪಪುಣ್ಯಗ-
ಳಿರುವದಿಲ್ಲವು ವಿಧಿನಿಷೇಧಗ-
ಳಿರುವದಿಲ್ಲವು ಸಂಸೃತಿಯ ವಾಸನೆಯು ತಿಲಮಾತ್ರ ॥ ೫೨ ॥

ಸ್ವಪರಾಜ್ಞಸ್ಥಲ

ನಾನು ನೀನೆಂಬುಭಯ ಭ್ರಾಂತಿಯ
ಮಾನಹಾನಿಗಳೆಂಬ ಚಿಂತೆಯ
ನೂನದಿಂಜ್ಞಾತೃತತ್ತ್ವಜ್ಞೇಯದ ಕಲ್ಪನೆಯನಳಿದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾನುರಾಗದಿ ಪರಬ್ರಹ್ಮನೊ–
ಳೀನು ಪೇಳಲಿ ಸಾಮರಸ್ಯವ
ಜ್ಞಾನಿ ಪೊಂದಲಿಕದುವೆ ಸ್ವಪರಾಜ್ಞಸ್ಥಲಂ ನೋಡಾ ॥ ೫೩ ॥

ಭಾವಾಭಾವಲಯಸ್ಥಲ

ಅಲ್ಲಿಯಿಲ್ಲವು ಭಾವವೆಂಬುವ–
ದಲ್ಲಿ ಯಿಲ್ಲವಭಾವವೆಂಬುದು
ಬಲ್ಲ ಶಿವನೊಳು ಸಾಮರಸ್ಯವ ಪೊಂದಿದಾ ಮೇಲೆ
ಇಲ್ಲ ಭುವನದಿ ನಾನು ಎನ್ನನು
ಇಲ್ಲಿರುವೆ ನಾನೆನ್ನನಾತನು
ಬಲ್ಲವರೆ ತಿಳಿಯುವರು ಭಾವಾಭಾವಲಯದಿರವ ॥ ೫೪ ॥

ಜ್ಞಾನ ಶೂನ್ಯಸ್ಥಲ

ನೀರೊಳಗೆ ಬೆರೆದಿರುವ ನೀರದು
ಬೇರೆಯಾಗಲು ಬಲ್ಲುದೇ ಪೇಳ್
ಕ್ಷೀರ ತಾ ಕ್ಷೀರದಲಿ ಕೂಡಿರೆ ಕಡೆಗೆ ಕಾಂಬುವದೆ
ಮಾರಹರ ಶಿವಲಿಂಗದಿ ಶ್ರೀ
ವೀರಶೈವನು ಬೆರೆದ ಬಳಿಕ ವಿ–
ಚಾರಿಸಲು ಬೇರಿಲ್ಲದರಿವು ಜ್ಞಾನಶೂನ್ಯವದು ॥ ೫೫ ॥

ಇದುವೆ ಲಿಂಗಾಂಗಗಳ ಸಮರಸ–
ವಿದುವೆ ಶಿವಜೀವೈಕ್ಯವೆಂಬುವ
ದಿದನು ಸಾಧಿಸಲಿಂತಿಹವು ನೂರೊಂದರ ಸ್ಥಲಗಳ್
ಮದನಹರು ನೀ ತತ್ತ್ವಸಾರವ
ಪದೆದು ಜಗದಾಚಾರ್ಯ ರೇಣುಕ
ಸದುಗತಿಯನಾಶಿಸಿದ ಕುಂಭಜಗರುಪಿದಂ ಮೊದಲು ॥ ೫೬ ॥

ಚಂದ್ರಶೇಖರ ಗುರುವರಂ ತಾ–
ನಂದು ಭಕ್ತಾವಳಿಗೆ ಸಂತಸ–
ದಿಂದ ನೂರೊಂದು ಸ್ಥಲಗಳನ್ನಿಂತು ಬೋಧಿಸಲು
ಒಂದುನೂರೊಂದಾದ ಪರಿಯನು
ತಂದೆ ತಿಳುಹಿಸಿ ಕರುಣಿಸಿದೆ ನೀ–
ನೆಂದು ಕೊಂಡಾಡುತ್ತ ಮರಳಿತು ಭಕ್ತಸಂದೋಹಂ ॥ ೫೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರದಲೀ ಗುರುಚರಿತ್ರವ-
ನೋದುವುಸುರುವ ಕೇಳ್ವಸುಜನರಿ-
ಗಾ ದಯಾಮಯನಾದ ವಿಶ್ವಾರಾಧ್ಯ ಗುರುದೇವಂ
ಬಾಧೆಗಳ ಪರಿಹರಿಸುತಾರೋ-
ಗ್ಯಾದಿಭಾಗ್ಯವ ಕರುಣಿಸುವನ್ನೈ
ಮೇದಿನಿಯಲಿರುವನ್ನೆಗಂ ಕಾಪಾಡುವಂ ಬಿಡದೆ ॥ ೫೮ ॥

ಮರಬಜಡೆಮಠದೊಡೆಯನಾದರು
ಸಿರಿಗುಡೂರದಿ ಬಂದು ನೆಲಸುತೆ
ಹರಮತವಸೇವಿಸುವ ಗಂಗಾಧರ ಶಿವಾಚಾರ್ಯಂ
ಹರುಷದಿಂ ಭ್ರೂಲತೆಯ ನವಪುರ-
ದಿರುತ ಯೋಗಾನಂದ ತುಂದಿಲ-
ನೊರೆದನೀಕೃತಿಯನು ಜಗದ್ಗುರು ಸತ್‌ಪರಂಪರೆಯು ॥ ೫೯ ॥

ಇಂತು ದ್ವಾದಶಾಧ್ಯಾಯ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7182

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಧರ್ಮದ ಪಂಚಪೀಠಗಳಲ್ಲೊಂದಾದ ಕಾಶೀ ಪೀಠವು ಬಹುಪ್ರಾಚೀನ. ಕೃತಯುಗದಿಂದ ಆರಂಭಗೊಂಡ ಈ ಪರಂಪರೆ ಕಲಿಯುಗದುದ್ದಕ್ಕೂ ಸಮೃದ್ಧ. ಕೃತಯುಗದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರಿಂದ ಮೊದಲ್ಗೊಂಡು ಪ್ರಸ್ತುತ ಪೀಠದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರ ವರೆಗೆ ಈ ಪೀಠದ ಪರಂಪರೆ ತುಂಬ ವ್ಯಾಪಕ.

ಕಾಶೀ ಪೀಠ 'ಜ್ಞಾನಪೀಠ' ವೆಂದು ಪ್ರಖ್ಯಾತ. ಈ ಪೀಠಕ್ಕೆ ಕಾಶಿಯ ಜಯನಂದ ದೇವರಾಜ ಮಹಾರಾಜರು ದಾನದತ್ತಿ ನೀಡಿದ ಉಲ್ಲೇಖ ಸ್ಮರಣೀಯ. ಮಹಮ್ಮದೀಯ ಬಾದಶಹರು, ಚಕ್ರವರ್ತಿಗಳು ಈ ಪೀಠಕ್ಕೆ ದಾನ–ದತ್ತಿ ನೀಡಿರುವುದು ಒಂದು ವಿಶ್ವದಾಖಲೆ. ವೀರಶೈವ ತತ್ತ್ವಬೋಧನೆ, ಜ್ಞಾನಾರ್ಜನೆಯ ವೃದ್ಧಿ ಈ ಮಹಾ ಪೀಠದ ಮಹಾಕಾರ್ಯಗಳು.

ಇದುವರೆಗೆ ಶಾಸನಗಳಲ್ಲಿ ದಾಖಲಾಗಿದ್ದ ಈ ಪೀಠದ ಪರಂಪರೆ ಗ್ರಂಥಸ್ಥವಾಗಿ ಇತಿಹಾಸದಲ್ಲಿ ದಾಖಲಾಗುತ್ತಿರುವುದು ವೀರಶೈವ ಸನಾತನ ಧರ್ಮದ ಒಂದು ಪುಣ್ಯ ವಿಶೇಷ. ಇಂತಹ 'ಮಹಾಕಾರ್ಯ' ಮಾಡಿದ ಶ್ರೇಯಸ್ಸು ಗುಡೂರು–ಮೊರಬದ ಶ್ರೀ ಷ. ಬ್ರ. ಗಂಗಾಧರ ಶಿವಾಚಾರ್ಯಸ್ವಾಮಿಗಳಿಗೆ ಸಲ್ಲಬೇಕು. ಕಾಶಿ ಪೀಠದ ಈ ಪರಂಪರಾ ಪುರಾಣ ಸನಾತನ ಹಾಗೂ ವಿನೂತನ ಯುಗದ 'ಧಾರ್ಮಿಕ ಸಂಗಮ'ವೆನ್ನಬೇಕು.

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ ✆ 35509

CC0. In Public Domain. Jangamwadi Math Collection, Varanasi